73ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳು

# ಕರ್ನಾಟಕ ವಿಕಾಸ

## Karnataka Vikas

ಆಗಸ್ಟ್ August 2019



ನೂತನ ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಪ್ರಮಾಣ ವಚನ




15ನೇ ಕೇಂದ್ರ ಹಣಕಾಸು ಆಯೋಗ ಸಮಿತಿ ಸಭೆ




ನೆಲ ಮತ್ತು ಜಲ ನಿರ್ವಹಣೆ



ನೆಲ ಮತ್ತು ಜಲ ನಿರ್ವಹಣೆ ಕಾರ್ಯಗಾರ



| | |
|---|---|
| ಆಗಸ್ಟ್ 2019 | ಸಂಪುಟ : 60 |
| | Volume : 60 |
| AUGUST 2019 | ಸಂಚಿಕೆ : 09 |
| | Issue : 09 |


# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ




## ಈ ಸಂಚಿಕೆಯೊಳಗೆ


| | | |
|---|---|---|
| ಸಚಿವಾಲಯ ಸಂದೇಶ | | |
| ವರದಿ | – ಬಿ.ನಿಜಲಿಂಗಪ್ಪ | 8 |
| | – ಹೆಚ್.ವೇಣುಗೋಪಾಲ್ | 11 |
| | – ಜಿ. ಜಗದೀಶ ಭಾ.ಆ.ಸೇ | 16 |
| | – ಎಂ.ಕೆ.ಕೆಂಪೇಗೌಡ | 18 |
| | – ಕೆ. ಚೇತನ್ | 21 |
| | – ಡಾ.ಉಮೇಶ ಸಿ.ಜಿ. | 25 |
| | – ಬಂಡೆಪ್ಪ ಜಿ. ತೇಲಿ | 27 |
| | – ಎಸ್.ಸಿ. ದೇವರಮನಿ | 30 |
| ಯಶೋಗಾಥೆ | – ಸುಶೀಲ | 34 |
| | – ಮಾದೇಶ | 36 |
| ಕಾವ್ಯ | – ಕೆ.ವಿ.ಅಮರನಾಥ್ | 38 |
| ಸುತ್ತೋಲೆ | | 40 |
| ಕರ್ನಾಟಕ ಸರ್ಕಾರದ ನಡವಳಿಗಳು | | 43 |



ಪ್ರಕಾಶಕರು
ಎಲ್.ಪಿ ವಿರೇಶ್
ನಿರ್ದೇಶಕರು (ಪಂ.ರಾಜ್) ಹಾಗೂ ಪದನಿಮಿತ್ತ
ಸರ್ಕಾರ ಉಪ ಕಾರ್ಯದರ್ಶಿ

ಪ್ರಧಾನ ಸಂಪಾದಕರು
ಡಾ|| ಬೂವನಹಳ್ಳಿ ನಾಗರಾಜ್
ನಿರ್ದೇಶಕರು, ಗ್ರಾಮೀಣ ಮೂಲಭೂತ ಸೌಕರ್ಯ
ಹಾಗೂ ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿ

ಮುಖ್ಯ ಸಂಪಾದಕರು ಹಾಗೂ ಸಾರ್ವಜನಿಕ
ಸಂಪರ್ಕಾಧಿಕಾರಿ
ಗಗನ್ ಎ.ಎಸ್

ಸಹಾಯಕರು ಸಂಪಾದಕರು
ಆಗ್ನೇಸ್ ಮೇರಿ

ವ್ಯವಸ್ಥಾಪಕರು
ಹೆಚ್.ಬಿ. ಗುರುಸ್ವಾಮಿ


### ವಾರ್ಷಿಕ ಚಂದಾ

ವ್ಯಕ್ತಿಗಳಿಗೆ ರೂ.100/–
ಸಂಸ್ಥೆಗಳಿಗೆ ರೂ.120/–
ಬಿಡಿ ಪ್ರತಿ ರೂ.10/–

ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ಸ್ಪಷ್ಟ ಅಂಚೆ ವಿಳಾಸ ಪಿನ್‌ಕೋಡ್‌ನೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.

### ಕಚೇರಿ ವಿಳಾಸ


ಮುಖ್ಯ ಸಂಪದಾಕರು, ಕರ್ನಾಟಕ ವಿಕಾಸ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್
ರಾಜ್ ಇಲಾಖೆ, ನಂ.309,
3ನೇ ಮಹಡಿ, ಗೇಟ್ ನಂ.01,
ಬಹುಮಹಡಿಗಳ ಕಟ್ಟಡ,
ಡಾ ಅಂಬೇಡ್ಕರ್ ಬೀದಿ.
ಬೆಂಗಳೂರು – 560 001
ದೂರವಾಣಿ : 080–22353857


### ವಿಶೇಷ ಸೂಚನೆ

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ
www.rdpr.kar.nic.in ನಲ್ಲಿ ಪತ್ರಿಕೆಯು ಲಭ್ಯವಿರುತ್ತದೆ
Email:kvrdpr@gmail.com

# ಪತ್ರಿಕೆ ಕುರಿತು ನಿಮ್ಮ ನುಡಿ




ಮಾನ್ಯರೆ,

2019ರ ಜುಲೈ ಸಂಚಿಕೆಯಲ್ಲಿ ಸಚಿವಾಲಯದಿಂದ ಸರ್ಕಾರದ ಪ್ರಧಾನ ಕಾರ್ಯದರ್ಶಿ ಸ್ವಚ್ಛ ಮೇವ ಜಯತೇ, ಜಲಾಮೃತ, ಕರ್ನಾಟಕ ಅಭಿವೃದ್ಧಿ ಕಾರ್ಯಗಳು, ರಾಜ್ಯ ಹಣಕಾಸು ಆಯೋಗದ ಅನುದಾನ ಬಳಕೆ-ಯ ಗ್ರಾಮ ತಾಲ್ಲೂಕು, ಜಿಲ್ಲಾ ಪಂಚಾಯತಿಗಳಿಗೆ ಹಾಗೂ ಜನತೆಗೆ ಅರಿವು ಮೂಡಿಸಿದ್ದು ತುಂಬಾ ಸಂತೋಷ. ಇವೆಲ್ಲಾ ಕಾರ್ಯಗತವಾಗಬೇಕೆಂಬುದು ನಮ್ಮೆಲ್ಲರ ಆಶಯ. ಗ್ರಾಮೀಣಾಭಿವೃದ್ಧಿ ಸಚಿವರು ಹಾಗೂ ಪಂ.ರಾಜ್ ಕಾರ್ಯದರ್ಶಿಗಳು ರಾಜ್ಯದ ಶಿವಮೊಗ್ಗ, ಮೈಸೂರು ಮತ್ತು ದಾವಣಗೆರೆ ಜಿಲ್ಲೆಗಳಿಗೆ ಪ್ರವಾಸ ಕೈಗೊಂಡು ಅಲ್ಲಿನ ಕುಂದುಕೊರತೆ ವಿಚಾರಿಸಿ ಪರಿಹಾರ ಸೂಚಿಸಿದ್ದು, ಶ್ಲಾಘನೀಯ. ಬರ ಪರಿಸ್ಥಿತಿ ಸುಧಾರಣೆಯ ಜಲಾಮೃತ ಯೋಜನೆ ಕೈಗೊಳ್ಳಲು ಪಂಚಾಯತಿಗಳ ಜನತೆಗೆ ಜಾಗೃತಿ ಅರಿವು, ಸಲಹೆಗಳು ನೀಡಿದ್ದು ಉತ್ತಮ. ಪ್ರತ್ಯೇಕ ಸ್ಯಾಟ್‌ಕಾಂ ಸಂವಾದ ಕಾರ್ಯ, ತಂತ್ರಾಂಶದ ಸಲಹಾ ಕಾರ್ಯಗಾರ, ಮಕ್ಕಳ ಗ್ರಾಮ ಸಭೆ, ಸುತ್ತೋಲೆ, ಸಭೆ ಸಮಾರಂಭ, ಲೇಖನಗಳು, ಜ್ಞಾನ, ಅರಿವು, ಚೇತನ, ಉತ್ಸಾಹ, ಆಸಕ್ತಿ ಮೂಡಿಸಿದೆ.

● **ಮರಿದೇವರ ಸಿದ್ದಪ್ಪ,**
ಚೌಡಾಪುರ ಅಂಚೆ, ಕೂಡ್ಲಿಗೆ ತಾಲ್ಲೂಕು, ಬಳ್ಳಾರಿ.

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ವತಿಯಿಂದ ಪ್ರಕಟವಾಗುತ್ತಿರುವ ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಪ್ರತಿ ಮಾಹೆ ಹೊಸ ಹೊಸ ವಿಷಯಗಳೊಂದಿಗೆ ಉತ್ತಮ ಮಾಹಿತಿಯೊಂದಿಗೆ ಪ್ರಕಟಗೊಳ್ಳುತ್ತಿದ್ದು ಓದುಗರಲ್ಲಿ ಆಸಕ್ತಿ ಮೂಡಿಸಿದೆ. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಇಲಾಖೆ ಯೋಜನೆಗಳು ಸೇರಿದಂತೆ ವಿವಿಧ ಮಾಹಿತಿಯೊಂದಿಗೆ ಸಚಿವಾಲಯ ಸಂದೇಶವನ್ನು ರಾಜ್ಯದ ಜನರಿಗೆ ತಲುಪುವಂತೆ ಮಾಡಿದ್ದಾರೆ. ಪತ್ರಿಕೆಯಲ್ಲಿ ಪ್ರಕಟಗೊಳ್ಳುವ ಪ್ರತಿಯೊಂದು ಮಾಹಿತಿ ಉಪಯುಕ್ತವಾಗಿದ್ದು, ಓದುಗರ ಮನಸೆಳೆಯುವಲ್ಲಿ ಒಂದು ಒಳ್ಳೆಯ ಪುಸ್ತಕವಾಗಿದೆ.

● **ಮೋನಿಕ** ಇನ್‌ಫೋಸಿಸ್, ಬೆಂಗಳೂರು.

2019ರ ಜುಲೈ ಸಂಚಿಕೆಯು ಬಹಳ ಆಕರ್ಷಕವಾಗಿ ಮೂಡಿಬಂದಿದ್ದು, ಪತ್ರಿಕೆಯಲ್ಲಿನ ಲೇಖನಗಳು ಉಪಯುಕ್ತವಾಗಿವೆ. ರಾಜ್ಯದ ಬರಪರಿಸ್ಥಿತಿ ನಿವಾರಣೆಗಾಗಿ 2019 ವರ್ಷವನ್ನು ಜಲವರ್ಷವೆಂದು ಘೋಷಿಸಿದ್ದು, ಜಲಸಾಕ್ಷರತೆ, ಜಲಮೂಲಗಳ ಸಂರಕ್ಷಣೆ, ಜಲಮಿತ ಬಳಕೆ ಮತ್ತು ಗಿಡನೆಟ್ಟು ಬೆಳಸುವುದರ ಬಗ್ಗೆ ಸರ್ಕಾರವು ಜನತೆಯಲ್ಲಿ ಅರಿವು ಮೂಡಿಸಲು ಹೊರಟಿರುವುದು ಒಳ್ಳೆಯ ಪ್ರಯತ್ನವೇ ಸರಿ. ಇಲಾಖೆಯ ಸಚಿವರು ಹಾಗೂ ಕಾರ್ಯದರ್ಶಿಗಳು ರಾಜ್ಯದ ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಿ ಅಲ್ಲಿನ ಬರ ಪರಿಸ್ಥಿತಿ ಬಗ್ಗೆ ಪರಿಶೀಲನೆ ನಡೆಸುತ್ತಿರುವುದು ನಮ್ಮ ಅಧಿಕಾರಿಗಳ ಕಾರ್ಯವೈಖರಿಯನ್ನು ಹೆಚ್ಚಿಸುವುದಕ್ಕೆ ಪ್ರೇರೇಪಿಸಿದಂತಾಗುತ್ತದೆ.

● **ಕುಮಾರಿ ಸಿಂಚನ** ಹೋಲಿ ಕ್ರೇಸೆಂಟ್ ಶಾಲೆ, ರಾಮನಗರ.

ಸಚಿವಾಲಯದಿಂದ

# ಸಂದೇಶ



(ಎಲ್.ಕೆ.ಅತೀಕ್)
ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿ

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು.

ಪ್ರಿಯ ಬಂದುಗಳೇ,

## ರಾಜ್ಯದಲ್ಲಿನ ಪ್ರವಾಹ ಮತ್ತು ಬರಗಾಲ ನಿರ್ವಹಣೆಯಲ್ಲಿ ಎಂಜಿಎನ್‌ಆರ್‌ಇಜಿ ಯೋಜನೆಯ ಪಾತ್ರ....

ರಾಜ್ಯದಲ್ಲಿ ಹಲವು ತಾಲ್ಲೂಕುಗಳು ಬರಗಾಲದಿಂದ ಕಂಗೆಟ್ಟಿದ್ದರೆ ಇನ್ನು ಕೆಲವು ತಾಲ್ಲೂಕುಗಳು ಪ್ರವಾಹದಿಂದ ಜರ್ಜರಿತಗೊಂಡಿವೆ. ಈ ಸಂಕಷ್ಟದ ಸಮಯದಲ್ಲಿ ಪಂಚಾಯತ್ ರಾಜ್‌ನ ಮೂರು ಹಂತದ ಅಧಿಕಾರಿಗಳು ಗ್ರಾಮೀಣ ಜನರು ಕೆಲಸ ಹರಸಿ ಗುಳೇ ಹೋಗದಂತೆ ಮತ್ತು ದುಡಿಯುವ ಕೈಗಳಿಗೆ ಕೆಲಸ ನೀಡುವ ಮಹತ್ವದ ಜವಾಬ್ದಾರಿ ಹೊಂದಿರುತ್ತಾರೆ. ಸರ್ಕಾರವು 2019-20ನೇ ಸಾಲಿಗೆ ಇಲಾಖಾವಾರು ಮಹಾತ್ಮಗಾಂಧಿ ನರೇಗಾ ಯೋಜನೆಯೊಂದಿಗೆ ಇಲಾಖೆಗಳ ಯೋಜನೆಗಳಿಗೆ ಮೀಸಲಿರಿಸಿದ ಅನುದಾನದೊಂದಿಗೆ ಒಗ್ಗೂಡಿಸುವಿಕೆ ಮೂಲಕ ಯೋಜನೆಯನ್ನು ಅನುಷ್ಠಾನ ಮಾಡಲು ಎಂಜಿಎನ್‌ಆರ್‌ಇಜಿಎ ಅಧಿನಿಯಮ-1 ರಲ್ಲಿ ಅವಕಾಶ ಮಾಡಿದ್ದು, 260 ಕಾಮಗಾರಿಗಳಲ್ಲಿ (Permissible works) 181 ನೈಸರ್ಗಿಕ ಸಂಪನ್ಮೂಲ ನಿರ್ವಹಣಾ ಕಾಮಗಾರಿಗಳಾಗಿದ್ದು, ಇದರಲ್ಲಿ 84 ಕಾಮಗಾರಿಗಳು ನೀರು ನಿರ್ವಹಣಾ ಕಾಮಗಾರಿಗಳಾಗಿರುತ್ತವೆ. ಅಧಿಕ ಸಂಖ್ಯೆಯಲ್ಲಿ ಕೃಷಿ ಹೊಂಡ, ಕೊಳವೆ ಬಾವಿ ಹಾಗೂ ಇತರೆ ನೀರು ಸಂರಕ್ಷಣಾ ಕಾಮಗಾರಿಗಳಿಗೆ ಒತ್ತು ನೀಡುವುದು. ಬಡತನ ರೇಖೆಯ ಕುಟುಂಬಗಳು, ಸುಸ್ಥಿರ ಕೃಷಿ ಜೀವನಾಧಾರ ನಡೆಸಲು ಅನುಕೂಲವಾಗುವಂತೆ 164 ಕೃಷಿ ಹಾಗೂ ಕೃಷಿ ಸಂಬಂಧಿತ ಚಟುವಟಿಕೆಗಳನ್ನು ಅನುಷ್ಠಾನಿಸಲು ಅವಕಾಶ ಮಾಡಲಾಗಿದ್ದು, ಅನುಷ್ಠಾನಾಧಿಕಾರಿಗಳು ಈ ಸಂಬಂಧದಲ್ಲಿ ಅವಶ್ಯ ಮತ್ತು ಸೂಕ್ತ ತಯಾರಿಯೊಂದಿಗೆ ಯೋಜನೆಯ ಕಾರ್ಯಕ್ರಮ ಅನುಷ್ಠಾನದ ಮೂಲಕ ಕೆಲಸ ಅರಿಸಿ ಬರುವ ಕುಟುಂಬಗಳಿಗೆ ಕೂಲಿ ನೀಡಲು ಸೂಚಿಸುತ್ತೇನೆ.

## ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿ....

ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಕಾರ್ಯವಿಧಾನಗಳ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಆಯಾ ತಾಲ್ಲೂಕಿನ ಸಮಗ್ರ ಅಭಿವೃದ್ಧಿಗೆ ಮೂಲ ಕೇಂದ್ರವಾದ ಪ್ರತಿ ಗ್ರಾಮಗಳ ಅಭಿವೃದ್ಧಿಗಾಗಿ ಪ್ರತಿ ವಾರ್ಡಿನಲ್ಲಿ ಸ್ಥಳೀಯ ಸಂಪನ್ಮೂಲವನ್ನು ಗಮನದಲ್ಲಿಟ್ಟುಕೊಂಡು ಸ್ಥಳೀಯ ಅವಶ್ಯಕತೆಗಳನ್ನು ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಗುರುತಿಸಲು ಜನಸಂಪರ್ಕ ಸಭೆಯ ಮುಖಾಂತರ ಆದ್ಯತಾ ಪಟ್ಟಿಗಳನ್ನು ಸಿದ್ಧಪಡಿಸಿ

ಇವುಗಳನ್ನು ವಾರ್ಡ ಸಭೆ/ಗ್ರಾಮ ಸಭೆಗಳಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಬೇಕು ಹಾಗೂ ರಾಜ್ಯ ಸರ್ಕಾರವು ಈಗಾಗಲೇ ಅನುಮೋದಿಸಿರುವ "ನಮ್ಮ ಗ್ರಾಮ ನಮ್ಮ ಯೋಜನೆ" ಪ್ರಕ್ರಿಯೆಯನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ಪ್ರತಿಯೊಂದು ತಾಲ್ಲೂಕು ಪಂಚಾಯತಿಯು ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತ್‌ಗಳ ಯೋಜನೆಗಳನ್ನು ಮತ್ತು ತಾಲ್ಲೂಕು ವ್ಯಾಪ್ತಿಯ ಇತರೆ ಇಲಾಖೆಗಳ ಜಿಲ್ಲಾ ವಲಯದ ಅನುದಾನವನ್ನು ಸೇರಿದಂತೆ ಯೋಜನೆಗಳನ್ನು ಸಿದ್ಧಪಡಿಸಿ ಕ್ರೋಢೀಕರಿಸಿ ಸಭೆಗೆ ಸಲ್ಲಿಸುವುದು ಹಾಗೂ ತಾಲ್ಲೂಕು ವ್ಯಾಪ್ತಿಯಲ್ಲಿರುವ ಪಟ್ಟಣ ಪಂಚಾಯತಿ ಹಾಗೂ ಪುರಸಭೆಗಳು ಆಯಾ ಸಂಸ್ಥೆಗಳಿಗೆ ಲಭ್ಯವಿರುವ ಅನುದಾನದ ಸಂಪನ್ಮೂಲ ಗುಚ್ಛವನ್ನಾದರಿಸಿ ತಮ್ಮ ಸಂಸ್ಥೆಯ ಅಭಿವೃದ್ಧಿ ಯೋಜನೆಯನ್ನು ಸಮಿತಿಯ ಅನುಮೋದನೆಗೆ ಸಲ್ಲಿತಕ್ಕದ್ದು. ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯು ಇಡೀ ತಾಲ್ಲೂಕಿನ ಸಮಗ್ರ ಅಭಿವೃದ್ಧಿ ಯೋಜನೆಯ ಕರಡು ಸಿದ್ಧಡಿಸುವುದು ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ತಾಲ್ಲೂಕು ಪಂಚಾಯತ್ ಹಾಗೂ ಸಂಬಂಧಿಸಿದ ನಗರಾಭಿವೃದ್ಧಿ ಸಂಸ್ಥೆಗಳ ಎಲ್ಲಾ ಚುನಾಯಿತ ಪ್ರತಿನಿದಿಗಳು, ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಎಲ್ಲಾ ರೀತಿಯ ಆಡಳಿತಾತ್ಮಕ ಸಹಾಕರ ನೀಡುತ್ತೀರೆಂದು ಆಶಿಸುತ್ತೇನೆ.

## ಜಲ ಮತ್ತು ನೆಲ ನಿರ್ವಹಣೆ....

ದಶಕಗಳಿಂದ ಕರ್ನಾಟಕ ರಾಜ್ಯವು ಬರಗಾಲ ಹಾಗೂ ಸತತ ಜಲ ಸಂಕಷ್ಠದಿಂದ ಬಳಲುತ್ತಿದ್ದು, ಇದಕ್ಕೆ ಪರಿಹಾರವಾಗಿ ಇದೀಗ ಕರ್ನಾಟಕ ಸರ್ಕಾರ ವರ್ಷ 2019 ನ್ನು ಜಲ ವರ್ಷ ಎಂದು ಘೋಷಿಸಿದೆ. ಇದರೊಂದಿಗೆ ಜಲಾಮೃತ ಎಂಬ ಮಹತ್ವಾಕಾಂಶೆ ಯೋಜನೆಯನ್ನು ಘೋಷಿಸಿ ಅನುಷ್ಠಾನಗೊಳಿಸುತ್ತಿದೆ. ಇಲ್ಲಿಯವರೆಗೂ ಜಲ ಸಂಕಷ್ಠವನ್ನು ಪರಿಹರಿಸುವ ಮಾತುಗಳನ್ನಾಡುತ್ತಾ ಬಂದಿದ್ದು, ಇದೀಗ ಸಮಸ್ಯೆಗೆ ಪರಿಹಾರವಾಗಿ ಜಲಾಮೃತ ಯೋಜನೆ ರೂಪದಲ್ಲಿ ಒಂದು ಪ್ರಕ್ರಿಯೆಯನ್ನು ಪ್ರಾರಂಭಿಸಿದೆ. ಜಲ ನೆಲ ಸಂರಕ್ಷಣೆಯಲ್ಲಿ ಲಭ್ಯವಿರುವ ವೈಜ್ಞಾನಿಕ ತಂತ್ರಜ್ಞಾನಗಳನ್ನು ಬಳಸಿಕೊಳ್ಳುವುದರ ಜೊತೆಗೆ ಸಮುದಾಯ ಸಹಭಾಗಿತ್ವದಲ್ಲಿ ಈ ಯೋಜನೆ ಅನುಷ್ಠಾನಗೊಳಿಸಲಾಗುವುದು. ಕರ್ನಾಟಕದಲ್ಲಿ ಮಳೆಯು ಸೀಮಿತ ದಿನಗಳ ಅವಧಿಯಲ್ಲಿ ಆಗುತ್ತಿದ್ದು, ಅದನ್ನು ವರ್ಷವಿಡೀ ಬಳಸಲು ಅನುಕೂಲವಾಗುವಂತೆ ಜಲ ಸಂರಕ್ಷಣೆ ವಿಧಾನಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಜಲಾಮೃತ ಯೋಜನೆಯ ವಿವಿಧ ಆಯಾಮಗಳಾದ ಜಲ ಮೂಲಗಳ ಸೃಜನೆ, ಪುನಶ್ಚೇತನ, ಜಲ ಸಾಕ್ಷರತೆ, ನೀರಿನ ಸದ್ಬಳಕೆ ಹಾಗೂ ಹಸಿರೀಕರಣ ಹಾಗೂ ಜಲಾಮೃತ ಕುರಿತಂತೆ ಸಮಾಜದ ವಿವಿಧ ಸಮುದಾಯಗಳ ಅವಶ್ಯಕತೆಗಳನ್ನು ಪೂರೈಸಲು ಕೆರೆಗಳ ಅಭಿವೃದ್ಧಿ, ಚೆಕ್‌ಡ್ಯಾಂ ನಿರ್ಮಾಣ, ಜಲ ಸಾಕ್ಷರತೆ, ಕುಡಿಯುವ ನೀರು, ಅರಣ್ಯೀಕರಣ ಮಾಡಬೇಕಾಗಿರುತ್ತದೆ.

ಈ ನಿಟ್ಟಿನಲ್ಲಿ ಜಲಾಮೃತ ಯೋಜನೆ ಅಂಗವಾಗಿ ಜಲ, ನೆಲ, ಅರಣ್ಯ ಸಂರಕ್ಷಣೆ ಕುರಿತು ಜನ ಸಾಮಾನ್ಯರಲ್ಲಿ ತಿಳುವಳಿಕೆ ನೀಡುವ ಉದ್ದೇಶದಿಂದ ಒಂದು ದಾರಿ ದೀಪವಾಗಿ ತಾಂತ್ರಿಕ ಕೈಪಿಡಿ ಸಿದ್ಧಪಡಿಸಲಾಗುತ್ತಿದ್ದು, ರಾಜ್ಯದ ನುರಿತ ಪರಿಸರ, ಜಲ ನೆಲ ತಜ್ಞರಿಂದ ವೈಜ್ಞಾನಿಕ ವಿಷಯಗಳನ್ನು ಸಂಗ್ರಹಿಸಲಾಗಿದ್ದು, ಇವುಗಳನ್ನು ಚರ್ಚಿಸಿ ಪರಿಷ್ಕರಿಸಿ ಜಲಾಮೃತ ತಾಂತ್ರಿಕ ಕೈಪಿಡಿಯನ್ನು ಸಿದ್ಧಪಡಿಸಲಾಗುವುದು. ಜಲಾಮೃತ ಯೋಜನೆಯು ದೇಶಕ್ಕೆ ಮಾದರಿಯಾಗಲಿದ್ದು, ಕೇವಲ ಸರ್ಕಾರದ ಯೋಜನೆಗಳಲ್ಲಿ ಒಂದಾಗಿರದೇ ವಿಶಾಲ ಜನ ಸಮುದಾಯಗಳನ್ನು ಒಳಗೊಂಡು ಕರ್ನಾಟಕದ ಜಲ ಸುಭದ್ರತೆಗೆ ನಾಂದಿಯಾಗಲಿದೆ. ನಾಡಿನ ಜಲ ಸುಭದ್ರತೆಗೆ ಕಾಣಿಕೆಯಾಗಲಿದೆ ಎಂದು ಹೇಳಲು ಹರ್ಷಿಸುತ್ತೇನೆ.

(ಎಲ್.ಕೆ.ಅತೀಕ್)



# ಪರಿಚಯ

ಸನ್ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪರವರು ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಬೂಕನಕೆರೆ ಗ್ರಾಮದಲ್ಲಿ ಶ್ರೀ.ಸಿದ್ದಲಿಂಗಪ್ಪ ಮತ್ತು ಶ್ರೀಮತಿ.ಪುಟ್ಟತಾಯಮ್ಮ ಇವರ ಮಗನಾಗಿ 27 ಫೆಬ್ರವರಿ 1943 ರಂದು ಜನಿಸಿದರು. ಇವರು ಮಂಡ್ಯ ಜಿಲ್ಲೆಯ ಪಿಇಎಸ್ ಕಾಲೇಜಿನಲ್ಲಿ ಪದವಿ ಪೂರ್ವ ಶಿಕ್ಷಣ ಪಡೆದಿರುತ್ತಾರೆ.

## ರಾಜಕೀಯ ಜೀವನ

1975ರಲ್ಲಿ ಶಿಕಾರಿಪುರ ನಗರ ಪಾಲಿಕೆಗೆ ಚುನಾಯಿತರಾದರು ಹಾಗೂ 1977 ರಲ್ಲಿ ನಗರ ಪಾಲಿಕೆ ಅಧ್ಯಕ್ಷರಾಗಿ ನೇಮಕಗೊಂಡರು. 1983 ರಲ್ಲಿ ಶಿಕಾರಿಪುರ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಮೊದಲ ಬಾರಿಗೆ ವಿಧಾನಸಭೆಗೆ ಪ್ರವೇಶಿಸಿದರು. 1985ರಲ್ಲಿ 2ನೇ ಬಾರಿ 1989ರಲ್ಲಿ 3ನೇ ಬಾರಿ ಶಾಸಕರಾಗಿ ಚುನಾಯಿತರಾದರು ಹಾಗೂ 1994ರಲ್ಲಿ 4ನೇ ಬಾರಿ ಚುನಾಯಿತರಾಗಿ ವಿಧಾನಸಭೆಯ ಪ್ರತಿಪಕ್ಷ ನಾಯಕರಾದರು. 2000 ರಿಂದ 2004ರ ವರೆಗೆ ವಿಧಾನಪರಿಷತ್ ಸದಸ್ಯರಾಗಿ ಕಾರ್ಯನಿರ್ವಹಿಸಿದರು.

2004ರಲ್ಲಿ 5ನೇ ಬಾರಿ ವಿಧಾನಸಭೆಗೆ ಚುನಾಯಿತರಾಗಿ ಜೂನ್ 2004 ರಿಂದ ಫೆಬ್ರವರಿ 2006ರ ವರೆಗೆ ಪ್ರತಿಪಕ್ಷ ನಾಯಕರಾಗಿದ್ದರು ಹಾಗೂ ಫೆಬ್ರವರಿ 2006 ರಲ್ಲಿ ಉಪಮುಖ್ಯಮಂತ್ರಿಯಾದರು. ನವೆಂಬರ್ 12, 2007 ರಂದು ಮೊದಲ ಬಾರಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿ 7 ದಿನ ಮುಖ್ಯಮಂತ್ರಿಯಾಗಿದ್ದರು. ನಂತರ ಮೇ 30, 2008ರಲ್ಲಿ 15ನೇ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. 2014ರಲ್ಲಿ ಲೋಕಸಭಾ ಸದಸ್ಯರಾಗಿ ಆಯ್ಕೆಗೊಂಡರು. 2018ರ ಮೇ 17 ರಿಂದ ಮೇ 19ರ ವರೆಗೆ 2 ದಿನ 3ನೇ ಬಾರಿಗೆ ಮುಖ್ಯಮಂತ್ರಿಯಾಗಿದ್ದರು. ನಾಲ್ಕನೇ ಬಾರಿಗೆ ಮುಖ್ಯಮಂತ್ರಿಯಾಗಿ ದಿನಾಂಕ:16.07.2019ರಂದು ಪ್ರಮಾಣ ವಚನ ಸ್ವೀಕರಿಸಿ ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿದರು.

ಈ ಹಿನ್ನೆಲೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ.ಬಿ.ಎಸ್ ಯಡಿಯೂರಪ್ಪರವರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಈ ಸುಸಂದರ್ಭದಲ್ಲಿ ಶುಭ ಮತ್ತು ಯಶಸ್ಸನ್ನು ಕೋರುತ್ತಾ. ಇವರುಗಳ ಅವಧಿಯಲ್ಲಿ ರಾಜ್ಯವು ಸರ್ವತೋಮುಖ ಅಭಿವೃದ್ಧಿ ಹೊಂದಲಿ ಎಂದು ಇಲಾಖೆಯು 'ಕರ್ನಾಟಕ ವಿಕಾಸ'ದ ಮುಖಾಂತರ ಶುಭ ಹಾರೈಸುತ್ತದೆ.

ವರದಿ



ಬಿ.ನಿಜಲಿಂಗಪ್ಪ

ನಿರ್ದೇಶಕರು
ಜಲಾಮೃತ ಯೋಜನೆ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಜಲ ನೆಲ ಸಂರಕ್ಷಣೆಯಲ್ಲಿ ಲಭ್ಯವಿರುವ ವೈಜ್ಞಾನಿಕ ತಂತ್ರಜ್ಞಾನಗಳನ್ನು ಬಳಸಿಕೊಳ್ಳುವುದರ ಜೊತೆಗೆ ಸಮುದಾಯ ಸಹಭಾಗಿತ್ವದಲ್ಲಿ ಈ ಯೋಜನೆ ಅನುಷ್ಠಾನಗೊಳಿಸಲಾಗುವುದು. ಕರ್ನಾಟಕದಲ್ಲಿ ಮಳೆಯು ಸೀಮಿತ ದಿನಗಳ ಅವಧಿಯಲ್ಲಿ ಆಗುತ್ತಿದ್ದು, ಅದನ್ನು ವರ್ಷವಿಡೀ ಬಳಸಲು ಅನುಕೂಲವಾಗುವಂತೆ ಜಲ ಸಂರಕ್ಷಣೆ ವಿಧಾನಗಳನ್ನು ಅಳವಡಿಸಿಕೊಳ್ಳಬೇಕಾಗಿದೆ.**

# ಜಲ ಮತ್ತು ನೆಲ ನಿರ್ವಹಣೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ (ವಾಲ್ಮಿ), ಧಾರವಾಡ ಸಹಯೋಗದಲ್ಲಿ ದಿನಾಂಕ: 29.07.2019 ಮತ್ತು 30.07.2019 ರಂದು ಜಲಾಮೃತ ಯೋಜನೆಯ ತಾಂತ್ರಿಕ ಕೈಪಿಡಿ ಸಿದ್ಧಪಡಿಸುವ ಕಾರ್ಯಾಗಾರ ಹಮ್ಮಿಕೊಂಡಿದ್ದು, ದಿನಾಂಕ: 29.07.2019 ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ.ಎಲ್.ಕೆ. ಅತೀಕ್‌ರವರು ಗಿಡ ನೆಡುವ ಮೂಲಕ ಕಾರ್ಯಾಗಾರ ಉದ್ಘಾಟಿಸಿದರು. ದಶಕಗಳಿಂದ ಕರ್ನಾಟಕ ರಾಜ್ಯವು ಬರಗಾಲ ಹಾಗೂ ಸತತ ಜಲ ಸಂಕಷ್ಟದಿಂದ ಬಳಲುತ್ತಿದ್ದು, ಇದಕ್ಕೆ ಪರಿಹಾರವಾಗಿ ಇದೀಗ ಕರ್ನಾಟಕ ಸರ್ಕಾರ ವರ್ಷ 2019ನ್ನು ಜಲ ವರ್ಷ ಎಂದು ಘೋಷಿಸಿದೆ. ಇದರೊಂದಿಗೆ ಜಲಾಮೃತ ಎಂಬ ಮಹತ್ವಾಕಾಂಕ್ಷೆ ಯೋಜನೆಯನ್ನು ಘೋಷಿಸಿ ಅನುಷ್ಠಾನಗೊಳಿಸುತ್ತಿದೆ. ಇಲ್ಲಿಯವರೆಗೂ ಜಲ ಸಂಕಷ್ಟವನ್ನು ಪರಿಹರಿಸುವ ಮಾತುಗಳನ್ನಾಡುತ್ತಾ ಬಂದಿದ್ದು, ಇದೀಗ ಸಮಸ್ಯೆಗೆ ಪರಿಹಾರವಾಗಿ ಜಲಾಮೃತ ಯೋಜನೆ ರೂಪದಲ್ಲಿ ಒಂದು ಪ್ರಕ್ರಿಯೆಯನ್ನು ಪ್ರಾರಂಭಿಸಿದೆ.

ಜಲ ನೆಲ ಸಂರಕ್ಷಣೆಯಲ್ಲಿ ಲಭ್ಯವಿರುವ ವೈಜ್ಞಾನಿಕ ತಂತ್ರಜ್ಞಾನಗಳನ್ನು ಬಳಸಿಕೊಳ್ಳುವುದರ ಜೊತೆಗೆ ಸಮುದಾಯ ಸಹಭಾಗಿತ್ವದಲ್ಲಿ ಈ ಯೋಜನೆ ಅನುಷ್ಠಾನಗೊಳಿಸಲಾಗುವುದು. ಕರ್ನಾಟಕದಲ್ಲಿ ಮಳೆಯು



ಸೀಮಿತ ದಿನಗಳ ಅವಧಿಯಲ್ಲಿ ಆಗುತ್ತಿದ್ದು, ಅದನ್ನು ವರ್ಷವಿಡೀ ಬಳಸಲು ಅನುಕೂಲವಾಗುವಂತೆ ಜಲ ಸಂರಕ್ಷಣೆ ವಿಧಾನಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಜಲಾಮೃತ ಯೋಜನೆಯ ವಿವಿಧ ಆಯಾಮಗಳಾದ ಜಲ ಮೂಲಗಳ ಸೃಜನೆ, ಪುನಶ್ಚೇತನ, ಜಲ ಸಾಕ್ಷರತೆ, ನೀರಿನ ಸದ್ಬಳಕೆ ಹಾಗೂ ಹಸಿರೀಕರಣ ಇವುಗಳನ್ನು ವಿವರಿಸಿದರು. ಜಲಾಮೃತ ಕುರಿತಂತೆ ಸಮಾಜದ ವಿವಿಧ ಸಮುದಾಯಗಳ ಅವಶ್ಯಕತೆಗಳನ್ನು ಪೂರೈಸಲು ಕೆರೆಗಳ ಅಭಿವೃದ್ಧಿ, ಚೆಕ್‌ಡ್ಯಾಂ ನಿರ್ಮಾಣ, ಜಲ ಸಾಕ್ಷರತೆ, ಕುಡಿಯುವ ನೀರು, ಅರಣ್ಯೀಕರಣ ಮುಂತಾದ ವಿಷಯಗಳನ್ನು ಒಳಗೊಂಡು ತಾಂತ್ರಿಕ ಕೈಪಿಡಿ ತಯಾರಿಸುವುದು ಕಾರ್ಯಾಗಾರದ ಉದ್ದೇಶವಾಗಿದೆ.

ಶ್ರೀ ಬಿ.ನಿಜಲಿಂಗಪ್ಪ, ನಿರ್ದೇಶಕರು, ಜಲಾಮೃತ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ಐತಿಹಾಸಿಕವಾಗಿ ದೇಶದಲ್ಲಿ ಹಾಗೂ ಕರ್ನಾಟಕದಲ್ಲಿ ಜಲ ಸಂಕಷ್ಟದ ಹಿನ್ನೆಲೆಯನ್ನು ವಿವರಿಸಿದರು.

70 ರ ದಶಕದಲ್ಲಿ ಪ್ರಾರಂಭವಾದ ಅಂತರ್ಜಲ ಬಳಕೆ ಇತ್ತೀಚೆಗೆ ಅನಾಹುತಕಾರಿ ಘಟ್ಟವನ್ನು ತಲುಪಿದ್ದು, ಜಲ ಸಂಕಷ್ಟಕ್ಕೆ ಕಾರಣವಾಗಿದೆ ಎಂದರು. ಈ ನಿಟ್ಟಿನಲ್ಲಿ ಜಲಾಮೃತ ಯೋಜನೆ ಅಂಗವಾಗಿ ಜಲ, ನೆಲ, ಅರಣ್ಯ ಸಂರಕ್ಷಣೆ ಕುರಿತು ಜನ ಸಾಮಾನ್ಯರಲ್ಲಿ ತಿಳುವಳಿಕೆ ನೀಡುವ ಉದ್ದೇಶದಿಂದ ಒಂದು ದಾರಿ ದೀಪವಾಗಿ ತಾಂತ್ರಿಕ ಕೈಪಿಡಿ ಸಿದ್ಧಪಡಿಸಲಾಗುತ್ತಿದ್ದು, ರಾಜ್ಯದ ನುರಿತ ಪರಿಸರ, ಜಲ ನೆಲ ತಜ್ಞರಿಂದ ವೈಜ್ಞಾನಿಕ ವಿಷಯಗಳನ್ನು ಸಂಗ್ರಹಿಸಲಾಗಿದ್ದು, ಇವುಗಳನ್ನು ಕಾರ್ಯಾಗಾರದಲ್ಲಿ ಚರ್ಚಿಸಿ ಪರಿಷ್ಕರಿಸಿ ಜಲಾಮೃತ ತಾಂತ್ರಿಕ ಕೈಪಿಡಿಯ ಕರಡು ಪ್ರತಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಕಾರ್ಯಾಗಾರದ ಉದ್ದೇಶಗಳ ಕುರಿತು ಪ್ರಾಸ್ತಾವಿಕವಾಗಿ ವಿವರಿಸಿದರು.

ವಾಲ್ಮಿ ನಿರ್ದೇಶಕರಾದ ಡಾ. ರಾಜೇಂದ್ರ ಪೋದ್ದಾರ ರವರು ಮಾತನಾಡಿ ಜಲ ಸಂಕಷ್ಟದಿಂದ ಮುಂಬರುವ ದಿನಗಳಲ್ಲಿ ಉದ್ಭವಿಸಬಹುದಾದ ಸ್ಥಳೀಯ ಜಲ ಕಲಹಗಳು ಹಾಗೂ ಜಾಗತಿಕ ಜಲ ಕಲಹಗಳನ್ನು ವಿವರಿಸಿ, ಜಲ ಸಂಕಷ್ಟ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಅದು ಕೇವಲ ಮಾಹಿತಿ ವಿನಿಮಯ ಹಾಗೂ ಚರ್ಚೆಯ ವಿಷಯವಾಗಿತ್ತು. ಆದರೆ ಇದೀಗ ಕರ್ನಾಟಕ ರಾಜ್ಯ ಸರ್ಕಾರವು ಜಲಾಮೃತ ಯೋಜನೆ ಮೂಲಕ ಒಂದು ಪ್ರಕ್ರಿಯೆಯನ್ನು ಪ್ರಾರಂಭಿಸಿದೆ. ಜಲಾಮೃತ ಯೋಜನೆಯು ದೇಶಕ್ಕೆ ಮಾದರಿಯಾಗಲಿದೆ. ಯೋಜನೆಯು ಕೇವಲ ಸರ್ಕಾರದ ಯೋಜನೆಗಳಲ್ಲಿ ಒಂದಾಗಿರದೇ ವಿಶಾಲ ಜನ ಸಮುದಾಯಗಳನ್ನು ಒಳಗೊಂಡು ಕರ್ನಾಟಕದ ಜಲ ಸುಭದ್ರತೆಗೆ ನಾಂದಿಯಾಗಲಿದೆ. ಈ ಕಾರ್ಯಾಗಾರವು ವಾಲ್ಮಿ ಚಟುವಟಿಕೆಗಳಲ್ಲಿ ವಿಶೇಷ ಚಟುವಟಿಕೆಯಾಗಿದ್ದು, ನಾಡಿನ ಜಲ ಸುಭದ್ರತೆಗೆ ಒಂದು ಕಾಣಿಕೆಯಾಗಿದೆ ಎಂದರು.

ಧಾರವಾಡ ಜಿಲ್ಲಾ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ.ವಿಜಯಲಕ್ಷ್ಮಿ ಕೆಂಪೇಗೌಡ ಪಾಟೀಲ ಇವರು ಮುಖ್ಯ ಅತಿಥಿಗಳಾಗಿ ಮಾತನಾಡುತ್ತಾ ಗ್ರಾಮೀಣ ಭಾಗದ ಜಲ ಸಂಕಷ್ಟ ವಿವರಿಸಿ ಜಲಾಮೃತ ಯೋಜನೆ ಇದಕ್ಕೊಂದು ಪರಿಹಾರವಾಗಲಿದೆ. ಆಳಂದ ಕ್ಷೇತ್ರದ ಮಾಜಿ ಶಾಸಕರಾದ ಶ್ರೀ.ಬಿ.ಆರ್.ಪಾಟೀಲ





ಇವರು ಗ್ರಾಮೀಣ ಭಾಗದ ಜಲ ಸಮಸ್ಯೆಗಳನ್ನು ವಿವರಿಸಿದರು. ಧಾರವಾಡ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ.ಬಿ.ಸಿ.ಸತೀಶ್, ಮುಖ್ಯ ಇಂಜಿನೀಯರ್ ಶ್ರೀ.ಪ್ರಕಾಶ ಕುಮಾರ, ಸುಮಾರು 25 ಜನ ವಿಷಯ ತಜ್ಞರು, ಗ್ರಾಮ ಪಂಚಾಯತಿ ಅಧ್ಯಕ್ಷರು, ಮಹಿಳೆಯರು ಹಾಗೂ ವಾಲ್ಮಿ ಸಿಬ್ಬಂದಿ ಉಪಸ್ಥಿತರಿದ್ದರು.

ಇಂ. ಆರ್.ಎಂ.ಭಟ್, ಸಹಾಯಕ ನಿರ್ದೇಶರಕರು, ವಾಲ್ಮಿ, ಧಾರವಾಡ ಇವರು ಸ್ವಾಗತಿಸಿದರು. ಇಂ. ಕೃಷ್ಣಾಜಿರಾವ್, ಸಹ ಪ್ರಾಧ್ಯಾಪಕರು, ವಾಲ್ಮಿ ಇವರು ವಂದಿಸಿದರು, ಇಂ. ಮಹದೇವಗೌಡ ಹುತ್ತನಗೌಡರ, ಸಹಾಯಕ ಅಭಿಯಂತರರು, ಕಾರ್ಯಕ್ರಮ ನಿರೂಪಣೆ ನೆರವೇರಿಸಿದರು. ದಿನಾಂಕ: 30.07.2019 ರಂದು ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ (ವಾಲ್ಮಿ), ಧಾರವಾಡ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಸಹಯೋಗದಲ್ಲಿ ಜಲಾಮೃತ ಯೋಜನೆಯ ತಾಂತ್ರಿಕ ಕೈಪಿಡಿ ಸಿದ್ಧಪಡಿಸುವ ಕಾರ್ಯಾಗಾರ ಸಮಾರೋಪ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

ಧಾರವಾಡ ಜಿಲ್ಲಾಧಿಕಾರಿಗಳಾದ ಶ್ರೀಮತಿ.ದೀಪಾ ಚೋಳನ್‌ರವರು ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಜಲ ಸಂಕಷ್ಟದ ಕುರಿತು ಎಲ್ಲರೊಂದಿಗೆ ಮಾತನಾಡುತ್ತಾರೆ, ಕೆಲವರೇ ಜಲ ಸಂರಕ್ಷಣೆ ಕಾರ್ಯದಲ್ಲಿ ತೊಡಗಿಕೊಂಡಿದ್ದು, ಜಲಾಮೃತ ಕೈಪಿಡಿಯಲ್ಲಿ ಜಲ ಸಂರಕ್ಷಣೆಯಲ್ಲಿ ಪ್ರತಿಯೊಬ್ಬರ ಜವಾಬ್ದಾರಿಗಳೇನು ಎನ್ನುವುದನ್ನು ಅಳವಡಿಸುವಂತೆ ತಿಳಿಸಿದರು. ಜಲಾಮೃತ ಕೈಪಿಡಿ ರಾಜ್ಯದ ಜಲ ಕಾರ್ಯಕರ್ತರಿಗೊಂದು ದಾರಿ ದೀಪವಾಗಲೆಂದು ಹಾರೈಸಿ ವಾಲ್ಮಿ ಪ್ರಯತ್ನಗಳನ್ನು ಶ್ಲಾಘಿಸಿದರು.

ಧಾರವಾಡ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ಶ್ರೀ.ಡಿ.ಮಹೇಶ್ ಕುಮಾರ್‌ರವರು ಅತಿಥಿಗಳಾಗಿ ಮಾತನಾಡಿ ಅರಣ್ಯ ಇಲಾಖೆ ರೈತರಿಗೆ ಗಿಡ ನೆಟ್ಟು ಬೆಳೆಸಲು ಪ್ರೋತ್ಸಾಹಧನವನ್ನು ನೀಡುತ್ತಿದ್ದು ಇಂತಹ ಯೋಜನೆಗಳನ್ನು ಕೈಪಿಡಿಯಲ್ಲಿ ಅಳವಡಿಸುವುದು. ಬೀದಿ ನಾಟಕಗಳ ಮೂಲಕ ಜನತೆಯಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು. ನೀರಿನ ದುರ್ಬಳಕೆ ತಡೆಗಟ್ಟಲು ಕಾಯ್ದೆ ಜಾರಿಗೆ ಬರುವಂತಾಗಬೇಕೆಂದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಜಲಾಮೃತ ಯೋಜನೆಯ ನಿರ್ದೇಶರಕರಾದ ಶ್ರೀ.ಬಿ.ನಿಜಲಿಂಗಪ್ಪರವರು ಮಾತನಾಡುತ್ತಾ ತಾಂತ್ರಿಕ ಕೈಪಿಡಿ ತಯಾರಿಸಲು ಎಲ್ಲ ತಜ್ಞರು ಭಾಗವಹಿಸಿ ಮಾಹಿತಿ ವಿನಿಮಯ ಮಾಡಿಕೊಳ್ಳಲಾಗಿದೆ. ಮುಖ್ಯ ಸವಾಲುಗಳು, ಪರಿಹಾರಗಳು, ಕಾರ್ಯರೂಪಕ್ಕೆ ತರುವುದು ಮತ್ತು ಸಂಪೂರ್ಣ ಜೈವಿಕ ವ್ಯವಸ್ಥೆ ಮೇಲೆ ಇದರ ಪರಿಣಾಮಗಳ ವಿವರಗಳನ್ನು ಒಳಗೊಂಡ ಲೇಖನಗಳನ್ನು ಕಾರ್ಯಾಗಾರದ ತಾಂತ್ರಿಕ ತಂಡಗಳ ಮುಖ್ಯಸ್ಥರು ಸಿದ್ಧಪಡಿಸಿ ಸಲ್ಲಿಸುವಂತೆ ಕೋರಿದರು.

ವಾಲ್ಮಿ ನಿರ್ದೇಶಕರು ಡಾ.ರಾಜೇಂದ್ರ ಪೋದ್ದಾರ ಇವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಇಂ.ಮಹದೇವಗೌಡ ಹುತ್ತನಗೌಡರ, ಸಹಾಯಕಅಭಿಯಂತರರು, ವಾಲ್ಮಿ, ಧಾರವಾಡ ಇವರು ಸ್ವಾಗತಿಸಿದರು. ಇಂ.ಕೃಷ್ಣಾಜಿರಾವ್, ಸಹ ಪ್ರಾಧ್ಯಾಪಕರು, ವಾಲ್ಮಿ ಇವರು ವಂದಿಸಿದರು.

ವರದಿ




ಹೆಚ್.ವೇಣುಗೋಪಾಲ್

ಸಂಶೋಧನಾಧಿಕಾರಿ
ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ
ಮತ್ತು ಅಭಿವೃದ್ಧಿ ಸಮಿತಿ


**ಕೇಂದ್ರ ಹಣಕಾಸು ಆಯೋಗವು ಪ್ರೋತ್ಸಾಹಕ ಅನುದಾನವನ್ನು ಹಂಚಿಕೆ ಮಾಡುವಾಗ ಅನುಸರಿಸುವ ಮಾನದಂಡಗಳ ವಿಷಯದಲ್ಲಿ ರಾಜಕ್ಕೆ ಹೆಚ್ಚಿನ ಸ್ವಾಯತ್ತತೆಯನ್ನು ನೀಡಬೇಕು. ಇದರಿಂದ ಆಯಾ ರಾಜ್ಯಗಳು ಪ್ರೋತ್ಸಾಹಕ ಅನುದಾನ ಬಿಡುಗಡೆಗೆ ಅನುಸರಿಸಬಹುದಾದ ಮಾನದಂಡಗಳನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ದೊರೆಯುತ್ತದೆ.**

# 15ನೇ ಕೇಂದ್ರ ಹಣಕಾಸು ಆಯೋಗ ರಾಜ್ಯಕ್ಕೆ ಭೇಟಿ

ಕರ್ನಾಟಕ ರಾಜ್ಯಕ್ಕೆ ಶ್ರೀ ಎನ್.ಕೆ.ಸಿಂಗ್ ಅಧ್ಯಕ್ಷತೆಯಲ್ಲಿ ರಚಿಸಲಾದ 15ನೇ ಕೇಂದ್ರ ಹಣಕಾಸು ಆಯೋಗವು ದಿನಾಂಕ:24-06-2019 ರಿಂದ 26-6-2019 ರವರೆಗೆ ತಮ್ಮ ತಂಡದೊಂದಿಗೆ ರಾಜ್ಯಕ್ಕೆ ಭೇಟಿ ನೀಡಿದ್ದರು. ಅಂದಿನ ಸನ್ಮಾನ್ಯ ಮುಖ್ಯಮಂತ್ರಿಗಳು, ವಿವಿಧ ಇಲಾಖೆಗಳ ಮಾನ್ಯ ಸಚಿವರುಗಳು, ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಅಪರ ಮುಖ್ಯ ಕಾರ್ಯದರ್ಶಿಗಳು, ವಿವಿಧ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು, ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು, ವಿವಿಧ ಕ್ಷೇತ್ರಗಳ ಆರ್ಥಿಕ ತಜ್ಞರುಗಳು ಹಾಗೂ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಪರಿಶೀಲನಾಂಶಗಳೊಂದಿಗೆ ಸಭೆ ನಡೆಸಲಾಯಿತು.

ಆರ್ಥಿಕ ಇಲಾಖೆಯು ಆಯೋಜಿಸಿದ ಸಭೆಯಲ್ಲಿ ಶ್ರೀ ಎನ್.ಕೆ.ಸಿಂಗ್, ಅಧ್ಯಕ್ಷರು ಮಾತನಾಡಿ, ಸದರಿ ಸಭೆಯು ರಾಷ್ಟ್ರದಲ್ಲೇ ಬಹು ಪ್ರಾಮುಖ್ಯತೆ ಪಡೆದಿದ್ದು ಹಾಗೂ ಇದನ್ನು ಅತ್ಯಂತ ಯಶಸ್ವಿಯಾಗಿ ನಡೆಸಿಕೊಟ್ಟಿದ್ದಕ್ಕೆ ಅಭಿನಂದನೆಗಳನ್ನು ಸಲ್ಲಿಸಿದರು. ಕರ್ನಾಟಕ ರಾಜ್ಯದ ಅಭಿವೃದ್ಧಿಯೂ ರಾಷ್ಟ್ರದ ಅಭಿವೃದ್ಧಿಗೆ ಪೂರಕವಾಗಿರುತ್ತದೆ, ಉತ್ತಮ ತಾಂತ್ರಿಕ ಜ್ಞಾನವುಳ್ಳ ಬೆಂಗಳೂರು ಐ.ಟಿ.ಸೆಕ್ಟರ್‌ಗಳಿಂದ ನಿರೀಕ್ಷಿಸಬಹುದಾದ ಆದಾಯಗಳು ರಾಷ್ಟ್ರದ ಒಟ್ಟಾರೆ ಆದಾಯಕ್ಕೆ ಕೊಡುಗೆಯನ್ನು ನೀಡುತ್ತವೆ ಎಂದು ಮುಕ್ತ ಕಂಠದಿಂದ ಶ್ಲಾಘಿಸಿದರು.



ಅಂದಿನ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು, ರಾಜಕೀಯ ಪಕ್ಷದ ಪರವಾಗಿ ಗ್ರಾಮೀಣ ಸ್ಥಳೀಯ ಸಂಸ್ಥೆಗಳಾದ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಗಳಿಗೆ ವಿಕೇಂದ್ರೀಕರಣದಡಿ ಹಣಕಾಸು ಹಂಚಿಕೆ, ವರ್ಗಾವಣೆ ವಿಧಾನ, ಬಳಕೆ, ಸೇವಾ ಅಂತರಗಳು, ಲೆಕ್ಕ ಪರಿಶೋಧನೆಯಂತಹ ವಿಷಯಗಳಿಗೆ ಸಂಬಂಧಿಸಿದಂತೆ 15ನೇ ಕೇಂದ್ರ ಹಣಕಾಸು ಆಯೋಗದ ಮುಂದೆ ಪರಿಣಾಮಕಾರಿಯಾಗಿ ವಿವರಿಸಿ ಕೆಳಗಿನ ಅಂಶಗಳನ್ನು ಪರಿಗಣಿಸುವಂತೆ ಕೋರಿದರು.




- ಪಂಚಾಯತ್ ರಾಜ್ ಸಂಸ್ಥೆಗಳಾದ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳಿಗೆ ವಿಕೇಂದ್ರೀಕರಣದಡಿ ಹಂಚಿಕೆಯಾಗಿರುವ ಹಣಕಾಸಿನ ಮಾಹಿತಿಗಳನ್ನು ಆಯೋಗವು ಪರಾಮರ್ಶಿಸಲು ಕೋರಿ, ಹಿಂದಿನ 13ನೇ ಹಣಕಾಸು ಆಯೋಗವು ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ವರ್ಗಾವಣೆ ಮಾಡಿದ ಅನುದಾನಗಳು ಹೆಚ್ಚಿದ್ದು ಅದರಿಂದ ಅಭಿವೃದ್ಧಿ ಕಾರ್ಯಗಳು ಯಶಸ್ವಿಯಾಗಿ ಅನುಷ್ಠಾನವಾಗಿರುತ್ತದೆ. ಆದರೆ 14ನೇ ಹಣಕಾಸು ಆಯೋಗವು ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತಿಗಳಿಗೆ ಅನುದಾನವನ್ನು ನಿಲ್ಲಿಸಿದ್ದರಿಂದ ಪಂಚಾಯಿತಿಗಳಿಗೆ ಅನುದಾನದ ಕೊರತೆ ಉಂಟಾಗಿ ದೀರ್ಘಕಾಲಿಕ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುತ್ತದೆ.
- ಕೇಂದ್ರ ಹಣಕಾಸು ಆಯೋಗವು ರಾಜ್ಯಗಳಿಗೆ ಹಂಚಿಕೆ ಮಾಡುವಾಗ ಅನುಸರಿಸುವ ಮಾನದಂಡ ಗಳಾದ ಜನಸಂಖ್ಯೆ ಮತ್ತು ಭೌಗೋಳಿಕ ವಿಸ್ತೀರ್ಣ ಆಧಾರದ ಮೇಲೆ ಹಂಚಿಕೆ ಮಾಡಿದಲ್ಲಿ ದಕ್ಷಿಣ ರಾಜ್ಯಗಳಿಗೆ ಅನ್ಯಾಯವಾಗದಂತೆ ಎಚ್ಚರಿಕೆ ವಹಿಸುವುದು ಸೂಕ್ತ, ತಮಗೆ ತಿಳಿದಿರುವಂತೆ ದಕ್ಷಿಣ ರಾಜ್ಯಗಳು ಜನಸಂಖ್ಯಾ ನಿಯಂತ್ರಣದಲ್ಲಿ ಹೆಚ್ಚು ಪ್ರಗತಿ ಸಾಧಿಸಲಾಗಿದೆ. ಆ ರಾಜ್ಯಗಳಿಗೆ ಪ್ರೋತ್ಸಾಹಕವಾಗಿರಬೇಕೆ ಹೊರತು ದಂಡದ ರೂಪದಲ್ಲಿ ಆ ರಾಜ್ಯಗಳು ನಷ್ಟ ಅನುಭವಿಸಬಾರದು ಎಂದು ಆಯೋಗದ ಅಧ್ಯಕ್ಷರಲ್ಲಿ ಮನವಿ ಮಾಡಿದರು.
- 15ನೇ ಕೇಂದ್ರ ಹಣಕಾಸು ಆಯೋಗವು ಕಾರ್ಯಕ್ಷಮತೆ ಅನುದಾನವನ್ನು ಪಂಚಾಯತಿಗಳಿಗೆ ಹಂಚಿಕೆ ಮಾಡುವಾಗ ಅನುಸರಿಸುವ ಮಾನದಂಡಗಳ ವಿಷಯದಲ್ಲಿ ರಾಜ್ಯಗಳಿಗೆ ಹೆಚ್ಚಿನ ಸ್ವಾಯತ್ತತೆಯನ್ನು ನೀಡಬೇಕು. ಇದರಿಂದ ಆಯಾ ರಾಜ್ಯಗಳು ಕಾರ್ಯಕ್ಷಮತೆ ಅನುದಾನ ಬಿಡುಗಡೆಗೆ ಅನುಸರಿಸಬಹುದಾದ ಮಾನದಂಡಗಳನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ದೊರೆಯುತ್ತದೆ ಎಂಬ ಪ್ರಸ್ತಾವನೆಯನ್ನು ಆಯೋಗದ ಮುಂದೆ ಮಂಡಿಸಿದರು.
- ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರು ಪ್ರಸ್ತಾವಿಕವಾಗಿ ಮಾತನಾಡಿ, ಕರ್ನಾಟಕ ರಾಜ್ಯವು ಮೂರು ಸ್ತರದ ಪಂಚಾಯತ್

ರಾಜ್ ಸಂಸ್ಥೆಗಳಿಗೆ ನಿಧಿಗಳು, ಕಾರ್ಯಗಳು ಹಾಗೂ ಪ್ರಕಾರ್ಯಗಳನ್ನು ವರ್ಗಾವಣೆ ಮಾಡಿ ಉತ್ತಮ ಪ್ರಗತಿಯನ್ನು ಸಾಧಿಸಲಾಗುತ್ತಿದೆ ಹಾಗೂ 4ನೇ ರಾಜ್ಯ ಹಣಕಾಸು ಆಯೋಗವು ಶಿಫಾರಸ್ಸು ಮಾಡಿರುವಂತೆ ಶೇ.48ರಷ್ಟು ರಾಜ್ಯದ ಉದ್ದರಿಯೇತರ ಒಟ್ಟು ಸ್ವಂತ ರಾಜಸ್ವ ಸ್ವೀಕೃತಿಯಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಅನುದಾನವನ್ನು ವರ್ಗಾವಣೆ ಮಾಡಲಾಗುತ್ತಿದೆ. ಅದರಲ್ಲಿ ಶೇ.35 ರಷ್ಟು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಜಿಲ್ಲಾ ವಲಯಗಳಿಂದ ಮುಂದಿನ ಐದು ವರ್ಷಗಳಲ್ಲಿ ವರ್ಗಾವಣೆಯಾಗುವುದು ಎಂದು ತಿಳಿಸಿ, ಈ ಕೆಳಗಿನ ಅಂಶಗಳನ್ನು 15ನೇ ಕೇಂದ್ರ ಹಣಕಾಸು ಆಯೋಗವು ಪರಿಗಣಿಸಲು ಮನವಿ ಮಾಡಿದರು.

ಪಂಚಾಯತಿಗಳ ಸಂಪನ್ಮೂಲಗಳು ವೃದ್ಧಿ ಯಾಗುತ್ತಿದ್ದರೂ ಮೂಲಸೌಕರ್ಯ ಮತ್ತು ಸೇವಾ ಕ್ಷೇತ್ರಗಳಲ್ಲಿನ ಅಂತರವು ಮುಂದುವರಿಯುತ್ತಿದೆ. ಗ್ರಾಮೀಣ ವಾಸ ಸ್ಥಳಗಳಿಗೆ ಕುಡಿಯುವ ನೀರು ಸರಬರಾಜು ಮತ್ತು ಗುಣಮಟ್ಟದ ರಸ್ತೆಗಳು ಒದಗಿಸುವುದು ಕಷ್ಟ ಸಾಧ್ಯವಾಗಿದೆ. ರಾಜ್ಯವು ಮಹತ್ವಾಕಾಂಕ್ಷೆಯ ಜಲಧಾರೆ ಕಾರ್ಯಕ್ರಮದ ಮೂಲಕ ಗ್ರಾಮೀಣ ವಾಸಸ್ಥಾನಗಳಿಗೆ ಶಾಶ್ವತ ದೀರ್ಘಕಾಲಿಕ ಮೇಲ್ಮೈ ಮೂಲಗಳಿಂದ 85 ಎಲ್.ಪಿ.ಸಿ.ಡಿ. ಶುದ್ಧ ಕುಡಿಯುವ ನೀರನ್ನು ಪೂರೈಸಲು ಒಟ್ಟಾರೆ 53,000 ಕೋಟಿ ರೂ.ಗಳು ಅಗತ್ಯವಿದ್ದು, ಮುಂದಿನ 5 ರಿಂದ 7 ವರ್ಷಗಳಲ್ಲಿ ಅನುಷ್ಠಾನಗೊಳಿಸಲು ಕಾರ್ಯಾರಂಭಿಸಿದೆ ಎಂದರು.

- ಕರ್ನಾಟಕವು 1.8 ಲಕ್ಷ ಕಿ.ಮೀ.ಗಿಂತ ಹೆಚ್ಚಿನ ಗ್ರಾಮೀಣ ರಸ್ತೆ ಜಾಲವನ್ನು ಹೊಂದಿದ್ದು. ಅದರಲ್ಲಿ ಕೇವಲ 52,000 ಕಿ.ಮೀ. ರಸ್ತೆಗಳು ಗ್ರಾಮ ಪಂಚಾಯಿತಿಗಳನ್ನು ಸಂಪರ್ಕಿಸುವ ಉತ್ತಮ ಗುಣಮಟ್ಟದ ರಸ್ತೆ ಹೊಂದಿದೆ. ಆದುದರಿಂದ, ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಲು ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗಳ ಬೇಡಿಕೆಗೆ ಅನುಗುಣವಾಗಿ ಹೆಚ್ಚಿನ ಅನುದಾನ ಒದಗಿಸಬೇಕೆಂದು ಕೋರಿದ್ದು ಹಾಗೂ ಆಯೋಗವು ತನ್ನ ಶಿಫಾರಸ್ಸಿನಲ್ಲಿ ಅಳವಡಿಸಬೇಕೆಂದು ಮನವಿ ಮಾಡಿದರು.
- ಗ್ರಾಮೀಣ ಸ್ಥಳೀಯ ಸಂಸ್ಥೆಗಳಾದ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳಿಗೆ ಅನುಕ್ರಮವಾಗಿ 70:10:20ರ ಅನುಪಾತದಲ್ಲಿ 15ನೇ ಹಣಕಾಸು ಆಯೋಗವು ಅನುದಾನವನ್ನು ಹಂಚಿಕೆ ಮಾಡುವಂತೆ ಕೋರಿದರು. ಇದರಿಂದ ಮೇಲಿನ ಹಂತದ ಪಂಚಾಯಿತಿಗಳಾದ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳು ಕಾರ್ಯ ನಿರ್ವಹಣೆ ಹಾಗೂ ಸಾಮಾನ್ಯ ಮೂಲಸೌಕರ್ಯ ಸೌಲಭ್ಯಗಳನ್ನು ಒದಗಿಸುವ ಗುರಿಯನ್ನು ಸಾಧಿಸಬಹುದು ಎಂದು ಮನವರಿಸಿದರು.
- 15ನೇ ಹಣಕಾಸು ಆಯೋಗವು ಹಂಚಿಕೆ ಮಾಡುವ ಅನುದಾನದಲ್ಲಿ ರಾಜ್ಯಮಟ್ಟದ ಯೋಜನಾ ಉಸ್ತುವಾರಿ ಶಾಖೆ (ಪಿ.ಎಂ.ಯು)ಗೆ ಸಾಮಾಜಿಕ ಲೆಕ್ಕಪರಿಶೋಧನೆಯ ವೆಚ್ಚವು ಸೇರಿದಂತೆ ಶೇ.1 ರಷ್ಟು ಆಡಳಿತಾತ್ಮಕ ವೆಚ್ಚಕ್ಕಾಗಿ ಮೀಸಲಿಡುವ ಪ್ರಸ್ತಾವನೆಯನ್ನು ಪರಿಗಣಿಸಲು ಕೋರಿದರು.
- ಹಿಂದಿನ 14ನೇ ಹಣಕಾಸು ಆಯೋಗವು ಶೇ.10 ರಷ್ಟು ಕಾರ್ಯಕ್ಷಮತೆ ಅನುದಾನದ ಬಿಡುಗಡೆಗೆ ಗ್ರಾಮ ಪಂಚಾಯಿತಿಗಳ ಲೆಕ್ಕಪರಿಶೋಧನೆ ಮತ್ತು ಅವುಗಳು ಸಂಗ್ರಹಿಸುವ ಸ್ವಂತ ಸಂಪನ್ಮೂಲ ಆದಾಯವು ಮಾನದಂಡಗಳಾಗಿ ಅನುಸರಿಸಲಾಗಿದೆ. ಆದರೆ, ಹಿಂದಿನ ಆರ್ಥಿಕ ವರ್ಷಗಳಿಗಿಂತ ರೂ.1 ಗಳು ಹೆಚ್ಚಿಗೆ ಕ್ರೋಢೀಕರಣದ ಸಾಧನೆ ಮಾಡಿದರೂ ಸಹ ಅರ್ಹತೆ ಪಡೆಯುವುದರೊಂದಿಗೆ ಕಾರ್ಯಕ್ಷಮತೆ ಅನುದಾನವನ್ನು ಗಳಿಸಿವೆ.
- ಪ್ರಸ್ತುತ 15ನೇ ಕೇಂದ್ರ ಹಣಕಾಸು ಆಯೋಗವು ಕಾರ್ಯಕ್ಷಮತೆ ಅನುದಾನವನ್ನು ಹಂಚಿಕೆ ಮಾಡುವ ವಿಷಯದಲ್ಲಿ ರಾಜ್ಯಕ್ಕೆ ಹೆಚ್ಚಿನ ಸ್ವಾಯತ್ತತೆಯನ್ನು ನೀಡಬೇಕು. ರಾಜ್ಯಗಳು ಕಾರ್ಯಕ್ಷಮತೆ ಅನುದಾನ ಬಿಡುಗಡೆಗೆ ಅನುಸರಿಸಬಹುದಾದ ಮಾನದಂಡಗಳನ್ನು ಆಯ್ಕೆ ಮಾಡುವ ಅವಕಾಶ ಕಲ್ಪಿಸಿಕೊಡಬೇಕು.
- ಅಲ್ಲದೆ, 15ನೇ ಹಣಕಾಸು ಆಯೋಗವು ಕಾರ್ಯಕ್ಷಮತೆ ಅನುದಾನ ಬಿಡುಗಡೆಗೆ ಸಂಬಂಧಿಸಿದಂತೆ ಎರಡು ಮಾನದಂಡಗಳನ್ನು

ಅನುಸರಿಸಬಹುದು, 1) 15ನೇ ಹಣಕಾಸು ಆಯೋಗದ ಅನುದಾನ ಬಿಡುಗಡೆ ಮಾಡುವಾಗ ಆಯೋಗವು ರಾಜ್ಯಗಳಿಗೆ ಮಾನದಂಡ ನಿಗದಿಪಡಿಸುವುದು ಹಾಗೂ 2) ರಾಜ್ಯದಿಂದ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡುವಾಗ ರಾಜ್ಯಗಳು ಮಾನದಂಡಗಳನ್ನು ನಿಗದಿಪಡಿಸಲು ಅವಕಾಶ ಕಲ್ಪಿಸುವುದು.

- ಹಿಂದಿನ 14ನೇ ಹಣಕಾಸು ಆಯೋಗದಡಿ ಒಟ್ಟು ಹಂಚಿಕೆ ಮಾಡಿದ ನಿಧಿಯಲ್ಲಿ ಕರ್ನಾಟಕ ರಾಜ್ಯವು ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಕ್ರಮವಾಗಿ ಶೇ.4.64 ಮತ್ತು ಶೇ.7.62ರಷ್ಟು ಅನುದಾನವನ್ನು ಪಡೆದಿರುತ್ತದೆ. ಆದರೆ, 15ನೇ ಹಣಕಾಸು ಆಯೋಗವು ತನ್ನ ಶಿಫಾರಸ್ಸಿನಲ್ಲಿ ಕರ್ನಾಟಕ ರಾಜ್ಯದ ಪಾಲಿನ ಹಂಚಿಕೆ ಪ್ರಮಾಣವನ್ನು ಹೆಚ್ಚಿಸುವಂತೆ ಕೋರಿದರು.
- ಹಿಂದಿನ 14ನೇ ಕೇಂದ್ರ ಹಣಕಾಸು ಆಯೋಗವು ತನ್ನ ಮೂಲ ಅನುದಾನವನ್ನು ಶೇ.90 ರಷ್ಟು ಜನಸಂಖ್ಯೆ ಹಾಗೂ ಶೇ.10 ರಷ್ಟು ಭೌಗೋಳಿಕ ವಿಸ್ತೀರ್ಣದ ಆಧಾರದ ಮೇಲೆ ನೀಡಲಾಗುತ್ತಿದೆ. ಇದರ ಬದಲಿಗೆ ರಾಜ್ಯ ಸರ್ಕಾರವು ತನ್ನ ರಾಜ್ಯ ಹಣಕಾಸು ಆಯೋಗದ ಅನುದಾನ ಬಿಡುಗಡೆಗೆ ಅನುಸರಿಸಿದ 80:20 ರ ಅನುಪಾತದಲ್ಲಿ ಜನಸಂಖ್ಯೆ ಹಾಗೂ ಭೌಗೋಳಿಕ ವಿಸ್ತೀರ್ಣ ಪರಿಗಣಿಸಿ ಹಂಚಿಕೆ ಮಾಡಿದಲ್ಲಿ ಹೆಚ್ಚಿನ ಭೌಗೋಳಿಕ ವಿಸ್ತೀರ್ಣ ಹಾಗೂ ಕಡಿಮೆ ಜನಸಂಖ್ಯೆ ಇರುವ ಪ್ರದೇಶಗಳಿಗೆ ಸಮರ್ಪಕವಾಗಿ ಹಂಚಿಕೆ ಮಾಡಿದಂತಾಗುತ್ತದೆ ಇದನ್ನು ಪರಿಗಣಿಸಲು ಕೋರಿದರು.
- ಪಂಚಾಯತ್ ರಾಜ್ ಸಂಸ್ಥೆಗಳ ಅಭಿಪ್ರಾಯಗಳು ಹಾಗೂ ದೃಷ್ಟಿಕೋನಗಳ ಬಗ್ಗೆ 15ನೇ ಕೇಂದ್ರ ಹಣಕಾಸು ಆಯೋಗದ ಮುಂದೆ ಈ ಕೆಳಗಿನ ಪ್ರತಿನಿಧಿಗಳು ಮಾತನಾಡಿ ಲಿಖಿತ ದಾಖಲೆಯೊಂದಿಗೆ ತಮ್ಮ ಬೇಡಿಕೆಯನ್ನು ಮಂಡಿಸಿದರು.
- ಶ್ರೀ ಸಿ.ನಾರಾಯಣಸ್ವಾಮಿ, ಪಂಚಾಯತ್ ರಾಜ್ ಪರಿಷತ್‌ರವರು ಪಂಚಾಯತ್ ಚುನಾಯಿತ ಸದಸ್ಯರುಗಳ ಪರವಾಗಿ ಮಾತನಾಡಿ ಪಂಚಾಯಿತಿಗಳು ಸಂಪನ್ಮೂಲ ಕ್ರೋಢೀಕರಣ ಉತ್ತೇಜಿಸಲು ವಿಶೇಷ ಪ್ರೋತ್ಸಾಹಕ ಅನುದಾನ ನೀಡಬೇಕು. ಪಂಚಾಯತ್ ಸದಸ್ಯರುಗಳಿಗೆ ಕಲ್ಯಾಣ ನಿಧಿ ಸ್ಥಾಪಿಸಲು ವಿಶೇಷ ಅನುದಾನವನ್ನು ಒದಗಿಸಬೇಕೆಂದು ಹಾಗೂ ಚುನಾಯಿತ ಸದಸ್ಯರಿಗೆ ಪರಿಣಾಮಕಾರಿಯಾದ ಸಾಮಾರ್ಥ್ಯಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲು ಅನುದಾನದ ಅವಶ್ಯಕತೆ ಇದೆ ಎಂದು ಆಯೋಗಕ್ಕೆ ಮನವಿ ಸಲ್ಲಿಸಿದರು.
- ಶ್ರೀ ಮಂಜುನಾಥ್, ಅಧ್ಯಕ್ಷರು, ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯತ್ ಮತ್ತು ಶ್ರೀಮತಿ ಜಯಮ್ಮ, ಅಧ್ಯಕ್ಷರು, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್‌ರವರು ಮಾತನಾಡಿ ಜಿಲ್ಲಾ ಪಂಚಾಯಿತಿಗಳಿಗೆ ಒದಗಿಸುವ ಅನುದಾನವು ಯಾವುದೇ ಷರತ್ತುಗಳಿಲ್ಲದೆ ಅನಿರ್ಬಂಧಿತ ಅನುದಾನವನ್ನಾಗಿ ನೀಡಬೇಕು ಎಂದು 15ನೇ ಕೇಂದ್ರ ಹಣಕಾಸು ಆಯೋಗವನ್ನು ಕೋರಿದರು.
- ಶ್ರೀ ಸತೀಶ್.ಕೆ.ಎಸ್., ಅಧ್ಯಕ್ಷರು, ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟ, ಶ್ರೀ ಪಿ.ಪಿ.ಬೋಪಣ್ಣ, ಅಧ್ಯಕ್ಷರು, ಪಾಲಿಬೆಟ್ಟ ಗ್ರಾಮ ಪಂಚಾಯಿತಿ ಮತ್ತು ಶ್ರೀ ಮಹೇಶ್‌ಕುಮಾರ್,ಅಧ್ಯಕ್ಷರು,ದೊಡ್ಡಜಾಲ ಗ್ರಾಮ ಪಂಚಾಯಿತಿ ರವರುಗಳು ಗ್ರಾಮ ಪಂಚಾಯಿತಿ ಪರವಾಗಿ ಯಾವುದೇ ನಿಬಂಧನೆಗಳಿಲ್ಲದೇ ಮುಕ್ತ ನಿಧಿಯನ್ನು ಗ್ರಾಮ ಪಂಚಾಯಿತಿಗಳಿಗೆ ನೀಡಬೇಕೆಂದು ಹಾಗೂ ಅದಕ್ಕೆ ಸಂಬಂಧಿಸಿದಂತೆ ಪಾಲಿಬೆಟ್ಟ ಗ್ರಾಮ ಪಂಚಾಯಿತಿ ಅಧ್ಯಕ್ಷರು ಲಿಖಿತ ದಾಖಲೆಯೊಂದಿಗೆ ಶ್ರೀ ಎನ್.ಕೆ.ಸಿಂಗ್ ರವರಿಗೆ ಮನವಿ ಸಲ್ಲಿಸಿದರು.
- ಕರ್ನಾಟಕ ರಾಜ್ಯದ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರ ಸಂಘದ ಅಧ್ಯಕ್ಷರಾದ ಶ್ರೀ ನೀಲಕಂಠಪ್ಪ ರವರು ಸಭೆಯಲ್ಲಿ ಮಾತನಾಡಿ ತಾಲ್ಲೂಕು ಪಂಚಾಯಿತಿಗಳಿಗೆ ಒದಗಿಸುವ ಅನುದಾನದಲ್ಲಿ ಶೇ.80ರಷ್ಟು ಸರ್ಕಾರದ ನೌಕರರಿಗೆ ಸಂಬಳ ಹಾಗೂ ಇತ್ಯಾದಿ ಆಡಳಿತಾತ್ಮಕ ವೆಚ್ಚವಾಗಿರುತ್ತದೆ. ಉಳಿದ ಶೇ.20ರಷ್ಟು ಅನುದಾನದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸುವುದು
- ಕಷ್ಟಸಾಧ್ಯವಾಗಿದೆ. ಆದುದರಿಂದ 15ನೇ ಹಣಕಾಸು ಆಯೋಗವು ತಾಲ್ಲೂಕು ಪಂಚಾಯಿತಿಗಳಿಗೆ ಹೊಸ ಯೋಜನೆಗಳೊಂದಿಗೆ ಹಣಕಾಸು ಒದಗಿಸಬೇಕೆಂದು




ಲಿಖಿತ ದಾಖಲೆಯೊಂದಿಗೆ ಮನವಿ ಸಲ್ಲಿಸಿದರು.

- ಶ್ರೀಮತಿ. ಪುಷ್ಪರಾಜೇಶ್, ಅಧಕ್ಷರು, ಸೋಮವಾರ ಪೇಟೆ ತಾಲ್ಲೂಕು ಮಹಿಳಾ ಚುನಾಯಿತ ಪ್ರತಿನಿಧಿಗಳು ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ಹೆಚ್ಚಿನ ಅನುದಾನ ನೀಡಬೇಕು ಎಂದು ಮನವಿ ಮಾಡಿದರು.
- 15ನೇ ಕೇಂದ್ರ ಹಣಕಾಸು ಆಯೋಗವು ರಾಜ್ಯದ ವಿವಿಧ ಕ್ಷೇತ್ರಗಳ ಆರ್ಥಿಕ ತಜ್ಞರುಗಳನ್ನು ಆಹ್ವಾನಿಸಿದ ಸಭೆಯಲ್ಲಿ ಶ್ರೀ ವಿ.ವೈ.ಘೋರ್ಪಡೆ, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ರವರು ಮಾತನಾಡಿ ಈ ಕೆಳಗಿನ ಅಂಶಗಳನ್ನು 15ನೇ ಕೇಂದ್ರ ಹಣಕಾಸು ಆಯೋಗವು ಪರಿಗಣಿಸುವಂತೆ ಲಿಖಿತ ದಾಖಲೆಯೊಂದಿಗೆ ಮನವಿ ಮಾಡಿದರು.
- ಪಂಚಾಯಿತಿಗಳಿಗೆ ಸಂಪೂರ್ಣ ಹಣಕಾಸಿನ ಮಾಹಿತಿಯನ್ನು ಒದಗಿಸದೆ ಇದ್ದಲ್ಲಿ ಯೋಜನೆಗಳನ್ನು ತಯಾರಿಸುವುದು ಕಷ್ಟಸಾಧ್ಯ ವಾಗಲಿದೆಂದರು. ಈ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯು ತಳಮಟ್ಟದಿಂದ ಯೋಜನೆಗಳನ್ನು ರೂಪಿಸುವ ಉದ್ದೇಶದೊಂದಿಗೆ ಜಿಲ್ಲಾ ಯೋಜನಾ ಸಮಿತಿ ಹಾಗೂ ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಗಳನ್ನು ಬಲಪಡಿಸುವ ಕ್ರಮ ಕೈಗೊಳ್ಳುತ್ತಿದೆ.
- ರಾಜ್ಯ ವಲಯದ ಯೋಜನೆಗಳ ಅನುದಾನದ ಮಾಹಿತಿಯೂ ಸಹ ಮೂರು ತರಹ ಪಂಚಾಯಿತಿಗಳಿಗೆ ಅಗತ್ಯವಿದ್ದು ಅದನ್ನು ಯೋಜನೆ ತಯಾರಿಸುವ ಮುನ್ನ ಒದಗಿಸಲು ಅವಶ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಇದಲ್ಲದೇ, ವಿಕೇಂದ್ರೀಕರಣ ತತ್ವ ಪರಿಣಾಮಕಾರಿ ಅನುಷ್ಠಾನಗೊಳಿಸಲು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರು ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪರಿಶೀಲನಾ ಸಭೆಯನ್ನು ನಡೆಸಲು ಅವಕಾಶ ಕಲ್ಪಿಸಲಾಗಿದೆಂದರು.
- ಸಮಿತಿಯು ರಾಜ್ಯದಲ್ಲಿ ಹೆಚ್ಚು ಬಹು ಗ್ರಾಮ ಘನತ್ಯಾಜ್ಯ ವಿಲೇವಾರಿ ಘಟಕಗಳನ್ನು ಸ್ಥಾಪಿಸುವಂತೆ ಪ್ರೋತ್ಸಾಹಿಸಲು ಕ್ರಮ ವಹಿಸಲಾಗುತ್ತಿದೆ. ಲಿಖಿತ ದಾಖಲೆ ರೂಪದಲ್ಲಿ ಮನವಿಯನ್ನು 15ನೇ ಕೇಂದ್ರ ಹಣಕಾಸು ಆಯೋಗದ ಅಧ್ಯಕ್ಷರಿಗೆ ಸಭೆಯಲ್ಲಿ ಸಲ್ಲಿಸಿದರು.

ವರದಿ

# ಬಹು ಕಮಾನು ತಡೆಗೋಡೆ ನಿರ್ಮಾಣ



**ಜಿ. ಜಗದೀಶ ಭಾ.ಆ.ಸೇ**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯತ್, ಕೋಲಾರ

**ಹಿಂದಿನ ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ಸಚಿವರು ತಿಳಿಸಿರುವಂತೆ ಜಿಲ್ಲೆಯಲ್ಲಿ ಚೆಕ್ ಡ್ಯಾಂಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿದ್ದು ಈ ವರ್ಷದಲ್ಲಿ ಜಿಲ್ಲೆಯಲ್ಲಿ 1400 ಚೆಕ್ ಡ್ಯಾಂಗಳ ನಿರ್ಮಾಣ, 500 ಚೆಕ್ ಡ್ಯಾಂಗಳು ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, ಮಾರ್ಚ್ ತಿಂಗಳ ಒಳಗಾಗಿ 1400 ಚೆಕ್ ಡ್ಯಾಂಗಳನ್ನು ಅನುಷ್ಠಾನಗೊಳಿಸಲು ಎಲ್ಲಾ ತಯಾರಿಗಳನ್ನು ಮಾಡಲಾಗಿದೆ.**

ಕರ್ನಾಟಕ ರಾಜ್ಯದ ದಕ್ಷಿಣ ಬಯಲು ನಾಡಿನ ಪೂರ್ವಭಾಗದಲ್ಲಿ ಪಸರಿಸಿರುವ ಕೋಲಾರ ಜಿಲ್ಲೆಯು ಚಿನ್ನದ ನಾಡು, ಬಯಲು ಸೀಮೆಯ ಜಿಲ್ಲೆ ಎಂದು ಕರೆಯಲ್ಪಡುತ್ತದೆ. ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ 374916 ಹೆಕ್ಟೇರ್ ಆಗಿದ್ದು, ವಾಡಿಕೆ ಮಳೆ 724 ಎಂಎಂ ಬೀಳುತ್ತಿದೆ. ಜಿಲ್ಲೆಯ ರೈತರೊಂದಿಗೆ ಮಾನ್ಸೂನ್ ಮಾರುತಗಳು ಜೂಟಾಟವಾಡುತ್ತಿರುವುದು ದುರದೃಷ್ಟಕರ ಸಂಗತಿ. ಇದಕ್ಕೆ ನಿದರ್ಶನವೆಂಬಂತೆ ಕಳೆದ 10 ವರ್ಷಗಳಲ್ಲಿ 8 ವರ್ಷ ಬರಗಾಲ ಅಪ್ಪಳಿಸಿದೆ.



ಗ್ರಾಮೀಣ ಕೂಲಿ ಕಾರ್ಮಿಕರಿಗೆ 100 ದಿನದ ಕೆಲಸ ಒದಗಿಸುವುದರ ಜೊತೆಗೆ ಸಮುದಾಯ ಹಾಗೂ ವೈಯುಕ್ತಿಕ ಆಸ್ತಿ ಸೃಜನೆ ಮಾಡುವುದು, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ. ಜಿಲ್ಲಾ ಪಂಚಾಯತಿ ವತಿಯಿಂದ ಮಳೆ ನೀರು ಪೋಲಾಗದಂತೆ ಗ್ರಾಮೀಣ ಭಾಗದಲ್ಲಿ ನೀರು ಹರಿವು ಇರುವ ಕಾಲುವೆಗಳಲ್ಲಿ ನರೇಗಾ ಯೋಜನೆಯಲ್ಲಿ ಬಹು ಕಮಾನು ತಡೆ ಆಣೆ ನಿರ್ಮಿಸಲು ಪಣತೊಡಲಾಯಿತು. ಅದರಂತೆ ಜಿಲ್ಲೆಯ ಗ್ರಾಮ ಪಂಚಾಯತಿ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಕೋಲಾರ ರವರ ಉಸ್ತುವಾರಿಯಲ್ಲಿ ಸ್ಥಳವನ್ನು ಗುರ್ತಿಸಿ ಚೆಕ್ ಡ್ಯಾಂಗಳನ್ನು ನಿರ್ವಾಣ ಮಾಡಲು ಕ್ರಮಕೈಗೊಳ್ಳಲಾಗಿದೆ.

ಹಿಂದಿನ ಸನ್ಮಾನ್ಯ ಗ್ರಾಮೀಣಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ಸಚಿವರು ತಿಳಿಸಿರುವಂತೆ ಜಿಲ್ಲೆಯಲ್ಲಿ ಚೆಕ್ ಡ್ಯಾಂಗಳ ನಿರ್ಮಾಣಕ್ಕೆ ಹೆಚ್ಚಿನ ಆಧ್ಯತೆಯನ್ನು ನೀಡಲಾಗಿದ್ದು ಈ ವರ್ಷದಲ್ಲಿ ಜಿಲ್ಲೆಯಲ್ಲಿ 1400 ಚೆಕ್ ಡ್ಯಾಂಗಳ ನಿರ್ಮಾಣ ಮಾಡುವ ಗುರಿಯನ್ನು ಹೊಂದಿದ್ದು, ಈಗಾಗಲೇ ಸುಮಾರು 500 ಚೆಕ್ ಡ್ಯಾಂಗಳು ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, ಮಾರ್ಚ್ ತಿಂಗಳ ಒಳಗಾಗಿ 1400 ಚೆಕ್ ಡ್ಯಾಂಗಳನ್ನು ಅನುಷ್ಠಾನಗೊಳಿಸಲು ಎಲ್ಲಾ ತಯಾರಿಗಳನ್ನು ಮಾಡಲಾಗಿದೆ. ಇದಕ್ಕಾಗಿ ಜಿಲ್ಲೆಯಲ್ಲಿ ಸುಮಾರು 140 ಕೋಟಿ ಹಣವನ್ನು ನರೇಗಾ ಯೋಜನೆಯಡಿ ಬಳಸಿಕೊಳ್ಳಲಾಗುತ್ತದೆ. ಆ ಮೂಲಕ ಜಿಲ್ಲೆಯ ಅಂತರ್ಜಲ ವೃದ್ಧಿಗೆ ಹೆಚ್ಚಿನ ಶ್ರಮ ವಹಿಸಲಾಗಿದೆ. ಆ ಮೂಲಕ ಕೋಲಾರ ಜಿಲ್ಲೆಯನ್ನು ಬರಮುಕ್ತ ಜಿಲ್ಲೆ ಮಾಡುವ ಉದ್ದೇಶ ಹೊಂದಲಾಗಿದೆ.

ಕೆ.ಸಿ ವ್ಯಾಲಿ ಯೋಜನೆಯ ಬೆಂಗಳೂರಿನ ತ್ಯಾಜ್ಯ ಸಂಸ್ಕರಣಾ ಘಟಕಗಳ ನೀರು ಜಿಲ್ಲೆಗೆ ಹರಿಯುತ್ತಿದ್ದು, ಜುಲೈ ಕೊನೆಗೆ 330 ರಿಂದ 340 ಎಂಎಲ್‌ಡಿ ಯಷ್ಟು ನೀರು ಜಿಲ್ಲೆಗೆ ಹರಿದು ಬರಲು ಎಲ್ಲಾ ತಯಾರಿಗಳನ್ನು ಮಾಡಿಕೊಳ್ಳಲಾಗಿದೆ. ಈ ವರ್ಷದ ಕೊನೆಯವರೆಗೂ ಜಿಲ್ಲೆಯಲ್ಲಿ ಸುಮಾರು 136 ಕೆರೆಗಳನ್ನು ತುಂಬಿಸುವ ಗುರಿಯನ್ನು ಹೊಂದಲಾಗಿದೆ. ಕೆಲವೊಂದು ಪ್ರದೇಶಗಳಲ್ಲಿ ಒಂದು ಕೆರೆಯಿಂದ ಮತ್ತೊಂದು ಕೆರೆಗೆ ಸುಮಾರು 3 ರಿಂದ 4 ಕಿ.ಮೀ ಅಂತರದ ದೂರವಿದ್ದು ಅಂತಹ ಪ್ರದೇಶಗಳನ್ನು ಗುರ್ತಿಸಿ ಅಲ್ಲಿರುವಂತಹ ರೈತರಿಗೆ ಅನುಕೂಲವಾಗುವಂತೆ ಒಂದು ಕಿ.ಮೀ ಅಂತರದಲ್ಲಿ ನರೇಗಾ ಯೋಜನೆಯನ್ನು ಬಳಸಿಕೊಂಡು



ದೊಡ್ಡ ಮಟ್ಟದಲ್ಲಿ ಚೆಕ್ ಡ್ಯಾಂಗಳು ನಿರ್ಮಾಣ ಮಾಡಿ ಅಂತರ್ಜಲ ವೃದ್ದಿಸಲು ಹಾಗೂ ಮರುಪೂರಣ ಮಾಡಲು ಯೋಜನೆಯನ್ನು ನಿರ್ಮಿಸಿ ಪಾಲಾರ್ ನದಿಗೆ 11 ಚೆಕ್ ಡ್ಯಾಂ ನಿರ್ಮಿಸಲಾಗಿದೆ.

ಈ ಮೂಲಕ ಅಂತರ್ಜಲ ಹೆಚ್ಚು ಮಾಡುವ ಮೂಲಕ ರೈತರ ಬತ್ತಿ ಹೋದ ಬೋರ್‌ವೆಲ್‌ಗಳು ಮನಃ ನೀರು ಬಂದಿರುವುದು ಸಂತಸದ ವಿಚಾರ ಆಗಿರುತ್ತದೆ.

ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯ ಹಿಂದಿನ ಮಾನ್ಯ ಸಚಿವರು, ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ, ಮತ್ತು ಆಯುಕ್ತರು ಎಂ.ಜಿ.ಎನ್.ಆರ್.ಇ.ಜಿ.ಎ, ರವರು ಜಿಲ್ಲೆಯ ಕೋಲಾರ ತಾಲ್ಲೂಕಿನಲ್ಲಿ ನಿರ್ಮಾಣಗೊಂಡ ಬಹು ಕಮಾನು ತಡೆ ಆಣೆಗಳ (ಮಲ್ಟಿ ಆರ್ಚ್ ಚೆಕ್ ಡ್ಯಾಂ) ಸ್ಥಳ ಪರಿಶೀಲನೆ ಮಾಡಿ ಕಾಮಗಾರಿಗಳು ಉತ್ತಮವಾಗಿ ಮೂಡಿ ಬಂದಿರುವುದಾಗಿ ಪ್ರಶಂಶೆ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿ ದಿನೇ ದಿನೇ ಅಂತರ್ಜಲ ಕುಸಿಯುತ್ತಿದ್ದು, ಈ ಜಿಲ್ಲೆಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆಗಿ ಅಧಿಕಾರ ವಹಿಸಿಕೊಂಡ ದಿನದಿಂದ ಮಾನ್ಯ ಸಚಿವರು, ಪ್ರಧಾನ ಕಾರ್ಯದರ್ಶಿಗಳು ಹಾಗೂ ಎಂ.ಜಿ.ಎನ್. ಆರ್.ಇ.ಜಿ.ಎ, ಇವರ ಮಾರ್ಗದರ್ಶನದಲ್ಲಿ ಜಿಲ್ಲೆಯಲ್ಲಿ ಅಂತರ್ಜಲ ಹೆಚ್ಚಿಸಲು ದೊಡ್ಡ ಪ್ರಮಾಣದಲ್ಲಿ ಕಾಮಗಾರಿಗಳನ್ನು ಕೈಗೊಂಡು ಈ ವರ್ಷದ ಅಂತ್ಯಕ್ಕೆ ಸುಮಾರು 1400 ಚೆಕ್ ಡ್ಯಾಂಗಳು ಹಾಗೂ ಜಿಲ್ಲೆಯ ಎಲ್ಲಾ ಗೋಕುಂಟೆಗಳು ಹಾಗೂ ಕೆರೆ ಹೂಳು ತೆಗೆಯುವ ಕಾಮಗಾರಿಗಳು ಮತ್ತು ಕಲ್ಯಾಣಿಗಳ ಪುನಃಶ್ಚೇತನ ಕಾಮಗಾರಿಗಳ ಜೊತೆಗೆ ಪ್ರತಿ ಗ್ರಾಮ ಪಂಚಾಯಿತಿಗೆ 1000 ಗಿಡಗಳನ್ನು ನೆಡಸಲಾಗಿದೆ. ಆ ಮೂಲಕ 156 ಪಂಚಾಯಿತಿಗಳಿಂದ ಸುಮಾರು 2 ಲಕ್ಷ ಗಿಡಗಳನ್ನು ನೆಡಸಲಾಗಿದೆ. ಈ ಮೂಲಕ ಬರಡು ನಾಡಾದ ಕೋಲಾರ ಜಿಲ್ಲೆಯಲ್ಲಿ ಹಸಿರು ಕೋಲಾರ ಮಾಡಲು ಅಳಿಲು ಸೇವೆ ಸಲ್ಲಿಸಲಾಗುತ್ತಿದೆ.

ಈ ಕಾರ್ಯದಲ್ಲಿ ಶ್ರಮಿಸಿದ ಜಿಲ್ಲೆಯ ಎಲ್ಲಾ ಪಂಚಾಯತಿಯ ಜನ ಪ್ರತಿನಿಧಿಗಳು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಅವರ ಅಧೀನ ಅಧಿಕಾರಿಗಳು ಹಾಗೂ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಅರಣ್ಯ ಇಲಾಖೆಯ ಸಹಯೋಗವನ್ನು ಸ್ಮರಿಸಬೇಕು.

ವರದಿ



ಎಂ.ಕೆ.ಕೆಂಪೇಗೌಡ

ಜಂಟಿ ನಿರ್ದೇಶಕರು
ಸಾಮಾಜಿಕ ಲೆಕ್ಕ ಪರಿಶೋಧನಾ ನಿರ್ದೇಶನಾಲಯ
ಹಾಗೂ ಸಲಹೆಗಾರರು (ಪಂ.ರಾಜ್)
ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ

**ಗ್ರಾಮ ಮಟ್ಟದಲ್ಲಿ ಸ್ಥಳೀಯ ಚುನಾಯಿತ ಸಂವಿಧಾನಬದ್ಧ ಸಂಸ್ಥೆಗಳಾಗಿರುವ ಗ್ರಾಮ ಪಂಚಾಯತಿಗಳು ತಮ್ಮ ವ್ಯಾಪ್ತಿಯಲ್ಲಿ ನಡೆಯುವ ಎಲ್ಲಾ ಅಭಿವೃದ್ಧಿ ಕಾರ್ಯಗಳ ಮೇಲ್ವಿಚಾರಣೆ ಮಾಡಬೇಕೆಂಬುದು ಗ್ರಾಮ ಸ್ವರಾಜ್ಯ ಕಲ್ಪನೆಯ ಆಶಯಕ್ಕನುಗುಣವಾಗಿಯೇ ಇದೆ.**

# ಗ್ರಾಮ ಪಂಚಾಯತಿಗಳ ಸಬಲೀಕರಣಕ್ಕೆ ಕೆಡಿಪಿ ಜಾರಿ

ಸಂವಿಧಾನದ 73ನೇ ತಿದ್ದುಪಡಿಯ ಆಶಯದಂತೆ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ವರ್ಗಾವಣೆ ಮಾಡಿದ ಕೀರ್ತಿ ಕರ್ನಾಟಕ ರಾಜ್ಯಕ್ಕೆ ಸಲ್ಲುತ್ತದೆ. ಸಂವಿಧಾನದಲ್ಲಿ ಕಡ್ಡಾಯಪಡಿಸಿರುವಂತೆ ಕರ್ನಾಟಕ ರಾಜ್ಯ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ, 1993ರನ್ವಯ ಜಾರಿಗೊಳಿಸಿದೆ. ಗ್ರಾಮ ಮಟ್ಟದಲ್ಲಿ ರಚಿತವಾಗಿರುವ ಗ್ರಾಮ ಪಂಚಾಯತಿಗಳಿಗೆ ಹೆಚ್ಚಿನ ಅಧಿಕಾರ ನೀಡಬೇಕೆಂಬುದು ಸರ್ಕಾರದ ಉದ್ದೇಶ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮೂಲಕ ಜಾರಿಯಾಗಿರುವ ಹಲವಾರು ಯೋಜನೆಗಳನ್ನು ಗ್ರಾಮ ಪಂಚಾಯತಿಗಳು ಅನುಷ್ಠಾನಗೊಳಿಸಲಾಗುತ್ತಿದೆ. ಸಂಬಂಧಿಸಿದ ಅನುದಾನವನ್ನು ಗ್ರಾಮ ಪಂಚಾಯತಿಗಳಿಗೆ ನೇರವಾಗಿ ಬಿಡುಗಡೆ ಮಾಡಲಾಗುತ್ತಿದೆ. ಇದಲ್ಲದೇ, ಗ್ರಾಮ ಪಂಚಾಯತಿಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಹಣಕಾಸು ಆಯೋಗಗಳ ಶಿಫಾರಸ್ಸಿನನ್ವಯ ನೀಡಲಾಗಿರುವ ಅನುದಾನವನ್ನು ನೀಡಲಾಗುತ್ತದೆ. ಗ್ರಾಮ ಪಂಚಾಯತಿಗಳು ತಮ್ಮ ವ್ಯಾಪ್ತಿಯೊಳಗೆ ಆಸ್ತಿಗಳು ಹಾಗೂ ವಾಣಿಜ್ಯ ಮತ್ತಿತರ ವಹಿವಾಟುಗಳ ಮೇಲೆ ತೆರಿಗೆ ವಿಧಿಸುವ ವಿಶೇಷ ಅಧಿಕಾರವನ್ನು ನೀಡಿ ಸ್ವಂತ ಸಂಪನ್ಮೂಲ ಸಂಗ್ರಹಿಸಲು ಅವಕಾಶ ಕಲ್ಪಿಸಲಾಗಿದೆ. ಗ್ರಾಮ ಪಂಚಾಯತಿಗಳು ಈ ಎಲ್ಲಾ ಅನುದಾನ ಹಾಗೂ ಅಧಿಕಾರ ಬಳಸಿಕೊಂಡು ಮಹಾತ್ಮಗಾಂಧಿಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆಯಂತೆ ಸ್ವಯಂ ಆಡಳಿತ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿವೆ.

ಗ್ರಾಮ ಮಟ್ಟದಲ್ಲಿ ಸ್ಥಳೀಯ ಚುನಾಯಿತ ಸಂವಿಧಾನಬದ್ಧ ಸಂಸ್ಥೆಗಳಾಗಿರುವ ಗ್ರಾಮ ಪಂಚಾಯತಿಗಳು ತಮ್ಮ ವ್ಯಾಪ್ತಿಯಲ್ಲಿ ನಡೆಯುವ ಎಲ್ಲಾ ಅಭಿವೃದ್ಧಿ ಕಾರ್ಯಗಳ ಮೇಲ್ವಿಚಾರಣೆ ಮಾಡಬೇಕೆಂಬುದು ಗ್ರಾಮ ಸ್ವರಾಜ್ಯ ಕಲ್ಪನೆಯ ಆಶಯಕ್ಕನುಗುಣವಾಗಿಯೇ ಇದೆ. ಕರ್ನಾಟಕ ಸರ್ಕಾರ ಗ್ರಾಮ ಪಂಚಾಯತಿ ಮಟ್ಟದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪರಿಶೀಲಿಸುವ ವಿಶೇಷ ಅಧಿಕಾರವನ್ನು ಗ್ರಾಮ ಪಂಚಾಯತಿಗಳಿಗೆ ನೀಡಿ ಆದೇಶ ಹೊರಡಿಸಿದೆ. ಪ್ರಸ್ತುತ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪರಿಶೀಲಿಸುವ ವ್ಯವಸ್ಥೆ ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಮಾತ್ರವಿತ್ತು. ಈ ವಿಶೇಷವಾದ

ಅಧಿಕಾರವನ್ನು ಗ್ರಾಮ ಪಂಚಾಯತಿಗಳಿಗೆ ನೀಡಿ ದಿನಾಂಕ:11-06-2019ರಂದು ಹೊರಡಿಸಿರುವ ಆದೇಶ ಐತಿಹಾಸಿಕ ಮಹತ್ವ ಪಡೆದಿದೆ. ಈ ಆದೇಶದನ್ವಯ ಗ್ರಾಮ ಪಂಚಾಯತಿಗಳ ಮಟ್ಟದಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಗ್ರಾಮ ಪಂಚಾಯತಿ ಅಧ್ಯಕ್ಷರು ತಮ್ಮ ವ್ಯಾಪ್ತಿಯಲ್ಲಿ ಅನುಷ್ಠಾನವಾಗುವ ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯತಿ ಮತ್ತು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಯೋಜನೆಗಳ ಪ್ರಗತಿ ಪರಿಶೀಲನೆಯನ್ನು ನಡೆಸಬಹುದಾಗಿದೆ.



ಈ ಪರಿಶೀಲನಾ ಸಭೆಗೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಕೃಷಿ, ತೋಟಗಾರಿಕೆ, ಮೀನುಗಾರಿಕೆ, ಹೈನುಗಾರಿಕೆ, ರೇಷ್ಮೆ, ಅರಣ್ಯ, ಶಿಕ್ಷಣ, ಆರೋಗ್ಯ, ಮಹಿಳಾ & ಮಕ್ಕಳ ಕಲ್ಯಾಣ, ಸಮಾಜ ಕಲ್ಯಾಣ, ಗೃಹ ಕೈಗಾರಿಕೆ, ಸಣ್ಣ ನೀರಾವರಿ, ಸಾರ್ವಜನಿಕ ಪಡಿತರ ವ್ಯವಸ್ಥೆ, ಗ್ರಾಮೀಣ ವಸತಿ, ಕ್ರೀಡೆ, ಮಾರುಕಟ್ಟೆ, ಮುಂತಾದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿ, ತಮ್ಮ ಇಲಾಖಾ ವತಿಯಿಂದ ಕೈಗೊಂಡಿರುವ ಯೋಜನೆಗಳ ಕುರಿತಂತೆ ಮಾಹಿತಿ ನೀಡಬೇಕಾಗುತ್ತದೆ. ಇದರಿಂದಾಗಿ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿನ ಯೋಜನೆಗಳು ಪಾರದರ್ಶಕವಾಗಿ ಜಾರಿಗೊಳ್ಳುವುದರ ಜೊತೆಗೆ ಪರಿಣಾಮಕಾರಿಯಾಗಿಯು ಅನುಷ್ಠಾನಗೊಳಿಸುವುದು. ಗ್ರಾಮ ಪಂಚಾಯತಿಯು ಈ ಎಲ್ಲಾ ಯೋಜನೆಗಳ ಅನುಷ್ಠಾನದ ಮೇಲೆ ಪರೋಕ್ಷವಾಗಿ ಮೇಲ್ವಿಚಾರಣೆ ಮಾಡುವ ಮೂಲಕ ತನ್ನ ಹಿಡಿತವನ್ನು ಸಾಧಿಸಲು ಸಾಧ್ಯವಾಗುತ್ತದೆ. ತನ್ಮೂಲಕ ಗ್ರಾಮ ಸ್ವರಾಜ್ಯ ಕಲ್ಪನೆ ಸಾಕಾರಗೊಳ್ಳುವಲ್ಲಿ ಪರಿಣಮಿಸುತ್ತದೆ.

ಗ್ರಾಮ ಪಂಚಾಯತಿಗಳು ತಮಗೆ ನೀಡಲಾದ ಈ ಅಧಿಕಾರವನ್ನು ಸಮರ್ಥವಾಗಿ ಬಳಸಿಕೊಂಡು, ಗ್ರಾಮ ಸ್ವರಾಜ್ಯದ ಆಶಯವನ್ನು ಈಡೇರಿಸಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ. ಈ ಆದೇಶದಂತೆ ಎಲ್ಲಾ ಗ್ರಾಮ ಪಂಚಾಯತಿಗಳು ಪ್ರತಿ ವರ್ಷದ ಏಪ್ರಿಲ್, ಜುಲೈ, ಅಕ್ಟೋಬರ್ ಮತ್ತು ಜನವರಿ ಮಾಹೆಯಲ್ಲಿ ತ್ರೈಮಾಸಿಕವಾಗಿ ಕೆಡಿಪಿ ಸಭೆಗಳನ್ನು ನಡೆಸಬೇಕಾಗುತ್ತದೆ. ಗ್ರಾಮ ಪಂಚಾಯತಿಯ ಅಧ್ಯಕ್ಷರು ಈ ಸಭೆಯ ಅಧ್ಯಕ್ಷತೆ ವಹಿಸಿ, ಪ್ರಗತಿ ಪರಿಶೀಲನೆ ಮಾಡಬೇಕಾಗುತ್ತದೆ. ಗ್ರಾಮ ಪಂಚಾಯತಿ ಉಪಾಧ್ಯಕ್ಷರು ಈ ಸಮಿತಿಯ ಉಪಾಧ್ಯಕ್ಷರು ಆಗಿದ್ದು, ಅಧ್ಯಕ್ಷರ ಗೈರು ಹಾಜರಿ ಅಥವಾ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು ಪ್ರಗತಿ ಪರಿಶೀಲನೆ ನಡೆಸಬಹುದು. ಪಂಚಾಯತಿ ಅಭಿವೃದ್ಧಿ ಅಧಿಕಾರಿ ಸದಸ್ಯ ಕಾರ್ಯದರ್ಶಿಯಾಗಿದ್ದು, ಪ್ರಗತಿ ಪರಿಶೀಲನೆಗೆ ಸೂಕ್ತ ನೆರವು ಮತ್ತು ಮುಂದುವರಿಕೆ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಅಧ್ಯಕ್ಷರ ಜೊತೆ ಚರ್ಚಿಸಿ ದಿನಾಂಕ ನಿಗದಿಪಡಿಸಿ ಮಾಹಿತಿ ಒದಗಿಸುವುದು. ನಿಗಧಿತ ನಮೂನೆಯಲ್ಲಿ ಮಾಹಿತಿ ಪಡೆಯುವುದು. ಸ್ವೀಕೃತವಾದ ಮಾಹಿತಿಯನ್ನು ಒಟ್ಟುಗೂಡಿಸಿ ಪರಿಶೀಲನೆಗೆ ವ್ಯವಸ್ಥೆ ಮಾಡುವುದು. ಸಭಾ ನಡವಳಿಗಳನ್ನು ಸಿದ್ಧಪಡಿಸಿ ಅಧ್ಯಕ್ಷರ ಅನುಮೋದನೆ ಪಡೆದು ಸಂಬಂಧಿಸಿದವರಿಗೆ ಕಳುಹಿಸಿಕೊಡುವುದು. ಸಭಾ ನಡವಳಿಗಳ ಮೇಲೆ ಅನುಪಾಲನಾ ವರದಿಗಳನ್ನು ಪಡೆದು, ಅದರ ಮೇಲೆ ಮುಂದುವರಿಕೆ ಕ್ರಮಗಳನ್ನು ಕೈಗೊಳ್ಳುವುದು. ಹೀಗೆ ಗ್ರಾಮ ಪಂಚಾಯತಿ ಮಟ್ಟದ ಕೆಡಿಪಿ ಸಭೆ ಯಶಸ್ವಿಯಾಗಲು ಎಲ್ಲಾ ರೀತಿಯ ಅವಶ್ಯಕ ಕ್ರಮಗಳನ್ನು ಕೈಗೊಳ್ಳುವುದು ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಜವಾಬ್ದಾರಿಯಾಗಿರುತ್ತದೆ.

ಗ್ರಾಮ ಪಂಚಾಯತಿ ಅಧ್ಯಕ್ಷರು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಆಸಕ್ತಿವಹಿಸಿ, ಗ್ರಾಮ ಪಂಚಾಯತಿ ಮಟ್ಟದ ಕೆಡಿಪಿ ಸಭೆಯನ್ನು ಯಶಸ್ವಿಯಾಗಿ ನಡೆಸಿದಲ್ಲಿ, ಗ್ರಾಮ ಪಂಚಾಯತಿ ವ್ಯಾಪ್ತಿಯ ಅಭಿವೃದ್ಧಿ ಯೋಜನೆಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುತ್ತವೆ. ಯೋಜನೆಗಳ ಅನುದಾನ ಸದ್ಬಳಕೆಯಾಗುತ್ತದೆ. ಅನುಷ್ಠಾನದಲ್ಲಿ ಏನಾದರೂ ಲೋಪದೋಷಗಳಿದ್ದಲ್ಲಿ ಸರಿಪಡಿಸಲು ಸಹಾಯಕವಾಗುತ್ತದೆ. ವೈಯಕ್ತಿಕ ಸವಲತ್ತುಗಳನ್ನು ನೀಡುವ ಯೋಜನೆಗಳಲ್ಲಿ, ಸವಲತ್ತುಗಳು ಅರ್ಹ ಫಲಾನುಭವಿಗಳಿಗೆ ದೊರಕುತ್ತವೆ.

ಫಲಾನುಭವಿಗಳು ಸಹ ಯೋಜನೆಯ ಲಾಭವನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತಾರೆ. ಫಲಾನುಭವಿಗಳ ಆಯ್ಕೆಯಲ್ಲಿ ಹಾಗೂ ಯೋಜನೆಗಳ ಅನುಷ್ಠಾನದಲ್ಲಿ ಉದ್ದೇಶ ಪೂರಕ ಅವ್ಯವಹಾರಗಳಾಗಿದ್ದಲ್ಲಿ, ಅಂಥಹ ಅವ್ಯವಹಾರಗಳು ಪರಿಶೀಲನೆಯ ವೇಳೆ ಬಯಲಿಗೆ ಬಂದು, ಅವ್ಯವಹಾರಗಳಲ್ಲಿ ಭಾಗಿಯಾದವರ ಮೇಲೆ ಶಿಸ್ತಿನ ಕ್ರಮ ಜರುಗಿಸಲು ಅವಕಾಶವಾಗುತ್ತದೆ. ಸ್ಥಳೀಯ ಮಟ್ಟದ ಅಧಿಕಾರಿಗಳಲ್ಲಿ ಉತ್ತರದಾಯತ್ವ ಪ್ರವೃತ್ತಿ ಬೆಳೆಯುತ್ತದೆ. ಹಲವಾರು ಇಲಾಖೆಗಳಲ್ಲಿ ಕ್ಷೇತ್ರ ಮಟ್ಟದ ಮೇಲ್ವಿಚಾರಣಾ ಅಧಿಕಾರಿಗಳು ಇಲ್ಲದೆ ಅನುಷ್ಠಾನದಲ್ಲಿ ಆಗುತ್ತಿದ್ದ ಲೋಪಗಳು ತಪ್ಪುತ್ತವೆ. ಹೀಗೆ ಗ್ರಾಮ ಪಂಚಾಯತಿ ಮಟ್ಟದ ಕೆಡಿಪಿ ಪರಿಶೀಲನಾ ಸಭೆಯಿಂದ ಹಲವು ಆಯಾಮಗಳಲ್ಲಿ ಸಕಾರಾತ್ಮಕ ಅಂಶಗಳಿರುತ್ತವೆ.

ಜೊತೆಗೆ ಗ್ರಾಮ ಪಂಚಾಯತಿ ಅಧ್ಯಕ್ಷರ ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಕಾರ್ಯದಕ್ಷತೆ ಹೆಚ್ಚುತ್ತದೆ. ಅಧ್ಯಕ್ಷರಲ್ಲಿ ನಾಯಕತ್ವ ಗುಣ ಬೆಳೆದು ಭವಿಷ್ಯದಲ್ಲಿ ಹೆಚ್ಚಿನ ಜವಾಬ್ದಾರಿಗಳನ್ನು ನಿರ್ವಹಿಸುವ ಸಾಮರ್ಥ್ಯ ಲಭಿಸುತ್ತದೆ. ಈ ಉದ್ದೇಶದಿಂದ ಎಲ್ಲಾ ಗ್ರಾಮ ಪಂಚಾಯತ್ ಅಧ್ಯಕ್ಷರುಗಳು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಗ್ರಾಮ ಪಂಚಾಯತಿ ಕೆಡಿಪಿ ಸಭೆಗಳನ್ನು ಪರಿಣಾಮಕಾರಿಯಾಗಿ ನಡೆಸಲು ಕ್ರಮ ಕೈಗೊಳ್ಳಬೇಕಾಗಿದೆ.

ಗ್ರಾಮ ಪಂಚಾಯತಿ ಕೆಡಿಪಿ ಸಭೆಗಳನ್ನು ನಡೆಸಲು ಹೊರಡಿಸಿರುವ ಆದೇಶದ ಬಗ್ಗೆ ರಾಜ್ಯಾದ್ಯಾಂತ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮಂಡ್ಯ ಜಿಲ್ಲೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ವಿಶೇಷ ಆಸಕ್ತಿವಹಿಸಿ, ಜಿಲ್ಲಾ ಮಟ್ಟದಲ್ಲಿ ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರು ಹಾಗೂ ಅಭಿವೃದ್ಧಿ ಅಧಿಕಾರಿಗಳಿಗೆ ಕಾರ್ಯಗಾರ ನಡೆಸಿ ಕೆಡಿಪಿ ಸಭೆಗಳನ್ನು ನಡೆಸುವ ಬಗ್ಗೆ ಮಾಹಿತಿ ನೀಡಿರುತ್ತಾರೆ. ಜುಲೈ ಮಾಹೆಯಲ್ಲಿ ಜಿಲ್ಲೆಯಾದ್ಯಾಂತ ಕೆಡಿಪಿ ಸಭೆ ನಡೆದಿದ್ದು, ಎಲ್ಲಾ ತಾಲ್ಲೂಕುಗಳಲ್ಲಿಯೂ ಪ್ರವಾಸ ಮಾಡಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕೆಲವು ಕೆಡಿಪಿ ಸಭೆಗಳಲ್ಲಿ ಸ್ವತಹ: ಭಾಗವಹಿಸಿ ವೀಕ್ಷಿಸಿ ಮಾರ್ಗದರ್ಶನ ನೀಡಿರುತ್ತಾರೆ. ಈ ಬಗ್ಗೆ ಪ್ರತ್ಯೇಕವಾದ ಲೇಖನ ಸಹ ಪ್ರಕಟಿಸಲಾಗಿದೆ.

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಹೆನ್ನಾಗರ ಗ್ರಾಮ ಪಂಚಾಯತಿಯಲ್ಲಿ ರಾಜ್ಯದಲ್ಲಿಯೇ ಮೊದಲಿಗೆ ದಿನಾಂಕ:10-07-2019ರಂದು ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀ.ಆರ್.ಕೆ.ಕೇಶವರೆಡ್ಡಿರವರ ಅಧ್ಯಕ್ಷತೆಯಲ್ಲಿ ಕೆಡಿಪಿ ಸಭೆ ಯಶಸ್ವಿಯಾಗಿ ನಡೆದಿದ್ದು, ಈ ಸಭೆಯಲ್ಲಿ 20ಕ್ಕಿಂತಲೂ ಹೆಚ್ಚು ಇಲಾಖಾ ಅಧಿಕಾರಿಗಳು ಭಾಗವಹಿಸಿರುತ್ತಾರೆ. ಕೃಷಿ, ತೋಟಗಾರಿಕೆ, ರೇಷ್ಮೆ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಅರಣ್ಯ, ಪಶುಸಂಗೋಪನೆ, ಬೆಸ್ಕಾಂ, ಮುಂತಾದ ಎಲ್ಲಾ ಇಲಾಖೆಗಳ ವಿಷಯವು ಚರ್ಚೆಯಾಗಿರುತ್ತದೆ.

ಶಿಕ್ಷಣಕ್ಕೆ ಸಂಬಂಧಿಸಿದಂತೆ ಕಾಚನಾಯಕನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 3 ಎಕರೆ ಜಾಗವಿದ್ದು, ಕೆಲವು ಭಾಗ ಒತ್ತುವರಿಯಾಗಿದ್ದು, ಅದನ್ನು ಸರ್ವೆ ಮಾಡಿಸಿ ಹದ್ದುಬಸ್ತು ನಿಗದಿಪಡಿಸಲು ತೀರ್ಮಾನಿಸಲಾಗಿದೆ. ಬೆಸ್ಕಾಂ ಇಲಾಖೆಗೆ ಸಂಬಂಧಿಸಿದಂತೆ ವಿದ್ಯುತ್ ಕಂಬಗಳು ಹಳೆಯವಾಗಿದ್ದು, ಅವುಗಳನ್ನು ಕೂಡಲೇ ಸ್ಥಳಾಂತರಿಸಲು ಸ್ಥಳೀಯ ಅಧಿಕಾರಿ ಒಪ್ಪಿರುವುದಾಗಿ ನಡವಳಿಕೆಯಾಗಿರುತ್ತದೆ. ಟ್ರಾನ್ಸ್‌ಪಾರ್ಮರ್ ಸಮಸ್ಯೆ, ವಿದ್ಯುತ್ ವ್ಯತ್ಯಯದ ಸಮಸ್ಯೆ ಚರ್ಚೆಯಾಗಿದ್ದು, ಅವುಗಳನ್ನು ಕಾಲಮಿತಿಯಲ್ಲಿ ಸರಿಪಡಿಸುವುದಾಗಿ ಇಲಾಖೆ ಅಧಿಕಾರಿ ಭರವಸೆ ನೀಡಿರುತ್ತಾರೆ. ಸಹಕಾರ ಇಲಾಖೆಗೆ ಸಂಬಂಧಿಸಿದಂತೆ ರೈತರು ಹಾಗೂ ಹಾಲು ಉತ್ಪಾದಕ ಸಹಕಾರ ಸಂಘದ ಕಾರ್ಯದರ್ಶಿರವರು ಮಾಹಿತಿ ನೀಡಿರುತ್ತಾರೆ.

ಕಂದಾಯ ಇಲಾಖೆಯ ಸ್ಥಳೀಯ ಗ್ರಾಮ ಲೆಕ್ಕಾಧಿಕಾರಿಗಳು ಭಾಗವಹಿಸಿ 94(ಸಿ)ರಡಿ ಅರ್ಜಿ ಹಾಕುವ ಸಂಬಂಧ ಹಾಗೂ ವೃದ್ಧರಿಗೆ, ಅಂಗವಿಕಲರಿಗೆ, ವಿಧವೆಯರು, ಪಿಂಚಣಿ ನೀಡುವ ಸಂಬಂಧ ಮಾಹಿತಿ ನೀಡಿರುತ್ತಾರೆ. ಹೀಗೆ ಹೆನ್ನಾಗರ ಗ್ರಾಮ ಪಂಚಾಯತಿ ಕೆಡಿಪಿ ಸಭೆಯಲ್ಲಿ ಹಲವಾರು ವಿಚಾರಗಳು ಚರ್ಚೆಯಾಗಿ ಹಲವಾರು ಸಮಸ್ಯೆಗಳಿಗೆ ಪರಿಹಾರ ದೊರಕಿರುವುದು ಕಂಡುಬಂದಿರುತ್ತದೆ. ಅರ್ಥಾತ್ ಗ್ರಾಮ ಪಂಚಾಯತಿ ಕೆಡಿಪಿ ಸಭೆಯ ಉದ್ದೇಶ ಯಶಸ್ವಿಯಾಗಿರುವುದಕ್ಕೆ ಉತ್ತಮ ಉದಾಹರಣೆಯಾಗಿದೆ. ಇದೆ ಮಾದರಿಯಲ್ಲಿ ಎಲ್ಲಾ ಗ್ರಾಮ ಪಂಚಾಯತಿಗಳು ಪರಿಣಾಮಕಾರಿಯಾಗಿ ಗ್ರಾಮ ಪಂಚಾಯತಿ ಕೆಡಿಪಿ ಸಭೆಗಳನ್ನು ನಡೆಸಿ ಸರ್ಕಾರದ ಆಶಯಗಳನ್ನು ಯಶಸ್ವಿಗೊಳಿಸುವರೆಂದು ನಿರೀಕ್ಷಿಸಲಾಗಿದೆ.

ವರದಿ

# ಮಂಡ್ಯ ಜಿಲ್ಲೆಯಲ್ಲಿ ಕೆ.ಡಿ.ಪಿ ಸಭೆ ಸಾಧನೆ


ಕೆ. ಚೇತನ್

ಜಿಲ್ಲಾ ಪಂಚಾಯತ್, ಮಂಡ್ಯ


ರಾಜ್ಯ ಸರ್ಕಾರದ ಸದುದ್ದೇಶ ಭವಿಷ್ಯದಲ್ಲಿ ಹೆಚ್ಚಿನ ಫಲ ನೀಡಲಿದ್ದು ನಿರೀಕ್ಷೆಗಳನ್ನು ಮಂಡ್ಯ ಜಿಲ್ಲೆ ವ್ಯಾಪ್ತಿಯ ಗ್ರಾಮ ಪಂಚಾಯತಿ ಹಂತದಲ್ಲಿ ನಡೆದಿರುವ ತ್ರೈಮಾಸಿಕ ಕೆ.ಡಿ.ಪಿ. ಸಭೆ ಹುಟ್ಟಿಸಿದೆ. ಗ್ರಾಮ ಪಂಚಾಯತ್ ಮಟ್ಟದ ಸಭೆ ಎಂದು ಉಪೇಕ್ಷೆ ಅಥವಾ ನಿರ್ಲಕ್ಷ್ಯ ಮಾಡದೇ ಗ್ರಾಮ ಪಂಚಾಯತಿ ವ್ಯಾಪ್ತಿಯ ಹೋಬಳಿ ಮತ್ತು ಎಲ್ಲಾ ಅನುಷ್ಠಾನ ಇಲಾಖೆಗಳ ಸ್ಥಳೀಯ ಅಧಿಕಾರಿಗಳು ಭಾಗವಹಿಸಿ ಸಹಕರಿಸುವ ಮೂಲಕ ಸ್ಪಂದನೆ ತೋರಿದ್ದು ಆಶಾದಾಯಕ ಅಂಶ.

ರಾಜಕೀಯ ಕಾರಣಕ್ಕಾಗಿ ಒಂದಲ್ಲಾ ಒಂದು ಕಾರಣಕ್ಕೆ ಸದಾ ಸುದ್ದಿಯಲ್ಲಿರುವ ಸಕ್ಕರೆ ಜಿಲ್ಲೆ ಮಂಡ್ಯ ಈಗ ಮತ್ತೊಂದು ಕಾರಣಕ್ಕೆ ಸುದ್ದಿಯಲ್ಲಿದೆ. ಇದುವರೆವಿಗೂ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ (ಕೆ.ಡಿ.ಪಿ)ಗಳ ಪ್ರಗತಿ ಪರಿಶೀಲನೆ ನಡೆಸುವ ಸಭೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ನಡೆಯುತಿತ್ತು. ರಾಜ್ಯ ಸರ್ಕಾರ ಇದೀಗ ಗ್ರಾಮ ಪಂಚಾಯತಿ ಹಂತದಲ್ಲೂ ಕೆ.ಡಿ.ಪಿ. ಸಭೆ ನಡೆಸುವ ಅವಕಾಶ ಕಲ್ಪಿಸಿ ಆದೇಶ ಹೊರಡಿಸಿದ 50 ದಿನಗಳಲ್ಲೇ ಮಂಡ್ಯ ಜಿಲ್ಲೆಯ ಎಲ್ಲಾ 233 ಗ್ರಾಮ ಪಂಚಾಯತಿಗಳಲ್ಲೂ ಕೆ.ಡಿ.ಪಿ. ಸಭೆ ಯಶಸ್ವಿಯಾಗಿ ನಡೆದಿರುವುದು ವಿಶೇಷ !

ಅಧಿಕಾರಿ ವಿಕೇಂದ್ರೀಕರಣದ ಆಶಯಗಳನ್ನು ಇನ್ನಷ್ಟು ಬಲಗೊಳಿಸುವ ನಿಟ್ಟಿನಲ್ಲಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಕೆ.ಡಿ.ಪಿ. ಸಭೆ ನಡೆಸಲು ರಾಜ್ಯ ಸರ್ಕಾರ ಅನುವು ಮಾಡಿಕೊಟ್ಟ ಬೆನ್ನಲ್ಲೇ ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳ ಸಹಕಾರ, ಬದ್ಧತೆ ಹಾಗೂ ಅಧಿಕಾರಿಗಳ ಇಚ್ಛಾಶಕ್ತಿ, ಕಾಳಜಿ ಫಲವಾಗಿ ಮಂಡ್ಯ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿಯೂ ಕೆ.ಡಿ.ಪಿ. ಸಭೆ ನಡೆದಿದೆ. ಜಿಲ್ಲಾ/ ತಾಲ್ಲೂಕು ಹಂತದಲ್ಲಿ ನಡೆಯುವ ಸಭೆಯ ಗಾಂಭೀರ್ಯದಂತೆಯೇ, ಗ್ರಾಮ ಪಂಚಾಯತ್ ಕೆ.ಡಿ.ಪಿ. ಸಭೆಯಲ್ಲಿಯೂ ವಿಷಯದ ಮಹತ್ವ ಆಧರಿಸಿ ಚರ್ಚೆ, ನಿರ್ಣಯಗಳು ನಡೆದಿರುವುದು ಸಕಾರಾತ್ಮಕ ಬೆಳವಣಿಗೆ ಎನ್ನಬಹುದು.

ರಾಜ್ಯ ಸರ್ಕಾರದ ಸದುದ್ದೇಶ ಭವಿಷ್ಯದಲ್ಲಿ ಹೆಚ್ಚಿನ ಫಲ ನೀಡಲಿದ್ದು ನಿರೀಕ್ಷೆಗಳನ್ನು ಮಂಡ್ಯ ಜಿಲ್ಲೆ ವ್ಯಾಪ್ತಿಯ ಗ್ರಾಮ ಪಂಚಾಯತಿ ಹಂತದಲ್ಲಿ ನಡೆದಿರುವ ತ್ರೈಮಾಸಿಕ ಕೆ.ಡಿ.ಪಿ. ಸಭೆ ಹುಟ್ಟಿಸಿದೆ. ಗ್ರಾಮ ಪಂಚಾಯತ್ ಮಟ್ಟದ ಸಭೆ ಎಂದು ಉಪೇಕ್ಷೆ ಅಥವಾ ನಿರ್ಲಕ್ಷ್ಯ ಮಾಡದೇ ಗ್ರಾಮ ಪಂಚಾಯತಿ ವ್ಯಾಪ್ತಿಯ ಹೋಬಳಿ ಮತ್ತು ಎಲ್ಲಾ ಅನುಷ್ಠಾನ ಇಲಾಖೆಗಳ ಸ್ಥಳೀಯ ಅಧಿಕಾರಿಗಳು ಭಾಗವಹಿಸಿ ಸಹಕರಿಸುವ ಮೂಲಕ ಸ್ಪಂದನೆ ತೋರಿದ್ದು ಆಶಾದಾಯಕ ಅಂಶ.

## ಜುಲೈ ಮಾಹೆಯಲ್ಲೇ ಎಲ್ಲಾ ಗ್ರಾ.ಪಂ.ಗಳಲ್ಲೂ ಸಭೆ

ಇಡೀ ಕಾರ್ಯಕ್ರಮ ಯಶಸ್ವಿಯಾಗಲು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ, ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಕ್ತ ಮಾರ್ಗದರ್ಶನ ಮಾಡುತ್ತಾ ಬೆನ್ನೆಲುಬಾಗಿ ನಿಂತವರು ಮಂಡ್ಯ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾದ ಶ್ರೀ.ಕೆ.ಯಾಲಕ್ಕಿಗೌಡರವರು. ಇವರ ವಿಶೇಷ ಆಸಕ್ತಿ, ಕಳಕಳಿ ಪರಿಣಾಮ ಮಂಡ್ಯ ಜಿಲ್ಲೆಯ ಎಲ್ಲಾ 07 ತಾಲ್ಲೂಕುಗಳ ವ್ಯಾಪ್ತಿಯ 233 ಗ್ರಾಮ ಪಂಚಾಯತಿಗಳಲ್ಲೂ ಜುಲೈ ಮಾಹೆಯಲ್ಲೇ ಕೆ.ಡಿ.ಪಿ. ಸಭೆ ನಡೆದಿರುವುದು ಹೆಗ್ಗಳಿಕೆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರು ಕಾರ್ಯಭಾರದ ಒತ್ತಡದ ನಡುವೆಯೂ ಎಲ್ಲಾ ತಾಲ್ಲೂಕುಗಳ ಆಯ್ದ ಗ್ರಾಮ ಪಂಚಾಯಿತಿಗಳಲ್ಲಿ ನಡೆಯಲ್ಪಟ್ಟ ತ್ರೈಮಾಸಿಕ ಕೆ.ಡಿ.ಪಿ. ಸಭೆಯ ಕಾರ್ಯಕಲಾಪಗಳನ್ನು ವೀಕ್ಷಿಸಿ ಅಗತ್ಯ ಸಲಹೆ, ಸೂಚನೆಗಳನ್ನು ನೀಡಿ ಮಾರ್ಗದರ್ಶನ ಮಾಡಿದ್ದು ಚುನಾಯಿತ ಸದಸ್ಯರ ವಲಯದಿಂದ ಮೆಚ್ಚುಗೆಗೆ ಪಾತ್ರವಾಯಿತು.

ಮಾತ್ರ ಪ್ರತಿಶತ ನೂರಕ್ಕೆ ನೂರು ಅಲ್ಲದಿದ್ದರೂ ಗರಿಷ್ಠ ಲಾಭ ಸಿಗಲಿದೆ ಎನ್ನುವುದು ಅವರ ನಿಲುವು. ಗ್ರಾಮ ಪಂಚಾಯತಿ ಹಂತದಲ್ಲೂ ತ್ರೈಮಾಸಿಕ ಕೆ.ಡಿ.ಪಿ. ಸಭೆ ನಡೆಸಬೇಕು ಎಂದಾಗ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರ ಜೊತೆಗೆ ಗ್ರಾಮ ಪಂಚಾಯತಿ ಅಧಿಕಾರಿಗಳು ಗೊಂದಲಕ್ಕೆ ಸಿಲುಕಿದ್ದರಲ್ಲಿ ಉತ್ಪ್ರೇಕ್ಷೆ ಏನೂ ಇಲ್ಲ. ಏಕೆಂದರೆ, ಕೆ.ಡಿ.ಪಿ. ತ್ರೈಮಾಸಿಕ ಸಭೆ ಎನ್ನುವುದು ಗ್ರಾಮ ಪಂಚಾಯಿತಿಗಳಿಗೆ ಹೊಸದು. ಸಭೆ ಕಾರ್ಯಕಲಾಪ ಹೇಗಿರಬೇಕು, ಚುನಾಯಿತ ಸದಸ್ಯರು ಮತ್ತು ಅಧಿಕಾರಿಗಳ ಹೊಣಗಾರಿಕೆ ಏನು? ಏನೆಲ್ಲಾ ವಿಷಯಗಳನ್ನು ಚರ್ಚಿಸಬೇಕು, ಸ್ಥಳೀಯ ಸಮಸ್ಯೆಗಳಿಗೆ ಹೇಗೆ ಪರಿಹಾರ ಕಂಡುಕೊಳ್ಳಬಹುದು. ಪಂಚಾಯಿತಿ ವ್ಯಾಪ್ತಿಯಲ್ಲಿ ಅಂಕಿ ಸಂಖ್ಯೆಗಳನ್ನು ನಿಖರವಾಗಿ ಹೇಗೆ ಸಂಗ್ರಹಿಸಬೇಕು .... ಹೀಗೆ ಮನದಲ್ಲಿ ಮೂಡಿದ್ದ ನೂರಾರು ಪ್ರಶ್ನೆ, ಗೊಂದಲಗಳಿಗೆ ಪರಿಹಾರ ದೊರಕಿಸಲು ಪ್ರಯೋಗಿಸಿದ ಅಸ್ತ್ರ ಕಾರ್ಯಾಗಾರ.

ಕಾರ್ಯಾಗಾರ ಎಂದರೆ ಮೂಗು ಮುರಿಯುವರೇ ಹೆಚ್ಚು. ಅಲ್ಲಿ ಕೊರೆಯುತ್ತಾರೆ ಎನ್ನುವ ಮಾತೂ ಇದೆ.



ಮಂಡ್ಯ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಆಡಳಿತ ಶೈಲಿ ಸ್ವಲ್ಪ ಭಿನ್ನ. ಯಾವುದೇ ಕಾರ್ಯಕ್ರಮ ತಳಹಂತದಲ್ಲಿ ಅನುಷ್ಠಾನವಾಗಿ ಪೂರ್ಣ ಪ್ರಮಾಣದಲ್ಲಿ ಫಲ ಸಿಗಬೇಕೆಂದರೆ ಅಗತ್ಯ ಸಿದ್ಧತೆಬೇಕು, ಆಗಿದ್ದಾಗ

ಹಾಗಾಗಿ, ಬಹುತೇಕ ಸಂದರ್ಭದಲ್ಲಿ ಹಾಜರಾತಿ ಎನ್ನುವುದು ನಿರೀಕ್ಷೆಯಂತೆ ಇರುವುದಿಲ್ಲ. ಆದರೆ, ಮಂಡ್ಯದ ಅಂಬೇಡ್ಕರ್ ಭವನದಲ್ಲಿ ಕೆ.ಡಿ.ಪಿ. ತ್ರೈಮಾಸಿಕ ಸಭೆ ಕುರಿತು ಮಂಡ್ಯ ಜಿಲ್ಲೆಯ ಗ್ರಾಮ ಪಂಚಾಯತಿ ಚುನಾಯಿತ ಸದಸ್ಯರಿಗೆ ಮಾಹಿತಿ ನೀಡಲು

ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಹಾಜರಿದ್ದ ಸದಸ್ಯರ ಹಾಜರಾತಿಯನ್ನು ಭರ್ತಿಯಾಗಿದ್ದ ಆಸನಗಳೇ ಹೇಳುವಂತಿದ್ದವು. ವಿವಿಧ ಅಧಿವೇಶನಗಳಲ್ಲಿ ತಜ್ಞರಿಂದ ಮಾಹಿತಿ ಪಡೆದ ಸದಸ್ಯರು/ಪಿಡಿಓಗಳು ಯಶಸ್ವಿಯಾಗಿ ಕೆ.ಡಿ.ಪಿ. ಸಭೆಗಳನ್ನು ನಡೆಸಲು ತೀರ್ಮಾನಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ಸಾಕಷ್ಟು ಸಮಸ್ಯೆಗಳಿಗೆ ಸ್ಥಳೀಯವಾಗಿ ಪರಿಹಾರ ಕಂಡುಕೊಳ್ಳಲು ಸಭೆಯಿಂದ ಅನುಕೂಲವಾಗಲಿದೆ. ಕೆ.ಡಿ.ಪಿ. ಸಭೆಗಳನ್ನು ನಿಯಮಿತವಾಗಿ ನಡೆಸಬೇಕು ಎಂದು ಸಲಹೆ ನೀಡಿದ ಅವರು, ಯೋಜನೆಗಳಿಗೆ ಸಂಬಂಧಿಸಿದ ಅಂಕಿ ಸಂಖ್ಯೆಗಳನ್ನು ನಿಖರವಾಗಿ ಸಂಗ್ರಹಿಸಲು ಅನುಕೂಲವಾಗಲಿದ್ದು, ಉತ್ತಮ ಪ್ರಗತಿ ಸಾಧಿಸಬಹುದಾಗಿದೆ.




## ಶಿವಳ್ಳಿ ಗ್ರಾ.ಪಂ.: ಮೊದಲ ಕೆ.ಡಿ.ಪಿ. ಸಭೆ

ರಾಜ್ಯ ಸರ್ಕಾರದ ಮಹತ್ವಕಾಂಕ್ಷೆಯಂತೆ ಗ್ರಾಮ ಪಂಚಾಯತಿ ಹಂತದಲ್ಲೂ ತ್ರೈಮಾಸಿಕವಾಗಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ (ಕೆ.ಡಿ.ಪಿ)ಗಳ ಪ್ರಗತಿ ಪರಿಶೀಲನೆ ನಡೆಸುವ ಮೊದಲ ಸಭೆ ಮಂಡ್ಯ ತಾಲ್ಲೂಕಿನ ಶಿವಳ್ಳಿ ಗ್ರಾಮ ಪಂಚಾಯತಿಯಲ್ಲಿ ನಡೆಯಿತು. ಮಂಡ್ಯ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯವರು ವಿಶೇಷ ಆಸಕ್ತಿಯಿಂದ ಸಭೆಯಲ್ಲಿ ಭಾಗವಹಿಸಿ ಕಾರ್ಯಕಲಾಪಗಳನ್ನು ಆರಂಭದಿಂದ ಕೊನೆಯವರೆಗೂ ವೀಕ್ಷಿಸಿದರು. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆ.ಡಿ.ಪಿ) (20 ಅಂಶಗಳ ಕಾರ್ಯಕ್ರಮಗಳು ಸೇರಿದಂತೆ) ಪ್ರಗತಿ ಪರಿಶೀಲನೆ ಸಭೆ ನಡೆಸಲು ಈ ಕೆಳಕಂಡಂತೆ ಸಮಿತಿ ರಚಿಸಲಾಗಿದೆ.

**ಅಧ್ಯಕ್ಷರು, ಗ್ರಾಮ ಪಂಚಾಯತ್**
**ಅಧ್ಯಕ್ಷರು ಉಪಾಧ್ಯಕ್ಷರು,**
**ಗ್ರಾಮ ಪಂಚಾಯತ್ ಉಪಾಧ್ಯಕ್ಷರು**
**ಗ್ರಾಮ ಪಂಚಾಯತ್ ಸ್ಥಾಯಿ ಸಮಿತಿಗಳ ಎಲ್ಲಾ ಅಧ್ಯಕ್ಷರು – ಸದಸ್ಯರು**
**ಪಂಚಾಯಿತಿ ಅಭಿವೃದ್ಧಿ ಅಧಿಕಾರಿ –ಸದಸ್ಯ ಕಾರ್ಯದರ್ಶಿ**

## 20 ಅಂಶಗಳ ಗ್ರಾಮ ಪಂಚಾಯಿತಿ ಕಾರ್ಯಕ್ರಮಗಳು

1. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
2. ಸ್ವಚ್ಛ ಭಾರತ್ ಅಭಿಯಾನ
3. ಗ್ರಾಮ ಪಂಚಾಯಿತಿ ಶಾಸನಬದ್ಧ ಅನುದಾನ
4. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ
5. ಕೇಂದ್ರ ಹಣಕಾಸು ಆಯೋಗ ಅನುದಾನ
6. ಗ್ರಾಮ ಪಂಚಾಯಿತಿಗಳ ಅನುದಾನ, ವಿದ್ಯುಚ್ಛಕ್ತಿ ಬಿಲ್ಲು ಪಾವತಿ

7. ಮರಳು ಗಣಿಗಾರಿಕೆ (ರಾಜಧನ ಪಾವತಿ)
8. ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳಿಗೆ ಗೌರವಧನ ಪಾವತಿ
9. ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ
10. ಬಾವಿಗಳನ್ನು ತೋಡುವುದು ಹಾಗೂ ಆದ್ಯಗೊಳಿಸುವಿಕೆ ಹಾಗೂ ಕೆರೆಗಳ ಅಭಿವೃದ್ಧಿ
11. ಗಂಗಾ ಕಲ್ಯಾಣ ಯೋಜನೆ
12. ಸೋಲಾರ್ ಬೀದಿ ದೀಪಗಳು
13. ಅನಿಲ ಯೋಜನೆ
14. ವಸತಿ ಯೋಜನೆಗಳು
15. ಜೀತದಾಳುಗಳ ಪುನರ್ವಸತಿ
16. ಬೋರ್‌ವೆಲ್‌ಗಳ ನಿರ್ವಹಣೆ
17. ಪಂಚಾಯತ್ ಯುವ ಕ್ರೀಡಾ ಖೇಲ್ ಅಭಿಯಾನ
18. ಕಿರು ನೀರು ಸರಬರಾಜು ಯೋಜನೆ ನಿರ್ವಹಣೆ
19. ಗ್ರಾಮ ಪಂಚಾಯತ್‌ಗಳ ಸ್ವಂತ ಸಂಪನ್ಮೂಲ
20. ನಮ್ಮ ಗ್ರಾಮ ನಮ್ಮ ಯೋಜನೆ.

## ಕೆ.ಡಿ.ಪಿ. ಸಭೆ: ಭಾಗವಹಿಸುವ ಇಲಾಖೆ/ ಸಹಕಾರ ಸಂಘಗಳು

ಆಯಾಯ ಗ್ರಾಮ ಪಂಚಾಯಿತಿ ಮಟ್ಟದ ಹೋಬಳಿ ಮತ್ತು ಎಲ್ಲಾ ಅಭಿವೃದ್ಧಿ ಇಲಾಖೆಗಳ ಸ್ಥಳೀಯ ಅಧಿಕಾರಿಗಳು/ಸಿಬ್ಬಂದಿ ಭಾಗವಹಿಸಬೇಕು. ಕೃಷಿ, ತೋಟಗಾರಿಕೆ, ರೇಷ್ಮೆ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಆರೋಗ್ಯ, ಪಶುಸಂಗೋಪನೆ/ ಹೈನುಗಾರಿಕೆ, ಮೀನುಗಾರಿಕೆ, ಸಾಮಾಜಿಕ ಅರಣ್ಯ, ಸಣ್ಣ ನೀರಾವರಿ, ಗ್ರಾಮೀಣ ರಸ್ತೆ/ಸೇತುವೆ, ಗ್ರಾಮೀಣ ವಿದ್ಯುದೀಕರಣ/ ವಿದ್ಯುಚ್ಛಕ್ತಿ ಮತ್ತು ಇಂಧನ, ಆಹಾರ ಮತ್ತು ನಾಗರಿಕ ಸರಬರಾಜು, ಕಂದಾಯ, ಪ್ರವಾಸೋದ್ಯಮ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಹಾಗೂ ಖಾದಿ ಮತ್ತು ಗ್ರಾಮೋದ್ಯೋಗ ಇಲಾಖೆ, ವಸತಿ, ಕುಡಿಯುವ ನೀರು ಪೂರೈಕೆ ಮತ್ತು ನೈರ್ಮಲ್ಯ, ಬಡತನ ನಿರ್ಮೂಲನೆ ಕಾರ್ಯಕ್ರಮಗಳು (ಎನ್.ಆರ್.ಎಲ್.ಎಂ), ಕ್ರೀಡೆಗಳು ಮತ್ತು ಸಾಂಸ್ಕೃತಿಕ ಚಟುವಟಿಕೆ, ಕೃಷಿ ಉತ್ಪನ್ನ ಮಾರುಕಟ್ಟೆ, ಸಹಕಾರ, ಗ್ರಂಥಾಲಯ, ಹಾಲು ಉತ್ಪಾದಕ ಸಹಕಾರ ಸಂಘ ನಿಯಮಿತ.





**ಡಾ.ಉಮೇಶ ಸಿ.ಜಿ.**

ಸಂಶೋಧನಾ ಅಧಿಕಾರಿ
ರಾಜ್ಯಪಂಚಾಯತ್ ಸಂಪನ್ಮೂಲ ಕೇಂದ್ರ,
ಬೆಂಗಳೂರು

**ಕರ್ನಾಟಕದಲ್ಲಿ ವಿಕೇಂದ್ರೀಕರಣಕ್ಕೆ ಅನನ್ಯ ಅವಕಾಶಗಳಿದ್ದು, ಅವು 73ನೇ ತಿದ್ದುಪಡಿಯ ಮೂಲಕ ಸಾಕಾರಗೊಂಡಿದೆ. ಈ 73ನೇ ತಿದ್ದುಪಡಿಯು ದೇಶಕ್ಕೆ ಮಾದರಿಯಾಗಿದ್ದು ಭಾರತ ಸರ್ಕಾರ ಈ ತಿದ್ದುಪಡಿಯನ್ನೆ ಮಾದರಿಯಾಗಿ ಬಳಸಿಕೊಡು ಬೇರೆ ರಾಜ್ಯಗಳಿಗೂ ವಿಸ್ತರಿಸಿದೆ. ಅಲ್ಲದೆ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಯ ಸೃಷ್ಟಿಯಿಂದ ಸ್ಥಳೀಯ ಆಡಳಿತಕ್ಕೆ ಮತ್ತಷ್ಟು ಶಕ್ತಿ ತುಂಬಿದೆ.**

# ಸಾಮರ್ಥ್ಯಾಭಿವೃದ್ಧಿಗಿರುವ ಅವಕಾಶಗಳು ಮತ್ತು ಸವಾಲುಗಳು

ಮೈಸೂರಿನ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯಲ್ಲಿ ಸ್ವಾಯತ್ತ ಸಂಸ್ಥೆ ದಿನಾಚರಣೆನ್ನು ದಿನಾಂಕ 04.07.2019 ರಂದು ಆಯೋಜಿಸಲಾಗಿದ್ದು, ಕಾರ್ಯಕ್ರಮದಲ್ಲಿ ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯದ ನಿವೃತ್ತ ಕಾರ್ಯದರ್ಶಿ ಹಾಗೂ ಕೇರಳ ರಾಜ್ಯ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಎಚ್.ಎಸ್. ವಿಜಯಾಆನಂದ್ ಭಾ.ಆ.ಸೇ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸಂಸ್ಥೆಗಳಲ್ಲಿ ಸಾಮರ್ಥ್ಯಾಭಿವೃದ್ಧಿಗಿರುವ ಅವಕಾಶಗಳು ಮತ್ತು ಸವಾಲುಗಳು ಎಂಬ ವಿಷಯದ ಮೇಲೆ ಮಾತನಾಡುತ್ತಾ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯು ಪ್ರಾರಂಭದಿಂದಲು ತನ್ನ ಕಾರ್ಯಕ್ಷಮತೆಯಲ್ಲಿ ಬೇರೆ ರಾಜ್ಯಗಳ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಿಗಿಂತ ಬಹಳ ಮುಂದಿದೆ ಅದರಲ್ಲೂ ಗ್ರಾಮೀಣಾಭಿವೃದ್ಧಿಗೆ ಸೀಮಿತವಾಗಿರದೆ ನಂತರದ ದಿನಗಳಲ್ಲಿ ಪಂಚಾಯತ್ ರಾಜ್ ಅನ್ನು ಸೇರಿಸಿಕೊಂಡಿರುವುದು ಸಂಸ್ಥೆಯ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿದೆ. ಗುಣಮಟ್ಟದ ತರಬೇತಿಗಳನ್ನು ಆಯೋಜಿಸುವುದರಲ್ಲು ಮುಂದಿದ್ದು, ಇಂದು ಸಂಸ್ಥೆಯು ಸ್ವಾಯತ್ತ ಸಂಸ್ಥೆಯಾಗಿ ಮೊದಲ ಸ್ವಾಯತ್ತ ದಿನಾಚರಣೆಯನ್ನು ಆಚರಿಸಿಕೊಳ್ಳುತ್ತಿರುವುದು ಹೆಮ್ಮೆಯ ಸಂಗತಿ.

ಕರ್ನಾಟಕದಲ್ಲಿ ವಿಕೇಂದ್ರೀಕರಣಕ್ಕೆ ಅನನ್ಯ ಅವಕಾಶಗಳಿದ್ದು, ಅವು 73ನೇ ತಿದ್ದುಪಡಿಯ ಮೂಲಕ ಸಾಕಾರಗೊಂಡಿದೆ. ಈ 73ನೇ ತಿದ್ದುಪಡಿಯು ದೇಶಕ್ಕೆ ಮಾದರಿಯಾಗಿದ್ದು ಭಾರತ ಸರ್ಕಾರ ಈ ತಿದ್ದುಪಡಿಯನ್ನೆ ಮಾದರಿಯಾಗಿ ಬಳಸಿಕೊಡು ಬೇರೆ ರಾಜ್ಯಗಳಿಗೂ ವಿಸ್ತರಿಸಿದೆ. ಅಲ್ಲದೆ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಯ ಸೃಷ್ಟಿಯಿಂದ ಸ್ಥಳೀಯ ಆಡಳಿತಕ್ಕೆ ಮತ್ತಷ್ಟು ಶಕ್ತಿ ತುಂಬಿದೆ. ವಿಕೇಂದ್ರೀಕರಣ ಚಟುವಟಿಕೆಯಿಂದ ಕೂಡಿರುವ ಗ್ರಾಮ/ ತಾಲ್ಲೂಕು/ ಜಿಲ್ಲಾ ಪಂಚಾಯಿತಿ ಮತ್ತು ಚುನಾಯಿತ ಪ್ರತಿನಿಧಿಗಳ ಪಾತ್ರ ಬಹು ಮುಖ್ಯವಾದದ್ದು. ಹಾಗೆಯೇ ಈ ಸಂಸ್ಥೆಯು ಮೊದಲಿಗೆ ಉಪಗ್ರಹ ಆಧಾರಿತ ತರಬೇತಿಯನ್ನು ಪ್ರಾರಂಭಿಸಿದ್ದು ನಂತರದ ದಿನಗಳಲ್ಲಿ ಈ ವ್ಯವಸ್ಥೆಯನ್ನು ಬೇರೆ ರಾಜ್ಯಗಳಿಗೂ ವಿಸ್ತರಿಸಲು ಮಾದರಿಯಾಯಿತು.

ತರಬೇತಿ ಸಂಸ್ಥೆಗಳಲ್ಲಿ ಸಾಮರ್ಥ್ಯಾಭಿವೃದ್ಧಿಗೆ ಮಾನವ ಸಂಪನ್ಮೂಲದ ಪರಿಣಾಮಕಾರಿ ಬಳಕೆ, ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಸಾಮರ್ಥ್ಯ ವೃದ್ಧಿ ಬಳಕೆಯೊಂದಿಗೆ ಉತ್ತಮ ಆಡಳಿತ, ಆಡಳಿತದಲ್ಲಿ ಸಾಮರ್ಥ್ಯ ಹಾಗೂ ಸಾಂಸ್ಕೃತಿಕ ಸಂಘಟನೆಯು ಬಹಳ ಮುಖ್ಯವಾಗಿದ್ದು, ಈ ಎಲ್ಲಾ ಅಂಶಗಳು ತರಬೇತಿ ಸಂಸ್ಥೆಗಳ ಮೂಲಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಸಾಮರ್ಥ್ಯ ವೃದ್ಧಿಯನ್ನು ಹೆಚ್ಚಿಸಲು ಸಹಾಯಕವಾಗಿವೆ. ನಂತರ ಕೌಶಲ್ಯ ನಂತರ ಜ್ಞಾನ ಇವು ತರಬೇತಿಯಲ್ಲಿ ಬೋಧಕನಿಗೆ ಇರಬೇಕಾದ ಅಂಶಗಳು. ಹಾಗೆಯೇ ತರಬೇತಿ ಸಂಸ್ಥೆಗಳು ಸಾಮಾಜಿಕ ಪರಿಶೋಧನೆಗೆ ಒಳಗೊಂಡಾಗ ಮಾತ್ರ ನೈತಿಕ ಮೌಲ್ಯಗಳಿಗೆ ಅರ್ಥ ಬರುತ್ತದೆ. ಹಾಗೆಯೇ ಪ್ರಸ್ತುತ ದಿನಗಳಲ್ಲಿ ತರಬೇತಿ ಸಂಸ್ಥೆಗಳು ಸ್ಥಳೀಯ ಆಡಳಿತ, ಸಭೆಗಳು, ಸವಾಲುಗಳನ್ನು ನಿರ್ವಹಿಸುವಿಕೆ, ನೈತಿಕತೆ ಮತ್ತು ಮೌಲ್ಯಗಳು, ಉತ್ತಮ ಆಡಳಿತ ಅಂಶಗಳೊಂದಿಗೆ ದುರ್ಬಲ ವರ್ಗದವರನ್ನು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಒಳಗೊಳ್ಳುವಿಕೆ ಕುರಿತು



ಕರ್ನಾಟಕ ರಾಜ್ಯ ರಾಷ್ಟ್ರದಲ್ಲೇ ಇತರೆ ರಾಜ್ಯಗಳಿಗೆ ಮಾದರಿಯಾಗುವಂತೆ ಮಾನವಾಭಿವೃದ್ಧಿ ವರದಿ ತಯಾರಿಸಿ ಅಭಿವೃದ್ಧಿ ಚಟುವಟಿಕೆಗೆ ಅಗತ್ಯ ನೆರವು ನೀಡಿದೆ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅಗತ್ಯತೆಗಳಿಗೆ ಅನುಗುಣವಾಗಿ ತರಬೇತಿಯನ್ನು ಆಯೋಜಿಸುವುದು ಮುಖ್ಯವಾಗಿದೆ. ಈ ತರಬೇತಿಗಳಲ್ಲಿ ಚುನಾಯಿತ ಪತಿನಿಧಿಗಳನ್ನು ಹಾಗೆಯೇ ಸಾಮುದಾಯ ಸಂಪನ್ಮೂಲ ವ್ಯಕ್ತಿಗಳನ್ನು ಸಹ ಬಳಸಿಕೊಳ್ಳಬೇಕು. ಸಾಮಾನ್ಯವಾಗಿ ಬೋಧಕರೆಂದರೆ ಜ್ಞಾನ, ಕೌಶಲ್ಯ ಮತ್ತು ವರ್ತನೆ ಅದರೆ ತರಬೇತಿ ಸಂಸ್ಥೆಗಳಲ್ಲಿ ಇದು ತದ್ವಿರೋದ್ಧವಾಗಿರುತ್ತದೆ ಇಲ್ಲಿ ಬೋಧಕರೆಂದರೆ ವರ್ತನೆ ವಿನ್ಯಾಸಗಳನ್ನು ಅಳವಡಿಸಿಕೊಂಡು ಅಭಿವೃದ್ಧಿಯ ಕಡೆ ಸಾಗಬೇಕು ಎಂದು ಶ್ರೀ.ವಿಜಯಾ ಆನಂದ್‌ರವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ನಿಕಟ ಪೂರ್ವ ನಿರ್ದೇಶಕರಾದ ಹೆಚ್.ಎಸ್. ಅಶೋಕಾನಂದ, ಆಡಳಿತ ತರಬೇತಿ ಸಂಸ್ಥೆಯ ಜಂಟಿ ನಿರ್ದೇಶರಾದ ಶ್ರೀಮತಿ ಭಾಗ್ಯಲಕ್ಷ್ಮೀ, ಸಂಸ್ಥೆಯ ಬೋಧಕರಾದ ಡಾ.ಜಿ.ಎಸ್. ಗಣೇಶ ಪ್ರಸಾದ್, ಪರ್ವೇಜ್‌ಖಾನ್ ಹಾಗೂ ಸಂಸ್ಥೆಯ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಮತ್ತು ವಿಕೇಂದ್ರೀಕೃತ ತರಬೇತಿ ಸಂಯೋಜಕರುಗಳು ಭಾಗವಹಿಸಿದ್ದರು.

ವರದಿ



**ಬಂಡೆಪ್ಪ ಜಿ. ತೇಲಿ**

ಕಾರ್ಯದರ್ಶಿಗಳು
ಗ್ರಾಮ ಪಂಚಾಯತ್ ಜಂಬಗಿ (ಆ)
ತಾ॥ ಜಿ॥ ವಿಜಯಪುರ
ಮೊ. 9008845750

**ನಮ್ಮ ಭಾರತದ ಪ್ರಧಾನಮಂತ್ರಿಗಳು ಸ್ವಚ್ಛತೆಯ ಶೌಚಾಲಯ ಕುರಿತು ಹೆಚ್ಚು ಗಮನಹರಿಸಿರುವುದು ವಿಶೇಷವಾಗಿತ್ತು. ಇದರೊಂದಿಗೆ ಸ್ಥಳೀಯ ಸಂಘ–ಸಂಸ್ಥೆಗಳು ಸಮುದಾಯಗಳು, ನಾಗರಿಕರು ಸಾಕಷ್ಟು ಶ್ರಮವಹಿಸಿದ್ದಾರೆ. ಆದ್ದರಿಂದಲೇ ಯೋಜನೆ ಯಶಸ್ವಿಗೆ ಕಾರಣವಾಗಿದೆ.**

# ಸ್ವಚ್ಛ ಭಾರತ ಮಿಷನ್ ಸಮಗ್ರ ಅನುಷ್ಠಾನ

ನಮ್ಮ ಭಾರತ ದೇಶ ಗ್ರಾಮ ಪ್ರಾಧಾನ್ಯತೆಯ ದೇಶ. ಗ್ರಾಮೀಣ ಸರ್ವಾಂಗೀಣ ಅಭಿವೃದ್ಧಿಯೇ ನಿಜವಾದ ಸ್ವರಾಜ್ಯ ಎಂಬುದು ಪೂಜ್ಯ ಮಹಾತ್ಮಾ ಗಾಂಧೀಜಿಯವರ ಅಭಿಪ್ರಾಯವಾಗಿತ್ತು. ಗ್ರಾಮಗಳ ಮೂಲಭೂತ ಸೌಲಭ್ಯಗಳಾದ ಶುದ್ಧ ಕುಡಿಯುವ ನೀರು, ಸಾರಿಗೆ ಸಂಪರ್ಕ, ಶಿಕ್ಷಣ, ಆರೋಗ್ಯ, ವಸತಿ, ಸ್ವಚ್ಛತೆ, ನೈರ್ಮಲ್ಯ ಮತ್ತು ಕೃಷಿ ಪ್ರಾಧಾನ್ಯದ ಚಟುವಟಿಕೆಗಳುಳ್ಳ ಗ್ರಾಮೀಣ ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಬೇಕೆಂಬುದು ಗಾಂಧೀಜಿಯವರ ಅಪಾರವಾದ ಸಂಕಲ್ಪವಾಗಿತ್ತು.

ಕೇಂದ್ರ ಮತ್ತು ರಾಜ್ಯ ಸರಕಾರಗಳು ಪಂಚಾಯತಿ ಸಂಸ್ಥೆಗಳನ್ನು ಆರ್ಥಿಕವಾಗಿ ಬಲಪಡಿಸಲು ಪಂಚಾಯತ್ ರಾಜ್ಯ ಸಂಸ್ಥೆಗೆ ತಿದ್ದುಪಡಿ ತರುವ ಮೂಲಕ ಸ್ಥಳೀಯ ಜನರ ಸಹಭಾಗಿತ್ವದೊಂದಿಗೆ ಪಂಚಾಯತ್ ಸಂಸ್ಥೆಗಳ ಆಡಳಿತ ವ್ಯವಸ್ಥೆಯನ್ನು ಪರಿಪೂರ್ಣ ಹಾಗೂ ಪರಿಣಾಮಕಾರಿಯಾಗಿ ಬಲವರ್ಧನೆಗೊಳಿಸಲು ಅಧಿಕಾರ ವಿಕೇಂದ್ರೀಕರಣದ ಮೂಲ ಆಶಯದೊಂದಿಗೆ ದೇಶದಲ್ಲಿ ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಈ ದಿಸೆಯಲ್ಲಿ ಮೂರು ಹಂತದ ಪಂಚಾಯತಿ ಸಂಸ್ಥೆಗಳಾದ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯತಿಗಳು ಸರಕಾರದ ಅಂಗ ಸಂಸ್ಥೆಗಳಾಗಿ ಕಾರ್ಯಭಾರ ಮಾಡುವ ಮೂಲಕ ಗ್ರಾಮಾಭಿವೃದ್ಧಿಯ ಸಮಗ್ರ ಕನಸನ್ನು ಸಾಕಾರಗೊಳಿಸುವಲ್ಲಿ ಅಹರ್ನಿಸಿ ಶ್ರಮಿಸುತ್ತವೆ.

ಗ್ರಾಮೀಣ ಜನ ಜೀವನವನ್ನು ಸ್ವಚ್ಛ ಮತ್ತು ಸುಂದರವಾಗಿ ಪರಿವರ್ತಿಸಲು ಗ್ರಾಮೀಣ ಪ್ರದೇಶದಲ್ಲಿ ಬಹು ದಿನಗಳಿಂದ ರೂಢಿಯಲ್ಲಿದ್ದ ಬಯಲು ಮಲ ವಿಸರ್ಜನೆ ಪದ್ಧತಿಯನ್ನು ಸಂಪೂರ್ಣ ನಿರ್ಮೂಲನೆಗೊಳಿಸಲು ಕೇಂದ್ರ ಸರಕಾರ ಆಯಾ ರಾಜ್ಯ ಸರಕಾರಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲು ಸ್ವಚ್ಛ ಭಾರತ ಮಿಷನ್ ಎಂಬ ಕ್ರಾಂತಿಕಾರಿ ಯೋಜನೆಯೊಂದನ್ನು ಜಾರಿಗೆ ತರುವ ಮೂಲಕ ಗ್ರಾಮೀಣ ಪ್ರತಿ ಕುಟುಂಬಗಳಿಗೆ ವೈಯಕ್ತಿಕ ಶೌಚಾಲಯ ನಿರ್ಮಾಣದ ಗುರುತರವಾದ ಹೊಣೆಗಾರಿಕೆಯು ಸಮಾಜದ ಪ್ರತಿಯೊಬ್ಬ ನಾಗರಿಕನ ಕರ್ತವ್ಯ ಮತ್ತು ಜವಾಬ್ದಾರಿಯಾಗಿತ್ತು. ಗ್ರಾಮೀಣ ಜನರಲ್ಲಿ ಸ್ವಾಭಿಮಾನ, ಸ್ವಚ್ಛತೆ, ಸುರಕ್ಷತೆ, ಆರೋಗ್ಯ, ಸ್ವಚ್ಛ ಪರಿಸರ, ಸ್ವಾಸ್ಥ ಸಾಮರಸ್ಯ ಸಮಾಜ ನಿರ್ಮಾಣ ಮಾಡುವುದು ಸರಕಾರಗಳ ಆಶಯವಾಗಿತ್ತು.

ಈ ಕ್ರಾಂತಿಕಾರಿ ಯೋಜನೆ ಯಶಸ್ವಿ ಅನುಷ್ಠಾನಕ್ಕೆ ಸ್ಥಳೀಯ ಸರಕಾರಗಳಿಂದ ಹಿಡಿದು ಕೇಂದ್ರ ಸರಕಾರದವರೆಗೆ ತುಂಬಾ ಕಠಿಣವಾದ ಕ್ರಮವನ್ನು ಕೈಗೊಳ್ಳಲಾಗಿತ್ತು. ಸ್ವತಃ ನಮ್ಮ ಭಾರತದ ಪ್ರಧಾನಮಂತ್ರಿಗಳು ಸ್ವಚ್ಛತೆಯ ಶೌಚಾಲಯ ಕುರಿತು ಹೆಚ್ಚು ಗಮನಹರಿಸಿರುವುದು ವಿಶೇಷವಾಗಿತ್ತು. ಇದರೊಂದಿಗೆ ಸ್ಥಳೀಯ ಸಂಘ-ಸಂಸ್ಥೆಗಳು ಸಮುದಾಯಗಳು, ನಾಗರಿಕರು ಸಾಕಷ್ಟು ಶ್ರಮವಹಿಸಿದ್ದಾರೆ. ಆದ್ದರಿಂದಲೇ ಯೋಜನೆ ಯಶಸ್ವಿಗೆ ಕಾರಣವಾಗಿದೆ.




ಕರ್ನಾಟಕ ರಾಜ್ಯದ ಕರಾವಳಿ ಪ್ರದೇಶವೆಂದು ಗುರುತಿಸಿಕೊಂಡಿರುವ ಕೃಷ್ಣನ ತಟದಲ್ಲಿರುವ ಉಡುಪಿ ಜಿಲ್ಲೆ ರಾಜ್ಯದಲ್ಲೇ ಸ್ವಚ್ಛ ಭಾರತ ಮಿಷನ್ ವಿನೂತನ ಯೋಜನೆಯನ್ನು ಸಮರ್ಪಕವಾಗಿ ಬಳಸಿಕೊಂಡು ಯಶಸ್ವಿಯಾಗಿದೆ. ರಾಜ್ಯದ ಪಂಚಾಯತ್ ಸಂಸ್ಥೆಗಳನ್ನು ವೀಕ್ಷಣೆಗಾಗಿ ತನ್ನಡೆಗೆ ಸೆಳೆಯುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ಅಲ್ಲಿಯ ಪಂಚಾಯತಿ ಪ್ರತಿನಿಧಿಗಳು, ಅಧಿಕಾರಿಗಳು, ಸಿಬ್ಬಂದಿಗಳು ಮತ್ತು ಸಾರ್ವಜನಿಕರ ಆಸಕ್ತಿ,ಸಹಕಾರ ಮತ್ತು ಉತ್ಸಾಹದೊಂದಿಗೆ ಗ್ರಾಮ ಪಂಚಾಯತಿ ಮಟ್ಟದಲ್ಲಿ ಗ್ರಾಮೀಣ ಘನ ಮತ್ತು ದ್ರವ್ಯ ತ್ಯಾಜ್ಯ ವಸ್ತುಗಳ ಸಂಗ್ರಹಣೆ ವಿಲೇವಾರಿ ನಿರ್ವಾಹಣೆಯನ್ನು ಸಮರ್ಪಕವಾಗಿ ಅನುಸರಿಸಿ ರಾಜ್ಯದ ವಿವಿಧ ಜಿಲ್ಲೆಗಳಿಗೆ ಉಡುಪಿ ಜಿಲ್ಲೆ ಮಾದರಿಯಾಗಿದೆ. ರಾಜ್ಯದ ಬಹುತೇಕ ಜಿಲ್ಲೆಗಳ ಪಂಚಾಯತಿ ಪ್ರತಿನಿಧಿಗಳು, ಅಧಿಕಾರಿಗಳು ಉಡುಪಿ ಜಿಲ್ಲೆಗೆ ಬೇಟಿ ನೀಡಿ ಅಲ್ಲಿನ ಸ್ವಚ್ಛತೆಯ ಕಾರ್ಯವನ್ನು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ.

## ವಿಜಯಪುರ ಜಿಲ್ಲೆಯಿಂದ ಉಡುಪಿ ಜಿಲ್ಲೆಗೆ ಅಧ್ಯಯನ

ವಿಜಯಪುರ ಜಿಲ್ಲೆಯ ಆಯ್ದ ಗ್ರಾಮ ಪಂಚಾಯತಿಗಳ ಅಧ್ಯಕ್ಷರು, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ವಿಜಯಪುರ ಜಿಲ್ಲಾ ಎಸ್.ಬಿ.ಎಂ. ಅಧಿಕಾರಿ/ ಸಿಬ್ಬಂದಿಗಳ ಉಡುಪಿ ಜಿಲ್ಲೆಯ ಅಧ್ಯಯನ ಪ್ರವಾಸಕ್ಕೆ ವಿಜಯಪುರ ಜಿಲ್ಲಾ ಪಂಚಾಯತಿ ಉಪ ಕಾರ್ಯದರ್ಶಿಗಳಾದ ಶ್ರೀ.ಅಮರೇಶ ಎಸ್. ನಾಯಕರವರು ಜಿಲ್ಲಾ ಪಂಚಾಯತಿ ಆವರಣದಲ್ಲಿ ಬಸ್ಸಿಗೆ ಹಸಿರು ನಿಶಾನೆ ತೋರಿಸುವ ಮೂಲಕ ವಿದ್ಯುಕ್ತವಾಗಿ ಚಾಲನೆ ನೀಡಿದ್ದು, ಈ ಸಂದರ್ಭದಲ್ಲಿ ಅಧ್ಯಯನ ತಂಡದ ವಿಜಯಪುರ ಜಿಲ್ಲಾ ಎಸ್.ಬಿ.ಎಂ. ಜಿಲ್ಲಾ ನೆರವು ಘಟಕದ ಅಧಿಕಾರಿ ಟಿ.ಎಸ್. ಆಲಗೂರ ಸಮನ್ವಯ ಅಧಿಕಾರಿಗಳು ಉಪಸ್ಥಿತರಿದ್ದರು.

ಜಿಲ್ಲಾ ಪಂಚಾಯತಿ ಉಪ ಕಾರ್ಯದರ್ಶಿಯವರು ಉಡುಪಿ ಜಿಲ್ಲೆಯಲ್ಲಿ ಸ್ವಚ್ಛ ಭಾರತ ಮಿಷನ್ ಕಾರ್ಯಕ್ರಮವನ್ನು ಅಲ್ಲಿನ ಬಹುತೇಕ ಗ್ರಾಮ ಪಂಚಾಯತಿಗಳಲ್ಲಿ ಘನ ಮತ್ತು ದ್ರವ್ಯ ತ್ಯಾಜ್ಯ

ನಿರ್ವಹಣೆ ಮತ್ತು ವಿಲೇವಾರಿ ಕುರಿತು ಸಮರ್ಪಕವಾದ ಕಾರ್ಯಕ್ರಮವನ್ನು ಹಾಕಿಕೊಂಡು ಅನುಷ್ಠಾನಗೊಳಿಸುತ್ತಿದ್ದು, ಯೋಜನೆಯ ಸಮಗ್ರ ಅಧ್ಯಯನ ಮಾಹಿತಿಯನ್ನು ಪಡೆದುಕೊಂಡು ವಿಜಯಪುರ ಜಿಲ್ಲೆಯ ಗ್ರಾಮ ಪಂಚಾಯತಿಗಳಲ್ಲಿ ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಈ ಅಧ್ಯಯನ ಪ್ರವಾಸವನ್ನು ಕೈಗೊಳ್ಳಲಾಗಿದೆ. ಅಧ್ಯಯನ ಪ್ರವಾಸದಲ್ಲಿರುವ ಎಸ್.ಬಿ.ಎಂ. ಅಧಿಕಾರಿಗಳು, ಗ್ರಾಮ ಪಂಚಾಯತಿ ಅಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಅಲ್ಲಿಯ ಸಮಗ್ರ ಮಾಹಿತಿ ಪಡೆದುಕೊಂಡು ಜಿಲ್ಲೆಯಲ್ಲಿ ಅನುಷ್ಠಾನಕ್ಕೆ ತರಬೇಕಾಗಿದೆ.



ಉಡುಪಿ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ವಿಜಯಪುರ ಜಿಲ್ಲೆಯ ಅಧ್ಯಯನ ತಂಡದ ಸಭೆ ಏರ್ಪಡಿಸಿದ್ದು, ಜಿಲ್ಲಾ ಪಂಚಾಯತಿ ಯೋಜನಾ ಅಧಿಕಾರಿಗಳಾದ ವಿ.ಶ್ರೀನಿವಾಸರಾವ್‌ರವರು ಹಾಗೂ ಜಿಲ್ಲೆಯ ಎಸ್.ಬಿ.ಎಂ. ಸಂಯೋಜಕರಾದ ಶ್ರೀ. ರಘುನಾಥ, ಸಹಾಯಕ ಪ್ರೊಜೆಕ್ಟ್ ಅಧಿಕಾರಿ ಭಾರತಿಯವರು ತಮ್ಮ ಉಡುಪಿ ಜಿಲ್ಲೆಯಲ್ಲಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಕೈಗೊಂಡ ದ್ರವ, ಘನ, ತ್ಯಾಜ್ಯ ವಿಲೇವಾರಿ ಮತ್ತು ಸ್ವಚ್ಛತೆ ಕುರಿತು ಕೈಗೊಂಡ ಪ್ರತಿಯೊಂದು ಮಾಹಿತಿಯನ್ನು ತಂಡಕ್ಕೆ ವಿವರಿಸಿದರು. ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ 2ನೇ ವಾರಂಬಳ್ಳಿ ಗ್ರಾಮ ಪಂಚಾಯತಿಗೆ ಮತ್ತು ಉಡುಪಿ ತಾಲೂಕಿನ ಬೆಡಗುಬೆಟ್ಟು ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಲು ಸೂಚಿಸಿ ತಮ್ಮ ಸಿಬ್ಬಂದಿ ಹಾಗೂ ಅಲೆವೂರಾಯ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ದಯಾನಂದ ಬೆಣ್ಣೂರ, ಅವರನ್ನು ತಂಡದೊಂದಿಗೆ ನಿಯೋಜಿಸಿದರು.

ಬ್ರಹ್ಮಾವರ ತಾಲ್ಲೂಕಿನ ವಾರಂಬಳ್ಳಿ ಗ್ರಾಮ ಪಂಚಾಯತಿಗೆ ಭೇಟಿ ನೀಡಿ, ಅಲ್ಲಿನ ಪಂಚಾಯತಿ ಪ್ರತಿನಿಧಿಗಳ, ಅಧಿಕಾರಿಗಳ ಮತ್ತು ಸಿಬ್ಬಂದಿಗಳೊಂದಿಗೆ ಅಲ್ಲಿ ಸ್ವಚ್ಛ ಭಾರತ ಮಿಷನ್ ಯೋಜನೆ ಅಡಿಯಲ್ಲಿ ಕೈಗೊಂಡ ಕ್ರಮಗಳ ಕುರಿತು ಮಾಹಿತಿ ಪಡೆಯಲಾಯಿತು. ನಂತರ ಸ್ಥಳಕ್ಕೆ ಹೋಗಿ ತ್ಯಾಜ್ಯ ನಿರ್ವಹಣೆ ಪ್ರಾಮುಖ್ಯತೆ, ವೈಜ್ಞಾನಿಕ ನಿರ್ವಹಣೆ ವಿಧಾನಗಳು, ಘನ ಮತ್ತು ದ್ರವ್ಯ ತ್ಯಾಜ್ಯ ಸಂಪನ್ಮೂಲಗಳ ನಿರ್ವಹಣೆ ಹಂತಗಳು ತ್ಯಾಜ್ಯ ಸಂಗ್ರಹಣೆ ವಿಲೇವಾರಿ ಸೇರಿದಂತೆ ಪ್ರತಿಯೊಂದು ಮಾಹಿತಿಯನ್ನು ಪಡೆಯಲಾಯಿತು. ಅಧ್ಯಯನ ತಂಡಕ್ಕೆ ಅಲ್ಲಿಯ ವಾಸ್ತವಿಕ ಸಂಗತಿಗಳು, ತೆಗೆದುಕೊಂಡ ಕ್ರಮಗಳು ಮೆಚ್ಚುವಂತಿದದ್ದವು. ಇದಕ್ಕೆಲ್ಲ ಸ್ಥಳೀಯ ಪ್ರತಿನಿಧಿಗಳ, ಸಾರ್ವಜನಿಕರ ಸಹಕಾರವೇ ಯೋಜನೆ ಸಮರ್ಪಕ ಯಶಸ್ವಿಗೆ ಕಾರಣವಾಗಿದೆ.

ತಾಲ್ಲೂಕಿನ ಬೆಡಗುಬೆಟ್ಟ ಗ್ರಾಮ ಪಂಚಾಯತಿಗೆ ಭೇಟಿ ನೀಡಲಾಗಿದ್ದು, ಅಲ್ಲಿಯೂ ಕೂಡ ಸ್ವಚ್ಛತೆಗೆ ಹೆಚ್ಚು ಮಹತ್ವ ನೀಡಲಾಗಿದೆ. ಕಸ ವಿಂಗಡನೆ, ಪ್ಲಾಸ್ಟಿಕ್ ಕಪ್, ಬಾಟಲಿ, ಪ್ಲಾಸ್ಟಿಕ್ ಡಬ್ಬಾ, ಕ್ಯಾರಿಬ್ಯಾಗು, ಹಸಿ ಕೊಳೆತ ತರಕಾರಿ ಇತ್ಯಾದಿ ತ್ಯಾಜ್ಯ ವಸ್ತುಗಳನ್ನು ಸಂಸ್ಕರಣೆ ಘಟಕದಲ್ಲಿ ಶೇಖರಣೆ ಮಾಡಿ ಅವುಗಳನ್ನು ಎಸ್.ಎಲ್.ಎರ್.ಎಂ. ಕೇಂದ್ರದಲ್ಲಿ ಪ್ರತ್ಯೇಕಿಸಿ ಸಂಗ್ರಹಿಸಲಾದ ತ್ಯಾಜ್ಯವನ್ನು ವೈಜ್ಞಾನಿಕ ಮತ್ತು ಪರಿಸರ ಸ್ನೇಹಿ ವಿಧಾನದಲ್ಲಿ ಆಧಾಯದ ಮೂಲವನ್ನಾಗಿ ಪರಿವರ್ತಿಸಲಾಗುತ್ತಿದೆ.

ಒಟ್ಟಿನಲ್ಲಿ ಉಡುಪಿ ಜಿಲ್ಲಾ ಅಧ್ಯಯನ ಪ್ರವಾಸ ಸ್ವಚ್ಛ ಭಾರತ ಮಿಷನ ಅಡಿಯಲ್ಲಿ ಕೈಗೊಂಡ ಸಮರ್ಪಕ ಅನುಷ್ಠಾನಗಳು, ಸಿಬ್ಬಂದಿಗಳ ನಡತೆ ಜನಪ್ರತಿನಿಧಿಗಳ ಹಾಗೂ ಅಧಿಕಾರಿಗಳ ಸ್ಪಂದನೆ ಸಮರ್ಪಕವಾಗಿದ್ದು, ತಂಡಕ್ಕೆ ತೃಪ್ತಿ ನೀಡಿತು. ಉಡುಪಿ ಜಿಲ್ಲೆಯ ಬಹುತೇಕ ಗ್ರಾಮ ಪಂಚಾಯತಿಗಳು ಅನುಷ್ಠಾನಕ್ಕೆ ಹೆಚ್ಚು ಮಹತ್ವ ನೀಡಿವೆ. ಈ ಅನುಷ್ಠಾನವು ರಾಜ್ಯದ ಎಲ್ಲಾ ಗ್ರಾಮಗಳಿಗೆ ಅನುಸರಿಸಿದರೆ ಸ್ವಚ್ಛ ಭಾರತ ಮಿಷನ್ ಹಾಗೂ ಮಹಾತ್ಮಾ ಗಾಂಧೀಜಿಯವರು ಕಂಡ ಗ್ರಾಮ ಸ್ವರಾಜ್ಯದ ಪರಿಕಲ್ಪನೆ ಕನಸು ನನಸಾಗಿಸಲು ಸಾಧ್ಯ ಆದ್ದರಿಂದ ಎಲ್ಲರೂ ಗ್ರಾಮೀಣ ಅಭಿವೃದ್ದಿಗಾಗಿ ಸರಕಾರದ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ತರುವಲ್ಲಿ ಶ್ರಮಿಸೋಣ.

ವರದಿ



ಎಸ್.ಸಿ. ದೇವರಮನಿ

ನಂ. 13 ಎ, 2 ನೇಯ ಮುಖ್ಯ ಅಡ್ಡರಸ್ತೆ,
2 ನೇಯ ಮುಖ್ಯ, ಕೆಂಚೇನಹಳ್ಳಿ,
ರಾಜರಾಜೇಶ್ವರಿನಗರ,
ಬೆಂಗಳೂರು – 560 068.
ಮೊ. 9986290012

ಗ್ರಾಮೀಣ ಸೊಗಡಿನ ಉತ್ಪನ್ನಗಳಿಗೆ ನಿರಂತರ ಮಾರುಕಟ್ಟೆಯ ಬಲ ತುಂಬವ ಅವಶ್ಯಕತೆಯನ್ನು ಮನಗಂಡು ಸಮಾನ ಮನಸ್ಕ ಲೇಖಕರು, ವಿನ್ಯಾಸಕರರು, ನಿವೃತ್ತ ಅಧಿಕಾರಿಗಳು ಒಟ್ಟಾಗಿ ದೇಸಿ ಸಂಸ್ಥೆ **(Developing Ecologically Sustainable Industry)** ಯನ್ನು 2000ನೇ ಇಸವಿಯಲ್ಲಿ ಹುಟ್ಟು ಹಾಕಿದರು.

# ದೇಸಿ ಗ್ರಾಮೀಣ ಕೈಮಗ್ಗ ಉತ್ಪನ್ನಗಳ ಉತ್ತಮ ಮಾರುಕಟ್ಟೆ

ಕೈಮಗ್ಗ ಕ್ಷೇತ್ರ ಆರ್ಥಿಕ ವ್ಯವಸ್ಥೆಯ ಮತ್ತು ಸಂಪನ್ಮೂಲ ವಿಕೇಂದ್ರಿಕರಣ, ಪರಿಸರ ಪ್ರೇಮಿ ಅಭಿವೃದ್ಧಿ, ಆರ್ಥಿಕ ಸ್ವಾವಲಂಬನೆ, ಗ್ರಾಮಸ್ಥರ ಅಭಿವೃದ್ಧಿ, ಗ್ರಾಮ ಸ್ವರಾಜ್ಯಕ್ಕೆ ಪೂರಕವಾದ ಈ ಕ್ಷೇತ್ರ, ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದಿಂದಾಗಿ ಅನೇಕ ಜಿಲ್ಲೆಗಳಲ್ಲಿ ನೇಕಾರರ ವೃತ್ತಿ ಕುಸಿದು ಅವರ ಬದುಕು ದುರಂತಮಯವಾಗುತ್ತದೆ. ವಸ್ತ್ರ ನೀಡುವ ನೇಕಾರರನ್ನು ನಿರ್ಲಕ್ಷಿಸಲಾಗುತ್ತದೆ. ಅಲ್ಲದೇ ಕೈಮಗ್ಗ ಕ್ಷೇತ್ರ, ವಿದ್ಯುತ್ ಮಗ್ಗ ಹಾಗೂ ಮಿಲ್ ಬಟ್ಟೆಯ ಪೈಪೋಟಿಯಲ್ಲಿ ಸೋರುಗುತ್ತಿದೆ. ಸೊಗಸು ದೀರ್ಘ ಬಾಳಿಕೆ, ವಿಭಿನ್ನ ವಿನ್ಯಾಸ, ವಿಶಿಷ್ಟತೆ, ರಚನಾ ಕೌಶಲ್ಯ, ಎಲ್ಲಾ ಋತುಮಾನಗಳಲ್ಲಿ ಬಳಸುವ ವಸ್ತುಗಳಾಗಿದ್ದರೂ ಈ ಕ್ಷೇತ್ರ ನಿರ್ಲಕ್ಷಕ್ಕೆ ಗುರಿಯಾಗಿ ನಶಿಸುವ ಹಾದಿ ಹಿಡಿದಿದೆ. ಇಂಥಹ ಕ್ಷೇತ್ರದ ಪುನಃಶ್ಚೇತನಕ್ಕೆ ಅವರು ಉತ್ಪಾದಿಸುವ ವಸ್ತುಗಳಿಗೆ ನಗರ ಹಾಗೂ ಪಟ್ಟಣಗಳಲ್ಲಿ ಮಾರುಕಟ್ಟೆ ಒದಗಿಸಿ ನಗರದ ಮದ್ಯಮ ವರ್ಗದ ಜನರಿಗೆ ನ್ಯಾಯವಾದ ಬೆಲೆಯಲ್ಲಿ ವಸ್ತುಗಳನ್ನು ನೀಡಿ ಅತ್ಯುತ್ತಮ ಯಶಸ್ಸು ಸಾಧಿಸಿ ಕರ್ನಾಟಕದ ಉತ್ತಮ ಮಾರುಕಟ್ಟೆ ಸಂಸ್ಥೆಯಾಗಿ ದೇಸಿ ಕಾರ್ಯನಿರ್ವಹಿಸುತ್ತದೆ. ಇಂತಹ ಮಾದರಿಗಳು ಅಗಣಿತವಾಗಿ ಬೆಳೆದರೆ ಇನ್ನು ಹೆಚ್ಚಿನ ಗ್ರಾಮೀಣ ಕುಶಲಕರ್ಮಿಗಳಿಗೆ ಉತ್ತಮ ಬಾಳನ್ನು ಒದಗಿಸಬಹುದಾಗಿದೆ.



## ಮಾಲ್ ಸಂಸ್ಕೃತಿ ಮತ್ತು ದೇಶಿ ಸಂಸ್ಕೃತಿ

ಪಟ್ಟಣ ಹಾಗೂ ನಗರಗಳಲ್ಲಿ ಮಾಲ್ ಸಂಸ್ಕೃತಿ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದ್ದು, ದುಬಾರಿ ಬಾಡಿಗೆ ದುಬಾರಿ ವೆಚ್ಚದ ಒಳಾಂಗಣ, ದುಬಾರಿ ಸಿಬ್ಬಂಧಿ, ಅಪರಿಮಿತ ಜಾಹೀರಾತು ಖರ್ಚು ಮಾಲ್‌ಗಳ ವೈಶಿಷ್ಟ್ಯವಾಗಿದೆ. ಆದುದರಿಂದ, ಗ್ರಾಮಾಂತರ ಪ್ರದೇಶದ ವಸ್ತುಗಳು ದುಬಾರಿ ಬೆಲೆಯಲ್ಲಿ ಮಾರಾಟ ಮಾಡುವುದು ಅನಿವಾರ್ಯವಾಗಿ, ಕೇವಲ ಅತ್ಯಲ್ಪ ಸಂಖ್ಯೆಯ ಶ್ರೀಮಂತ ಜನ ಮಾತ್ರ ವಸ್ತುಗಳನ್ನು ಕೊಂಡುಕೊಳ್ಳುವರು. ಕೊಳ್ಳುಬಾಕ ಮಾಲ್ ಸಂಸ್ಕೃತಿಗೆ ಪರ್ಯಾಯವಾಗಿ ಕಡಿಮೆ ಬಾಡಿಗೆ-ಯ, ಅತ್ಯಲ್ಪ ಒಳಾಂಗಣ ವೆಚ್ಚದ, ನ್ಯಾಯಯುತ ಸಂಬಳದ ಸಿಬ್ಬಂದಿ, ಜಾಹೀರಾತು ಖರ್ಚಿಲ್ಲದೇ ಹೆಚ್ಚಿನ ಸಂಖ್ಯೆಯಲ್ಲಿರುವ ಮಧ್ಯಮ ವರ್ಗದ ಜನರಿಗೆ ಅನುಕೂಲವಾದ ಬೆಲೆಯಲ್ಲಿ ವಸ್ತುಗಳು ದೊರಕುವಂತಾಗುವ ಸಂಸ್ಕೃತಿಬೇಕು.

## ಪ್ರಸನ್ನರ ದೇಸಿ ಒಲವು

ಹೆಸರಾಂತ ಲೇಖಕ, ರಂಗಕರ್ಮಿ, ಸಮಾಜಮುಖಿ ಚಿಂತಕರಾದ ಶ್ರೀ.ಪ್ರಸನ್ನ ಅವರು ದೇಸಿ ಸಂಸ್ಕೃತಿಯ ಉಳಿವಿಗಾಗಿ ಸಮುದಾಯ, ಕವಿ-ಕಾವ್ಯ ಟ್ರಸ್ಟ್, ಚರಕ ಮಹಿಳಾ ಸಹಕಾರಿ ಸಂಘ ಗ್ರಾಮ ಸೇವಾ ಸಂಘ ಮುಂತಾದ ಸಂಸ್ಥೆಗಳ ರೂವಾರಿ. ವಿವಿಧ ಭಾಷೆಗಳಲ್ಲಿ ದೇಸಿಯ ಅರ್ಥ ಸ್ವದೇಸಿ, ಸಾಂಪ್ರದಾಯಿಕ ವಸ್ತುಗಳೆಂದು ಅರ್ಥೈಸಬಹುದಾಗಿದೆ. ಮಗದೊಂದು ಅರ್ಥದಲ್ಲಿ ಪರಿಸರ ಸ್ನೇಹಿ ಉದ್ದಿಮೆಗಳ ಸುಸ್ಥಿರ ಅಭಿವೃದ್ಧಿ ಎಂದಾಗುತ್ತದೆ.

## ದೇಸಿ ಅಭಿವೃದ್ಧಿ

ಬೆಂಗಳೂರಿನ ಮಲ್ಲೇಶ್ವರಂ ಮನೆಯೊಂದರಲ್ಲಿ ದೇಸಿ ಮಾರಾಟ ಮಳಿಗೆಯನ್ನು ಶುಭಾರಂಭ ಮಾಡಲಾಗಿದ್ದು, ಗ್ರಾಹಕರಿಂದ ಉತ್ತಮ ಪ್ರೋತ್ಸಾಹ ದೊರಕಿದೆ. ಆದರೆ, ಅನಿವಾರ್ಯ ಕಾರಣಗಳಿಂದ ಈ ಅಂಗಡಿಯನ್ನು ಬಸವನಗುಡಿಯ 300 ಚದರ ಅಡಿ ವಿಸ್ತೀರ್ಣವನ್ನು ಹೊಂದಿದ ಸಣ್ಣ ಜಾಗಕ್ಕೆ ಸ್ಥಳಾಂತರಿಸಲಾಯಿತು. ಈ ಜಾಗದಲ್ಲೂ ವ್ಯಾಪಾರವು ಗಣನೀಯ ಪ್ರಮಾಣದಲ್ಲಿ ಹೆಚ್ಚುತ್ತಿರುವುದನ್ನು ಗಮನಿಸಿ ಬಸವನಗುಡಿಯ ಸೌತ್‌ಎಂಡ್ ಸರ್ಕಲ್‌ನಲ್ಲಿ ದೊಡ್ಡ ಮನೆಯನ್ನೆ ದೇಸಿ ಮಾರಾಟ ಮಳಿಗೆಯನ್ನಾಗಿ ಪರಿವರ್ತಿಸಿ ಪ್ರಾರಂಭಿಸಲಾಯಿತು. ಮಧ್ಯಮ ವರ್ಗದ ಗ್ರಾಹಕರಿಂದ ಅತ್ಯುತ್ತಮ ಪ್ರೋತ್ಸಾಹ ದೊರಕಿ, ಚರಕ ಮಹಿಳಾ ಸಹಕಾರಿ ಸಂಘವನ್ನಲ್ಲದೇ ಕರ್ನಾಟಕದ ವಿವಿಧ ಗ್ರಾಮೀಣ ಪ್ರದೇಶದ ಕೈಮಗ್ಗ, ಖಾದಿ, ಕರಕುಶಲ ಇತ್ಯಾದಿ ವಸ್ತುಗಳಿಗೂ ಮಾರಾಟ ಸೌಲಭ್ಯ ಒದಗಿಸಲಾಯಿತು. ಮಾಲ್ ಸಂಸ್ಕೃತಿಗೆ ಪರ್ಯಾಯವಾಗಿ ಗ್ರಾಹಕರಿಗೆ ಕೈಗೆಟಕುವ ಬೆಲೆಯಲ್ಲಿ ದೇಸಿ ಪದಾರ್ಥಗಳನ್ನು ಒದಗಿಸುವಲ್ಲಿ ಯಶಸ್ವಿಯಾಯಿತು.



ಗ್ರಾಮೀಣ ಉತ್ಪಾದಕರಿಗೆ, ಶ್ರಮ ಕಡಿಮೆ ಮಾಡಲು ಅವಶ್ಯಕ ಕೈ ಸಲಕರಣೆ, ಮಗ್ಗ ಮೂಲಭೂತ ಸೌಕರ್ಯಕ್ಕಾಗಿ ಅಭಿವೃದ್ಧಿ ನಿಧಿ ವಿನ್ಯಾಸ, ತಾಂತ್ರಿಕತೆ, ವೈಜ್ಞಾನಿಕ ಬೆಲೆ ನಿರ್ಧಾರ ಮುಂತಾದ ಸೌಲಭ್ಯಗಳನ್ನು ಒದಗಿಸಿತು.

## ಗ್ರಾಹಕ ಸ್ನೇಹಿ

ದೇಸಿ ದೊಡ್ಡದಾದ ಫ್ಯಾಶನ್ ಲೇಬಲ್ ಅಂಟಿಸಿಕೊಳ್ಳಲಿಲ್ಲ. ಗ್ರಾಹಕರನ್ನು ಮುಗುಳು ನಗೆಯಿಂದ ಸ್ವಾಗತಿಸಿ, ಅವರನ್ನು ಅಥಿತಿಗಳಂತೆ ನೋಡಿಕೊಂಡು ಅವರೆಲ್ಲ ಶ್ರಮ ಸಂಸ್ಕೃತಿಯನ್ನು ಉಳಿಸುವ ಚಳುವಳಿಯಲ್ಲಿ ಭಾಗಿಯಾಗುವಂತೆ ಮಾಡಲಾಯಿತು. ದೇಸಿ ಸೊಗಡಿನ ಅಂಗಡಿ ಆಕರ್ಷಣೀಯ ಕೇಂದ್ರಗಳಾಗಿ ಮಾರ್ಪಟ್ಟವು. ಶ್ರಮ ಜೀವಿ ಗ್ರಾಮೀಣ ಕುಶಲಕರ್ಮಿಗಳಿಗೆ ಸುಸ್ಥಿರ ಬದುಕಿನ ಆಶಾಕಿರಣವಾಗಿ ಹೊರಹೊಮ್ಮಿತು. ಉತ್ಪಾದಕರ ಹಾಗೂ ಗ್ರಾಹಕರ ನಡುವಿನ ಸೌಹಾರ್ದ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದೆ. ಗ್ರಾಹಕರಿಗೆ ಅನುಕೂಲವಾಗುವಂತೆ, ಕೈಬರಹದ ರಸೀದಿಗೆ ಪರ್ಯಾಯವಾಗಿ, ಬಾರ್‌ಕೋಡಿಂಗ್ ಪದ್ಧತಿಯನ್ನು ಅಳವಡಿಸಿ ಗಣಕೀಕೃತ ರಸೀದಿ ನೀಡುವ ಮತ್ತು ಕ್ರೆಡಿಟ್ ಕಾರ್ಡು/ಡೆಬಿಟ್ ಕಾರ್ಡು ಸ್ವೀಕೃತಿಯನ್ನು ಪ್ರಾರಂಭಿಸಲಾಯಿತು. ಪ್ರಮುಖ ಹಬ್ಬವಾದ ದೀಪಾವಳಿಯಲ್ಲಿ ಪ್ರತಿವರ್ಷ ಗ್ರಾಹಕರ ಉತ್ತೇಜನಕ್ಕಾಗಿ ರಿಯಾಯಿತಿ ಮಾರಾಟ ವ್ಯವಸ್ಥೆಯನ್ನು ಜಾರಿಗೊಳಿಸಲಾಯಿತು.

ವೈಜ್ಞಾನಿಕ ವಿಧಾನದಲ್ಲಿ ವಸ್ತುಗಳ ಶೇಖರಣೆ ಮತ್ತು ಸಮರ್ಪಕ ವಿತರಣೆಗಾಗಿ ಪ್ರತ್ಯೇಕ ಉಗ್ರಾಣವನ್ನು ಪ್ರಾರಂಭಿಸಲಾಯಿತು. ಎಲ್ಲ ಉದ್ಯೋಗಿಗಳಿಗೆ ಕೈಮಗ್ಗ ಕ್ಷೇತ್ರದ, ನೈಸರ್ಗಿಕ ವರ್ಣಗಳ ಗ್ರಾಮೀಣ ಕುಶಲಕರ್ಮಿಗಳ ವಿವಿಧ ಉತ್ಪಾದನಾ ಸಂಘ-ಸಂಸ್ಥೆಗಳ ಕುರಿತು ಅರಿವು ಮೂಡಿಸುವ ಸಮರ್ಪಕ ತರಬೇತಿ ನೀಡಿ ಗ್ರಾಹಕರಿಗೆ ಅತ್ಯಾವಶ್ಯಕ ಮಾಹಿತಿ ಒದಗಿಸಿ ಕೊಂಡುಕೊಳ್ಳುವುದರಿಂದ ಆಗುವ ಪ್ರಯೋಜನೆಗಳನ್ನು ಅರುವುದು ಮಾರಾಟದ ಒಂದು ಭಾಗವಾಯಿತು.

## ದೇಸಿ ಅಂಗಡಿಗಳ ಅರಿವು ಮೂಡಿಸುವುದು

ಬಸವನಗುಡಿಯ ಸೌತ್‌ಎಂಡ್ ದೇಸಿ ಅಂಗಡಿಯ ಅದ್ಭುತ ಯಶಸ್ಸನ್ನು ಹಾಗೂ ಉತ್ಪಾದಕರ ಸಂಖ್ಯೆಯಲ್ಲಿ ಹೆಚ್ಚಳದಿಂದಾಗಿ, ಬ್ಯಾಂಕ್ ಕಾಲೋನಿಯ ಸೀತಾ ಸರ್ಕಲ್‌ನಲ್ಲಿ ದೇಸಿಯ ಎರಡನೇಯ ಮಾರಾಟ ಮಳಿಗೆಯನ್ನು ಪ್ರಾರಂಭಿಸಲಾಯಿತು. ಉತ್ತರ ಕರ್ನಾಟಕದ ಕೊಂಡುಕೊಳ್ಳವವರಿಗೆ ಅನುಕೂಲವಾಗುವಂತೆ ಶೈಕ್ಷಣಿಕ ನಗರವಾದ ಧಾರವಾಡದಲ್ಲಿ ದೇಸಿ ಸೊಗಡಿನ ಮೂರನೇಯ ಅಂಗಡಿಯನ್ನು ಕಾರ್ಯರಂಭಗೊಳಿಸಲಾಯಿತು. ತದನಂತರ ವಿಶ್ವದಲ್ಲೇ ಹೆಸರುವಾಸಿಯಾದ ಸಾಂಸ್ಕೃತಿಕ ನಗರವಾದ ಮೈಸೂರಿನಲ್ಲಿ ಐದನೇಯ ಅಂಗಡಿಯನ್ನು ತೆರೆಯಲಾಯಿತು.

ಅತೀ ವೇಗವಾಗಿ ಬೆಳೆಯುತ್ತಿರುವ ರಾಜ್ಯದ ರಾಜಧಾನಿಯ ಜನತೆಯ ಬೇಡಿಕೆಯನ್ನು ಅರಿತು, ಮಲ್ಲೇಶ್ವರಂ, ರಾಜರಾಜೇಶ್ವರಿನಗರ, ಕೆಂಗೇರಿ ಮತ್ತು ವಿಜಯನಗರ ಬಡಾವಣೆಗಳಲ್ಲಿ ದೇಸಿಯ ಕಂಪನ್ನು ಹರಡಲಾಯಿತು. ಮಾರುಕಟ್ಟೆ ಹರವನ್ನು ಮಲೆನಾಡಿನ ಕಲಾ ಪ್ರೇಮಿ ಜನತೆಯ ಸೌಲಭ್ಯಕ್ಕಾಗಿ ಶಿವಮೊಗ್ಗ ಮತ್ತು ಸಿದ್ದಾಪುರಗಳಲ್ಲಿ ವಿಸ್ತರಿಸಲಾಯಿತು. ದಕ್ಷಿಣ ಕನ್ನಡದ ಕಡಲತೀರದ ಮಂಗಳೂರು ನಗರ ಹಾಗೂ ವಾಣಿಜ್ಯ ನಗರ ಹುಬ್ಬಳ್ಳಿಗಳಲ್ಲಿಯೂ ದೇಸಿ ಮಾರಾಟ ಮಳಿಗೆಗಳು ಕಾರ್ಯನಿರತವಾಯಿತು. ಕರ್ನಾಟಕದ ಉದ್ದಗಲಗಳಲ್ಲಿ ಒಟ್ಟು 12 ಅಂಗಡಿಗಳು ದೇಸಿ ಸಂಸ್ಕೃತಿಯ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿವೆ.

## ಮಾರಾಟದ ಮೈಲುಗಲ್ಲು

ದೇಸಿ ಸಂಸ್ಥೆ ಕಾರ್ಯಾರಂಭ ಮಾಡಿದ ವರ್ಷದಲ್ಲಿ ಅಂದರೆ 1999-2000 ರಲ್ಲಿ ಮಾರಾಟ ರೂ.14.00 ಲಕ್ಷ ರೂಪಾಯಿ ಇದ್ದದ್ದು 2001-02 ರಲ್ಲಿ ರೂ.34.00 ಲಕ್ಷ ರೂಪಾಯಿ, 2005-06 ರಲ್ಲಿ ರೂ.125.00 ಲಕ್ಷ ರೂಪಾಯಿ, 2010-11 ರಲ್ಲಿ ರೂ.307.00 ಲಕ್ಷಕ್ಕೆ ಮತ್ತು 2016-17 ರಲ್ಲಿ ರೂ.633.00 ಲಕ್ಷ ರೂಪಾಯಿಗೆ ಏರಿಕೆಯಾಗಿದೆ. ಮಾರಾಟದಲ್ಲಿ ಅತ್ಯುತ್ತಮ ಅಭಿವೃದ್ಧಿ ಸಾಧಿಸುತ್ತಿರುವ ಸಂಸ್ಥೆಯಾಗಿ ಕರ್ನಾಟಕ ರಾಜ್ಯಕ್ಕೆ ಕೀರ್ತಿ ತಂದಿದೆ.

## ನೇಕಾರಿಕೆಗೆ ಉತ್ತೇಜನ

ಕೈಮಗ್ಗ ಕ್ಷೇತ್ರದ ಶ್ರಮ ಜೀವಿಗಳಿಗೆ ಪ್ರೋತ್ಸಾಹ ನೀಡಿ ಅವರು ಸುಸ್ಥಿರ ಬದುಕು ಬದುಕುವಂತೆ ಮಾಡಲು ಉತ್ಪಾದನೆಗೆ ಅನುಗುಣವಾಗಿ ಬೋನಸ್ ನೀಡುವ ವಿಶಿಷ್ಠ ಯೋಜನೆಯನ್ನು ದೇಸಿ ಜಾರಿ ಮಾಡಿತು. ಅಂದರೆ, ಮಾರಾಟದಿಂದ ಬರುವ ಲಾಭಾಂಶದಲ್ಲಿ ದುಡಿಯುವ ಕೈಗಳ ಪಾಲಿದೆ ಎಂಬುದನ್ನು ಅರುವಲು ಬೋನಸ್ ಯೋಜನೆ ತುಂಬ ಸಹಕಾರಿಯಾಗಿದೆ. 2015-16ನೇ ಸಾಲಿನಲ್ಲಿ 633 ಶ್ರಮ ಜೀವಿಗಳಿಗೆ ರೂ.27.00 ಲಕ್ಷ ರೂಪಾಯಿಯ



ಬೋನಸ್ ನೀಡಿದ್ದು, ಇದೊಂದು ಉತ್ತಮ ಅನುಕರಣೀಯ ವಿಷಯವಾಗಿದೆ.

## ದಾಸೀಮಯ್ಯ ರಾಷ್ಟ್ರೀಯ ಪ್ರಶಸ್ತಿ

ಕೈಮಗ್ಗ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗಾಗಿ ಶ್ರಮ ವಹಿಸಿದ ವ್ಯಕ್ತಿ ಹಾಗೂ ಸಂಸ್ಥೆಗಳನ್ನು ಗುರುತಿಸಿ ಪ್ರೋತ್ಸಾಹಿಸಲು ದಾಸೀಮಯ್ಯ ಅವರ ಹೆಸರಿನಲ್ಲಿ ರಾಷ್ಟ್ರೀಯ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿಯು ನಗದು ಹಣ, ಪ್ರಶಸ್ತಿ ಪತ್ರ, ಗಾಂಧೀಜಿಯವರ ಕಂಚಿನ ಪುತ್ಥಳಿ ಒಳಗೊಂಡಿರುವುದಲ್ಲದೇ ಅವರು ಉತ್ಪಾದಿಸುವ ವಸ್ತುಗಳಿಗೆ ಮಾರುಕಟ್ಟೆ ಸೌಲಭ್ಯ ಒದಗಿಸುವುದಾಗಿದೆ. ಈ ಯೋಜನೆಯಡಿಯಲ್ಲಿ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಸಂಸ್ಥೆಗಳಿಗೆ ಮತ್ತು ವ್ಯಕ್ತಿಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿರುತ್ತದೆ.

## ಅರಿವು ಕಾರ್ಯ

ಪ್ರತಿಷ್ಠಿತ ವಿಶ್ವವಿದ್ಯಾಲಯಗಳು, ಕಾಲೇಜು, ಮಾಹಿತಿ ತಂತ್ರಜ್ಞಾನ ಕಂಪನಿಗಳಲ್ಲಿ ದೇಸಿ ವಸ್ತುಗಳ ಪ್ರದರ್ಶಗಳನ್ನು ಹಮ್ಮಿಕೊಂಡು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವುದು ದೇಸಿಯ ಹೆಗ್ಗಳಿಕೆ. ದೇಸಿ ಸಂಸ್ಕೃತಿಯನ್ನು ಭವಿಷ್ಯದಲ್ಲಿ ಉಳಿಸಿ ಬೆಳೆಸುವಲ್ಲಿ ಅರಿವು ಕಾರ್ಯಕ್ರಮಗಳು ಬಹು ಮುಖ್ಯ ಪಾತ್ರ ವಹಿಸುತ್ತವೆ. ಕೈಮಗ್ಗದ ವಸ್ತ್ರ ಭವಿಷ್ಯದ ಬಟ್ಟೆಯಾಗುವುದೆಂಬ ನಂಬಿಕೆ ದೇಸಿ ಸಂಸ್ಥೆಗೆ ಇರುವುದು ಅತ್ಯುತ್ತಮ ಧ್ಯೇಯವಾಗಿದೆ

## ಸಮಾರೋಪ

ಗ್ರಾಮಾಂತರ ಪ್ರದೇಶದ ಕೈಉತ್ಪಗಳಿಗೆ ನಗರ ಹಾಗೂ ಪಟ್ಟಣಗಳಲ್ಲಿ ಉತ್ತಮ ಮಾರುಕಟ್ಟೆ ಇದೆ ಎಂಬುದನ್ನು ಮನಗಂಡು ದೇಸಿ ಉತ್ಪಾದಕರಿಗೆ ಮಧ್ಯವರ್ತಿಗಳ ಹಾವಳಿ ಇಲ್ಲದೆಯೇ ಮಾರುಕಟ್ಟೆ ಸೌಲಭ್ಯ ನೀಡುತ್ತಿದೆ. ಸರಳವಾದ ಅಪ್ಪಟ ಗ್ರಾಮಾಂತರ ಪ್ರದೇಶದ ವಸ್ತುಗಳನ್ನು ಮಾರಾಟ ಮಾಡುವ ಈ ಉತ್ತಮ ಮಾದರಿ ಅನುಕಣೀಯವಾಗಿದೆ. ಗ್ರಾಮಾಂತರ ಪ್ರದೇಶದ ವಿವಿಧ ಯೋಜನೆಗಳ ಸಫಲತೆಯು ಉತ್ಪಾದನೆಯಾದ ವಸ್ತುಗಳಿಗೆ ನೂರು ಪ್ರತಿಶತ ನೇರ ಮಾರುಕಟ್ಟೆ ಲಭ್ಯತೆ ಮೇಲೆ ಅವಲಂಬಿಸಿದೆ

## ನೇಕಾರಿಕಾ ಕೇಂದ್ರಗಳು

ಗದಗ ಜಿಲ್ಲೆಯ ಗಜೇಂದ್ರಗಡ, ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರ, ಮಲ್ಲಾಪುರ, ಗುಳೇದಗುಡ್ಡ, ಕೆರೂರು, ವಿಜಯಪುರ, ಜಿಲ್ಲೆಯ ಗೊಳಸಂಗಿ, ಹಾವೇರಿ ಜಿಲ್ಲೆಯ ತುಮ್ಮಿನಕಟ್ಟೆ, ಯಾದಗಿರಿ ಜಿಲ್ಲೆಯ ರುಕ್ಮಾಪುರ, ಕೊಡೇಕಲ್ ಶಿವಮೊಗ್ಗ ಜಿಲ್ಲೆಯ ಹೊನ್ನೇಸರ, ಗೆಣಸಿನ ಕುಣಿ, ಹಂದಿಗೋಡು, ಆವಿನಹಳ್ಳಿ, ಹಾಗೂ ಚಿಟ್ಟೂರು, ಗ್ರಾಮಗಳ ನೇಕಾರಿಕೆ ಕ್ಷೇತ್ರದಲ್ಲಿ ನಿರಂತರ ಕೈ ಉತ್ಪನ್ನಗಾರರು ಮಾರುಕಟ್ಟೆ ಲಾಭ ಪಡೆದು ಸುಸ್ಥಿರ ಬದುಕನ್ನು ಬಾಳುತ್ತಿದ್ದಾರೆ. ಎಂಟು ನೂರಕ್ಕೂ ಹೆಚ್ಚಿನ ಕುಶಲಕರ್ಮಿಗಳು ಫಲಾನುಭವಿಗಳಾಗಿದ್ದಾರೆ.

## ವಸ್ತುಗಳು

ಗಂಡಸರ ಉಡುಪುಗಳಾದ ಜುಬ್ಬಾ ,ಶರ್ಟ್, ಪೈಜಾಮ, ಲುಂಗಿ, ಬನಿಯನ್, ಕೋಟು, ಪಂಚೆ, ಹಾಗೂ ಹೆಂಗಸರ ಉಡುಪುಗಳಾದ ಸೀರೆ, ಟಾಪ್, ವೇಲ್, ವೇಸ್ಟಕೋಟ್, ಘಾಗ್ರ, ಮಕ್ಕಳ ಉಡುಪುಗಳಾದ ಫ್ರಾಕ್, ಶರ್ಟ್, ಆಕ್ಸಸರೀಸರಿಗಳಾದ ವಿವಿಧ ಬ್ಯಾಗು, ಪರ್ಸ್, ಕೈವಸ್ತ್ರ, ಒಳಾಂಗಣದ ಅಲಂಕಾರಿಕ ವಸ್ತುಗಳಾದ ದಿಂಬಿನ ಕವರ್, ಕುರ್ಚಿಕವರ್, ಕರ್ಟನ್, ಬೆಡಶೀಟ್ಸ್ ಹೀಗೆ ವೈವಿಧ್ಯಮಯವಾದ ವಸ್ತುಗಳು, ಮೌಲ್ಯವರ್ಧಿತ ಬಾಂಧಣಿ, ಎಂಬ್ರಾಯಿಡರಿ ಕೈಅಚ್ಚು ಮುದ್ರಣ, ಸಿಬೋರಿ, ಜಾನಪದ ಚಿತ್ತಾರ, ಬಟ್ಟೆ ಪ್ಯಾಚ್ ಮುಂತಾದ ಕಲೆಗಳನ್ನು ಅಳವಡಿಸಿದ ವಸ್ತುಗಳು ಮಾರಾಟವಾಗುತ್ತವೆ. ಈ ವಸ್ತುಗಳಲ್ಲಿ ಹೊಸತನ ನಿರಂತರತೆ ಕಾಣುತ್ತಿದ್ದು, ಮಾರುಕಟ್ಟೆ ಬೇಡಿಕೆಗೆ ತಕ್ಕಂತೆ ವಸ್ತುಗಳು ತಯಾರಾಗುತ್ತವೆ.

ಯಶೋಗಾಥೆ



ಸುಶೀಲ

ಯೋಜನಾ ನಿರ್ದೇಶಕರು,
ಕೆ.ಎಸ್.ಆರ್.ಎಲ್.ಪಿ.ಎಸ್, ಸಂಜೀವಿನಿ,
ಕೋರ್ಟ್ ರಸ್ತೆ, ಜಿಲ್ಲಾ ಪಂಚಾಯತಿ
ಮೈಸೂರು–570005

**ಸಂಘದಲ್ಲಿ ಸದಾ ಕ್ರಿಯಾಶೀಲರಾಗಿರುತ್ತಿದ್ದ ಸರಳರವರು ತಮ್ಮ ತವರು ಮನೆಯಲ್ಲಿ ಅಡಿಕೆ ಸುಲಿದು ಅದನ್ನು ಸ್ವಚ್ಛಗೊಳಿಸಿ ಬೇಯಿಸಿ ಮಾರಾಟ ಮಾಡುತ್ತಿದ್ದ ಕಲೆಯು ಇವರಿಗೂ ಕರಗತವಾಗಿತ್ತು. ಗೊತ್ತಿರುವ ಕಾಯಕದಿಂದ ಏನಾದರೂ ಮಾಡಬೇಕು ಎಂಬ ಆಲೋಚನೆಯಿಂದ ಸಣ್ಣ ಪ್ರಮಾಣದಲ್ಲಿ ಈ ಚಟುವಟಿಕೆಯನ್ನು 2 ವರ್ಷಗಳ ಹಿಂದೆ ಪ್ರಾರಂಭಿಸಿದರು.**

# ಅಡಿಕೆ ಉದ್ದಿಮೆಯಿಂದ ಜೀವನ ನಿರ್ವಹಣೆ

ಶ್ರೀಮತಿ.ಸರಳ ರವರು ಮಧ್ಯಮ ವರ್ಗದ ಕುಟುಂಬವಾಗಿದ್ದು ಕೌಟುಂಬಿಕವಾಗಿ ಇಬ್ಬರು ಸದಸ್ಯರನ್ನು ಹೊಂದಿರುವ ಸಾಮಾನ್ಯ ಕುಟುಂಬ. ಶಿಕ್ಷಕ ಪತಿಯನ್ನು ಕಳೆದುಕೊಂಡು ಬರುವ ಪಿಂಚಣಿ ಹಣದಿಂದ ಹಾಗೂ ಸ್ವಸಹಾಯ ಸಂಘದ ಸಹಾಯದಿಂದ ಮಗನನ್ನು ಎಂಸಿಎ ಓದಿಸಿ ಖಾಸಗಿ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಸರಳ ಅವರು ಪ್ರಗತಿ ಮಹಿಳಾ ಸ್ವಸಹಾಯ ಸಂಘದಲ್ಲಿ ಸದಸ್ಯತ್ವವನ್ನು ಪಡೆದಿರುತ್ತಾರೆ.

ಸಂಘದಲ್ಲಿ ಸದಾ ಕ್ರಿಯಾಶೀಲರಾಗಿರುತ್ತಿದ್ದ ಸರಳರವರು ತಮ್ಮ ತವರು ಮನೆಯಲ್ಲಿ ಅಡಿಕೆ ಸುಲಿದು ಅದನ್ನು ಸ್ವಚ್ಛಗೊಳಿಸಿ ಬೇಯಿಸಿ ಮಾರಾಟ ಮಾಡುತ್ತಿದ್ದ ಕಲೆಯು ಇವರಿಗೂ ಕರಗತವಾಗಿತ್ತು. ಗೊತ್ತಿರುವ ಕಾಯಕದಿಂದ ಏನಾದರೂ ಮಾಡಬೇಕು ಎಂಬ ಆಲೋಚನೆಯಿಂದ ಸಣ್ಣ ಪ್ರಮಾಣದಲ್ಲಿ ಈ ಚಟುವಟಿಕೆಯನ್ನು 2 ವರ್ಷಗಳ ಹಿಂದೆ ಪ್ರಾರಂಭಿಸಿದರು.

## ಅಡಿಕೆ ಶುಚಿಗೊಳಿಸುವ ಉದ್ದಿಮೆ

ಗ್ರಾಮದ ಸುತ್ತಮುತ್ತ ಭಾಗದಲ್ಲಿ ಅಡಿಕೆ ಹೆಚ್ಚು ಬೆಳೆಯುವ ಕಾರಣ ಬ್ಯಾಂಕ್ ಸಾಲ ಹಾಗೂ ಸಂಘದ ಸಾಲದಿಂದ ರೂ.60000/–ಗಳಿಂದ ಹಂತ ಹಂತವಾಗಿ ಅಡಿಕೆ ಬೆಳೆಗಾರರಿಂದ ಕಚ್ಚಾ ಅಡಿಕೆ ಖರೀದಿಸಿ ಕೈಗಳಿಂದಲೇ ಮಾಡಬಹುದಾದ ಸಣ್ಣ ಪ್ರಮಾಣದ ಉದ್ದಿಮೆ ಪ್ರಾರಂಭಿಸಿ ಅಡಿಕೆ ಸುಲಿದು ಒಣಗಿಸಿ ಅಡಿಕೆ ಶುಚಿಗೊಳಿಸಿ ಬೇಯಿಸಿ ಒಣಗಿಸಿ ನಂತರ ಅದನ್ನು ಮೂಟೆಗಳಿಗೆ ತುಂಬಿಸಿ ತಮ್ಮ ತವರು ಮನೆಗೆ ಮುಂದಿನ ಹಂತದ ಮಾರಾಟಕ್ಕಾಗಿ ಸಾಗಿಸುತ್ತಿದ್ದರು, ಇದರಿಂದ ತಿಂಗಳಿಗೆ ಎಲ್ಲ ಖರ್ಚುಗಳನ್ನು ಕಳೆದು 5 ರಿಂದ 6 ಸಾವಿರ ರೂಪಾಯಿಗಳನ್ನು ಗಳಿಸುತ್ತಿದ್ದರು.

ಸಂಜೀವಿನಿ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟದ ಸಹಕಾರ ಹಾಗೂ ಮಾರ್ಗದರ್ಶನದಲ್ಲಿ ಈಗಿರುವ ಉದ್ದಿಮೆಯನ್ನು ದೊಡ್ಡಮಟ್ಟದಲ್ಲಿ ಮಶಿನ್ ಬಳಕೆಯಿಂದ ಇನ್ನೂ ಹೆಚ್ಚಿನ ಆದಾಯ ಗಳಿಸಬಹುದೆಂಬ ಆಲೋಚನೆಯಿಂದ ಅಕ್ಟೋಬರ್ 2018 ರಲ್ಲಿ ಸಂಜೀವಿನಿ ಒಕ್ಕೂಟದಿಂದ ರೂ.50,000/–, ಸಂಘದಿಂದ ರೂ.45,000/–, ಇತರೆ ಸಾಲದಿಂದ ಹಾಗು ಸ್ವಂತ ಬಂಡವಾಳದಿಂದ ರೂ.50,000/–

ಸೇರಿದಂತೆ ಒಟ್ಟು ರೂ.1,45,000/- ಬಂಡವಾಳ ಹೂಡಿ ಹಸಿಯಾದ ಕಾಯಿ ಅಡಿಕೆಗಳನ್ನು ಸುಲಿದು ಶುಚಿ ಮಾಡುವ ಯಂತ್ರವನ್ನು ಖರೀದಿಸಿ ಅದರ ಬಳಕೆಯಿಂದ ಈ ಚಟುವಟಿಕೆಗೆ ಅನುಕೂಲವಾಗಿದ್ದು 3 ಜನ ಸಂಘದ ಸದಸ್ಯರಿಗೆ ಕೆಲಸ ಕೊಟ್ಟು ಹೆಚ್ಚು ಹೆಚ್ಚು ಅಡಿಕೆ ಖರೀದಿಸಿ ಅದನ್ನು ಸುಲಿದು ಶುಚಿಗೊಳಿಸಿ ಬೇಯಿಸಿ ಒಣಗಿಸಿ ಪಿರಿಯಾಪಟ್ಟಣ ತಾಲ್ಲೂಕಿನ ಬೂಕನಕೆರೆಯ ಮೂಲಕ ಶಿವಮೊಗ್ಗಕ್ಕೆ ಸಾಗಿಸುತ್ತಿದ್ದಾರೆ. ಪ್ರಸ್ತುತ ಖರ್ಚುಗಳನ್ನು ಕಳೆದು ತಿಂಗಳಿಗೆ ರೂ.10 ರಿಂದ ರೂ.15 ಸಾವಿರಗಳನ್ನು ಗಳಿಸುತ್ತಿದ್ದಾರೆ.

ಹಿಂದಿನಿಂದಲೂ ತವರು ಮನೆಯಲ್ಲಿ ಅಡಿಕೆ ಸುಲಿಯುವ ಪ್ರಕಿಯೆಯನ್ನು ನೋಡಿಕೊಂಡು ಬೆಳೆದಿರುವುದರಿಂದ ಸರಳರವರೇ 3 ಜನ ಸದಸ್ಯರಿಗೆ ಈ ಕುರಿತು ತರಬೇತಿ ನೀಡಿರುತ್ತಾರೆ.



**1. ಸ್ವ ಸಹಾಯ ಸಂಘ-45000**

**2. NRLM ಸಂಜೀವಿನಿ ಒಕ್ಕೂಟದಿಂದ ಸಿ.ಐ.ಎಫ್ ಸಾಲ- 75000**

**3.ಇತರೆ ಸಾಲ ಹಾಗೂ ಸ್ವಂತ ಬಂಡವಾಳ- 30000**

**4. ಬ್ಯಾಂಕ್ ಸಾಲ - 60000**

(ಸಣ್ಣಪ್ರಮಾಣದಲ್ಲಿ ಕೈಗಳಿಂದ ಮಾಡಲಾಗುತ್ತಿದ್ದ ಅಡಿಕೆ ಶುಚಿ ಪ್ರಕ್ರಿಯೆಗೆ 3 ಬಾರಿ ಬ್ಯಾಂಕಿನಿಂದ ಸಾಲವನ್ನು ಸದಸ್ಯರು ಪಡೆದಿರುತ್ತಾರೆ)

ಈ ಮುಂಚೆ ಕೈಗಳಿಂದ ಪ್ರಕ್ರಿಯೆ ಕೈಗೊಳ್ಳಲಾಗುತ್ತಿತ್ತು ಇದರಿಂದ ಆದಾಯ ಕಡಿಮೆ ಸಮಯ ಹೆಚ್ಚು ತೆಗೆದುಕೊಳ್ಳುತ್ತಿತ್ತು, ಪ್ರಸ್ತುತ ಹೊಸ ಮಶಿನ ಬಳಕೆಯಿಂದ 3 ಜನಕ್ಕೆ ಕೆಲಸ ಹಾಗೂ ಸುಲಭವಾಗಿ ಪ್ರಕ್ರಿಯೆಯನ್ನು ಕೈಗೊಳ್ಳಬಹುದಾಗಿದೆ. ಪ್ರತಿ ತಿಂಗಳು ರೂ.5000/- ಇದ್ದ ಆದಾಯದಿಂದ ಪ್ರಸ್ತುತ ರೂ.15000/- ಆದಾಯ ಗಳಿಸುತ್ತಿರುವುದು. ತಮ್ಮನ್ನು ತಾವು ಪೂರ್ಣ ಪ್ರಮಾಣದಲ್ಲಿ ಈ ಕೆಲಸದಲ್ಲಿ ತೊಡಗಿಸಿಕೊಂಡು ಬೇಗನೆ ಸಾಲ ತೀರಿಸುವ ಗುರಿಯನ್ನು ಹೊಂದಿದ್ದಾರೆ. 3 ಜನ ಸದಸ್ಯರಿಗೆ ಕೆಲಸ ಕೊಡುವ ಮೂಲಕ ಹಾಗು ಈ ಚಟುವಟಿಕೆಯನ್ನು ಗ್ರಾಮದಲ್ಲಿ ತಾವೊಬ್ಬರೇ ಮಾಡುತ್ತಿರುವುದರಿಂದ ಈಗಾಗಲೇ ಕೈಗಾರಿಕೆ ಇಲಾಖೆ, ತಾಲ್ಲೂಕು ಪಂಚಾಯತಿಯವರು ಭೇಟಿ ನೀಡಿ ಮಾಹಿತಿ ಪಡೆದುಕೊಂಡಿರುತ್ತಾರೆ. ಊರಲ್ಲಿ ಸಂಘದ ಕ್ರಿಯಾಶೀಲ ವ್ಯಕ್ತಿಯಾಗಿ ತಮ್ಮನ್ನು ಗುರುತಿಸಿಕೊಂಡಿರುತ್ತಾರೆ. ಸಾಗಾಟ ಹಾಗು ಮಾರುಕಟ್ಟೆ ವ್ಯವಸ್ಥೆಗೆ ಸಂಬಂಧಿಸಿದಂತೆ ಯಾವುದೇ ತೊಂದರೆ ಇಲ್ಲದಿದ್ದರೂ ಬ್ಯಾಂಕ್ ಸಾಲಕ್ಕೆ ಕಾಯದೇ ಇತರೆ ಹಣಕಾಸು ಸಂಸ್ಥೆಯಿಂದ ಹೆಚ್ಚು ಬಡ್ಡಿಗೆ ಸಾಲ ಪಡೆದು ಮಶಿನ ಖರೀದಿಗಾಗಿ ಬಂಡವಾಳ ತೊಡಗಿಸಿದ್ದರಿಂದ ಆತಂಕದಲ್ಲಿದ್ದಾರೆ. ಈ ಚಟುವಟಿಕೆಯನ್ನು ಉತ್ತಮವಾಗಿ ಮುನ್ನಡೆಸಿಕೊಂಡು ಹೋಗಲು ಬ್ಯಾಂಕ್ ಸಾಲದ ನಿರೀಕ್ಷೆಯಲ್ಲಿದ್ದಾರೆ.

ಶ್ರೀಮತಿ.ಸರಳರವರು ಪ್ರಗತಿ ಮಹಿಳಾ ಸ್ವಸಹಾಯ ಸಂಘ ಸದಸ್ಯರಾಗಿದ್ದು ಸಂಜೀವಿನಿ ಒಕ್ಕೂಟದಿಂದ ಸಮುದಾಯ ಬಂಡವಾಳ ನಿಧಿಯಿಂದ ಸಾಲ ಪಡೆದು ವೈಯುಕ್ತಿಕ ಜೀವನೋಪಾಯ ಚಟುವಟಿಕೆಯಲ್ಲಿ ತೊಡಗಿಸಿ ಕೊಂಡು ಪ್ರಸ್ತುತ ಆರ್ಥಿಕವಾಗಿ ಸಭಲತೆಯನ್ನು ಕಂಡುಕೊಂಡಿದ್ದಾರೆ.

**ಕವಿಯ(ಕ್ಷ) ಪ್ರಶ್ನೆ**

# ಮತದಾನ ಮತ್ತು ರಾಜಕೀಯ, ವೈಯಕ್ತಿಕ... ಅಭಿವೃದ್ಧಿ, ಸಾಮೂಹಿಕ ಸಹಭಾಗಿತ್ವ... ಅಲ್ಲವೇ..?


**ಮಾದೇಶ**

**ಮನೆ ನಂ.429, 4ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ತೊಣಚಿಕೊಪ್ಪಲು, ಮೈಸೂರು 570 009**

ರಾಜ್ಯದ ಮೂರೂ ಹಂತದ ಪಂಚಾಯತ್ ವ್ಯವಸ್ಥೆಯು ಸ್ಥಳೀಯ ಸರ್ಕಾರಗಳಾಗಿ ಕಾರ್ಯ ನಿರ್ವಹಿಸುತ್ತಾ ಸಮಗ್ರ ಗ್ರಾಮೀಣ ಪ್ರದೇಶಗಳ ಏಳ್ಗೆಗಾಗಿ ತೊಡಗಿಸಿಕೊಂಡಿರುವುದು ನಮಗೆಲ್ಲಾ ತಿಳಿದ ವಿಷಯವೇ. ಸ್ಥಳೀಯ ಸಮಸ್ಯೆಗಳಿಗೆ ಸ್ಥಳೀಯವಾಗಿಯೇ ಪರಿಹಾರ ಕಂಡುಕೊಳ್ಳಲು ಗ್ರಾಮ ಪಂಚಾಯತಿಗಳಿಗೆ ಅಧಿಕಾರ ವಿಕೇಂದ್ರೀಕರಣ ತತ್ವದ ಹಿನ್ನೆಲೆಯಲ್ಲಿ ಅಧಿಕಾರ, ಅಧಿಕಾರಿ ಮತ್ತು ಅನುದಾನವನ್ನು ಒದಗಿಸಲಾಗಿದೆ. ಹೀಗಾಗಿ ಜಿಲ್ಲಾ, ತಾಲ್ಲೂಕು ಪಂಚಾಯತ್‌ಗಳ ಮೇಲುಸ್ತುವಾರಿಯೊಂದಿಗೆ ಸ್ಥಳೀಯ ಗ್ರಾಮ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಪಂಚಾಯತ್‌ಗಳು ಹಳ್ಳಿಯ ವಿಧಾನ ಸಭೆಗಳೆಂದೇ ಪರಿಗಣಿತವಾಗಿವೆ. ಇದಕ್ಕಾಗಿಯೆ ಸ್ಥಳೀಯ ಗ್ರಾಮಸ್ಥರ ಅಭಿಪ್ರಾಯ ಸಲಹೆಗಳನ್ನು ಪರಿಗಣಿಸಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಗ್ರಾಮ ಪಂಚಾಯತಿಗಳು ನಿಯಮಾನುಸಾರ ಗ್ರಾಮಸಭೆ, ವಾರ್ಡ್‌ಸಭೆ ಕೆಲವೊಂದು ಸಂದರ್ಭಗಳಲ್ಲಿ ವಿಶೇಷ ಸಭೆಗಳನ್ನು ನಡೆಸಿ ಗ್ರಾಮಸ್ಥರ ಅಭಿಪ್ರಾಯಗಳಿಗೆ ಅನುಗುಣವಾಗಿ ಅಭಿವೃದ್ಧಿ ಪರ ನಿರ್ಣಯಗಳನ್ನು ಪಾರದರ್ಶಕವಾಗಿ ಕೈಗೊಳ್ಳುತ್ತವೆ.

ಆದ್ದರಿಂದ ಪ್ರತಿಯೊಬ್ಬ ಗ್ರಾಮಸ್ಥರು ತಮ್ಮ ಗ್ರಾಮ ಪಂಚಾಯತ್‌ಗಳ ಕಾರ್ಯ ವಿಧಾನಗಳ ಬಗ್ಗೆ ಅವಶ್ಯ ಮಾಹಿತಿ ಪಡೆದು ಕಾಲಕಾಲಕ್ಕೆ ಗ್ರಾಮ ಪಂಚಾಯತಿಗಳು ನಡೆಸುವ ಸಭೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ತಮ್ಮ ಸಲಹೆ ಅಭಿಪ್ರಾಯಗಳನ್ನು ಮಂಡಿಸಿದಲ್ಲಿ ಸಕಾರಾತ್ಮಕ ಅಭಿವೃದ್ಧಿಪರ ನಿರ್ಣಯಗಳನ್ನು ಗ್ರಾಮಪಂಚಾಯತಿಗಳು ಕೈಗೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ಸ್ಥಳೀಯ ಸಮಸ್ಯೆಗಳು ಸ್ಥಳೀಯವಾಗಿಯೇ ಪರಿಹಾರಗೊಂಡು ಗಾಂಧೀ ಕನಸಿನ ಗ್ರಾಮ ಸ್ವರಾಜ್ ಪರಿಕಲ್ಪನೆ ಸಾಕಾರಗೊಳ್ಳುತ್ತದೆ. ಈ ಕುರಿತು ನಮ್ಮೆಲ್ಲರ ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು . . .

1. ಗ್ರಾಮಸಭೆ, ವಾರ್ಡ್‌ಸಭೆ ಕೆಲವೊಂದು ಸಂದರ್ಭಗಳಲ್ಲಿ ವಿಶೇಷ ಸಭೆಗಳನ್ನು ನಡೆಸುತ್ತಿರುವುದಾಗಿ ತಮ್ಮ ಗ್ರಾಮ ಪಂಚಾಯತ್‌ಗಳು ಸಾಕಷ್ಟು ಪ್ರಚಾರ ನೀಡಿದ್ದರೂ ಸಹ ಸ್ಥಳೀಯ ಗ್ರಾಮಸ್ಥರು ಸಭೆಗಳಿಗೆ ಬರಲೊಲ್ಲವೇಕೆ ?
2. ಬಂದರೂ ಕೆಲವೊಮ್ಮೆ ಸಭೆಯ ಮೂಲ ಉದ್ದೇಶವನ್ನು ಅರ್ಥ ಮಾಡಿಕೊಳ್ಳದೇ ಪೂರ್ವಾಗ್ರಹಪೀಡಿತರಾಗಿ ಅನಗತ್ಯ ವೈಯಕ್ತಿಕ ಚರ್ಚೆಯಿಂದ ಸಭೆಯ ದಾರಿ ತಪ್ಪಿಸಿದರೆ ಗ್ರಾಮದ ಅಭ್ಯುದಯ ಸಾಧ್ಯವೇ?
3. ಇಂತಹ ಅನಗತ್ಯ ಚರ್ಚೆಗಳಿಂದ ಅನಗತ್ಯ ವಿಷಯಾಂತರವಾಗಿ ಸಭೆಯ ಕಲಾಪ ಹಾಳುಮಾಡಿ ಸಮಯ ಮತ್ತು ಶ್ರಮ ವ್ಯರ್ಥ ಮಾಡುವುದು ಸರಿಯೇ?
4. ಸರ್ಕಾರಿ ಅಧಿಕಾರಿಗಳು ನಮ್ಮ ನಿಮ್ಮ ಕರ್ತವ್ಯ ನಿರ್ವಹಿಸುವ ಸರ್ಕಾರದ ಸೇವಕರು ಎಂಬ ಜ್ಞಾನವಿಲ್ಲದೇ ಅಧಿಕಾರಿಗಳನ್ನು ವಿನಾಕಾರಣ ಶತ್ರುಗಳಂತೆ ಕಾಣುವ ಗ್ರಾಮಸ್ಥರಿಂದ ತಮ್ಮ ಗ್ರಾಮದ ಅಭಿವೃದ್ಧಿಪಡಿಸಲು ಸಾಧ್ಯವೇ?
5. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪರಿಕಲ್ಪನೆಯೆ ಅದ್ಭುತ. ಈ ಯೋಜನೆಯ ಮಾರ್ಗಸೂಚಿಯಂತೆ ರೈತ; ವಯಸ್ಕ ತನ್ನ ಮನೆಮಂದಿಯವರೊಂದಿಗೆ ತನ್ನ ಸ್ವಂತ ಜಮೀನಿನಲ್ಲಿ ವೈಯಕ್ತಿಕ ಕಾಮಗಾರಿಗಳನ್ನು ಕೈಗೊಂಡರೂ ಸಹ ಸರ್ಕಾರದಿಂದ ಕೂಲಿ ಮತ್ತು ಸಾಮಾಗ್ರಿ ವೆಚ್ಚವನ್ನು ಭರಿಸಿ ಅವರ ಆರ್ಥಿಕ ಪರಿಸ್ಥಿತಿಯನ್ನು ಸದೃಢಗೊಳಿಸಲಾಗುತ್ತಿದೆ. ಇಂತಹ ಹತ್ತು ಹಲವಾರು ಅಭಿವೃದ್ಧಿ ಯೋಜನೆಗಳ ಸದುಪಯೋಗಪಡಿಸಿಕೊಳ್ಳದೆ ವಿನಾಕಾರಣ ಸರ್ಕಾರವನ್ನು ದೂಷಿಸಿದರೆ ತಾವು ಮತ್ತು ತಮ್ಮ ಗ್ರಾಮ ಅಭಿವೃದ್ಧಿ ಹೊಂದಲು ಸಾಧ್ಯವೇ ಇಲ್ಲ ಎಂಬ ಸಾಮಾನ್ಯ ಜ್ಞಾನದ ಅರಿವು ಗ್ರಾಮಸ್ಥರಿಗಿರಬೇಕಲ್ಲವೇ?
6. ಮತದಾನ ಮತ್ತು ರಾಜಕೀಯ ವೈಯಕ್ತಿಕ, ಅಭಿವೃದ್ಧಿ ಸಾಮೂಹಿಕ ಸಹಭಾಗಿತ್ವ ಎಂಬ ಸಾಮಾನ್ಯ ತಿಳುವಳಿಕೆ ಪ್ರತಿಯೊಬ್ಬ ಗ್ರಾಮಸ್ಥರಲ್ಲೂ ಇರಬೇಕಾದ ಮೂಲ ಮಂತ್ರ. ಈ ಮೂಲ ಮಂತ್ರ ಅನುಷ್ಠಾನಕ್ಕೆ ತಂದಾಗ ಮಾತ್ರ ಗ್ರಾಮ ಸ್ವರಾಜ್ಯವಾಗುವಿದೇ ವಿನಹ ರಾಜಕೀಯ ಮಂತ್ರದಿಂದಲ್ಲ ಎಂಬ ಅರಿವು ಇರಬೇಕಲ್ಲವೇ?



**ರಕ್ತವಿಲ್ಲದೆ ದೇಹವು ಹೇಗೆ ಬದುಕುಲು ಸಾಧ್ಯವಿಲ್ಲವೋ ಹಾಗೆಯೇ ಶ್ರದ್ಧೆ ಮತ್ತು ಪ್ರಾರ್ಥನೆಗಳಿಲ್ಲದೆ ಆತ್ಮವೂ ಕೂಡ ಬದುಕಲು ಸಾಧ್ಯವಿಲ್ಲ.**

**● ಮಹಾತ್ಮ ಗಾಂಧಿ**

# ಕಾವ್ಯ




ಕೆ.ವಿ.ಅಮರನಾಥ್

ಹಿರಿಯ ಭೂವಿಜ್ಞಾನಿ,
ಅಧೀಕ್ಷಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಹಾಗೂ
ನೈರ್ಮಲ್ಯ ವೃತ್ತ,
ಬೆಂಗಳೂರು.
ಮೋ ಸಂ: 9008267045


ಜೀವಜಲವ ಕೊಟ್ಟೆ
ಹಸಿರನಿಟ್ಟೆ ಜೊತೆಗೆ
ಜೀವ ಸಂಕುಲವ ಬಿಟ್ಟೆ.
ಸ್ವರ್ಗ ಸುಖವ
ಸವಿಯಲೆಂದು
ಉಸಿರಕೊಟ್ಟು
ಬದುಕಲೆಂದು
ನನ್ನ ಬಿಟ್ಟು ಹೋದೆ
ದೇವಾ.

# ಪರಿಸರ ಸಂರಕ್ಷಣೆ

ಧಗಧಗನೆ ದಹಿಸುತ್ತಿದೆ ಭೂಮಂಡಲ
ಬಾಯಾರಿದ ನಾಲಿಗೆಗೆ ತಣಿಸಲು ಜಲವಿಲ್ಲ
ಮೂಕ ಪ್ರಾಣಿಗಳ ಗೋಳು ಗಗನ ಮುಟ್ಟಿದೆ
ನಾವು ನಮಗಷ್ಟೇ ಎಂಬ ಸ್ವಾರ್ಥ ಜೀವನದ
ಬೆಂಕಿಗೆ ನಾವೇ ಬಲಿಯಾದೆವು.

ಸೌಂದರ್ಯದ ಖನಿಯಂತೆ ಕಾಣಲು ಹಿಂದಿನ
ತಲೆಮಾರು ಹೊದಿಸಿದ್ದ, ಕಾನನಗಳ ಹಸಿರು
ಸೀರೆ ಹರಿದು ಬೆತ್ತಲಾಗಿವೆ. ಜಲವ ಇಂಗಿಸಲು
ಬಿಟ್ಟ ಮರಳಿನ ಪ್ರಾಕೃತಿಕ ಸಂಪತ್ತು ಬಗೆದು
ಹಾಳುಬಿದ್ದ ಗುಂಡಿಗಳಾಗಿವೆ.

ವಿಲಾಸಿ ಜೀವನ ಸಂಭ್ರಮಿಸಲು, ಮನುಜ
ಕುಲ ಉರಿಸಿದ ತೈಲಗಳು, ಕಾರ್ಖಾನೆಗಳು
ಹೊರಬಿಟ್ಟ ದಾವಾನಿಲಗಳು ಆಗಸದೆತ್ತರಕ್ಕೆ
ಚಿಮ್ಮಿ ದುಡುತ್ತಿರುವುದು ಸಂಕಷ್ಟಕ್ಕೆ ಸಕಲ ಜೀವರಾಶಿಯ.

ತಮ್ಮದೇ ಸಾಮ್ರಾಜ್ಯ ಕಟ್ಟಿ ರಾಕ್ಷಸರಾಗಿ
ನಮ್ಮತ್ತ ಗಹಿಗಹಿಸಿ, ಕೇಕೆ ಹಾಕಿ ನಗೆಯೊಂದಿಗೆ
ನಮ್ಮತ್ತ ನೋಡುತ್ತ, ನೀನಿತ್ತ ಕಾಣಿಕೆ ನಿನಗೆ
ಅರ್ಪಣೆ ಮಾಡಿದ್ದುಣ್ಣೋ ಮಾರಾಯ
ಗಾದೆಯ ನೆನಪಿಸುತಿದೆ.

ನಮ್ಮ ಒಡಲು ತುಂಬಬೇಕಾದರೆ ಭೂಮಿಯ
ಒಡಲು ತುಂಬಬೇಕೆಂದು ಅರಿತು, ಮೂಢರಂತೆ
ಭೂಮಿಯ ನರನಾಡಿಗಳ ಹಗಲು ರಾತ್ರಿಯ
ಅರಿವೆ ಇಲ್ಲದೇ, ಹಿರಿಯರು ಬಿಟ್ಟ ಪ್ರಾಕೃತಿಕ
ಸಂಪತ್ತಿನ ಆಸ್ತಿ ಕಾಪಾಡುವ ಪರಿಜ್ಞಾನವಿಲ್ಲದೇ
ಲಾಲಸೆಯಿಂದ ಜಲವ ಭೇದಿಸಿ ಹೊರತೆಗೆದು
ಆಚರಿಸಿದೆವು ಸಂತಸದ ಸಂಭ್ರಮಾಚರಣೆ.



ಈಗ ಕೊರೆದಷ್ಟು ಧೂಳು ನಿರಾಸೆಯ
ಕಾರ್ಮೋಡದತ್ತ ಜನರ ಬದುಕು.
ಜೀವಜಲವ ಕೊಟ್ಟೆ ಹಸಿರನಿಟ್ಟೆ ಜೊತೆಗೆ
ಜೀವ ಸಂಕುಲವ ಬಿಟ್ಟೆ. ಸ್ವರ್ಗ ಸುಖವ
ಸವಿಯಲೆಂದು ಉಸಿರಕೊಟ್ಟು ಬದುಕಲೆಂದು
ನನ್ನ ಬಿಟ್ಟು ಹೋದೆ ದೇವಾ.

ಈಗ ಬಂದೇ ನೀನು ನೋಡಲೆಂದು, ನಾನು
ಜಲಕೆ ಪಾಚಿಗಟ್ಟಿದ ಕಸದ ರಾಶಿಯೇ
ತುಂಬಿ ಬಿಟ್ಟೆ, ಹಸಿರು ಜಾಗದಲ್ಲಿ ಬಯಲು ಮಾಡಿಬಿಟ್ಟೆ,
ಬದುಕಲೆಂದು ನೀನು ಕೊಟ್ಟ ಗಾಳಿಗೆ
ವಿಷವ ತುಂಬಿಸಿ ನರಕವ ನಾನೇ ಕಟ್ಟಿಕೊಂಡುಬಿಟ್ಟೆ.



ಸುತ್ತ ಎತ್ತ ನೋಡಿದರತ್ತ ರೋಗ ರುಜಿನಗಳು
ಈಗ ಅರಿವಾಯಿತು. ನಾನು ಮಾಡಿಬಿಟ್ಟ
ತಪ್ಪುಗಳ ಬೆಟ್ಟ ಕರಗಿಸಲು, ನಿಸ್ವಾರ್ಥದಡೆಗೆ
ನೆಡಬೇಕು ನನ್ನ ಮನಸಿನ ಚಿತ್ತ.

ಭೂಮಿಯಲ್ಲೇ ನರಕವೆಂಬ ಲೋಕದ ಸೃಷ್ಟಿಗೆ
ಕಾರಣ ನಮ್ಮಿಂದಲೇ ಎಂಬುದು ಅರಿವಾಯಿತು.
ತಡವಾಗಿ ಪ್ರಕೃತಿ ಮುನಿದಿದೆ. ವಿಷಗಾಳಿ,
ವಿಷನೀರು ನೀಡುತ್ತಿದೆ ಬಳುವಳಿಯಾಗಿ.
ತಾಯಿ ಹೆತ್ತೊಡಲ ನೋವಿನ ಶಾಪ ತಟ್ಟಲಾರಂಭಿಸಿದೆ.



ಬದುಕು ಕ್ಷಣಿಕವೆಂದು ತಿಳಿದು ಇರುವುದನ್ನೆಲ್ಲ
ಬಳಸಿಬಿಟ್ಟು ಸುಖವ ಸವಿಯಲೆಂದು ಬದುಕಿಬಿಟ್ಟೆ.
ಈಗಲಾದರೂ ಮನುಕುಲ ಎಚ್ಚೆತ್ತು ಭುಮಿಯ
ಸಂತೈಸಿ, ಸರ್ಕಾರದ ಯೋಜನೆಗಳ ಬಳಸಿಕೊಂಡು
ಬಿದ್ದ ಮಳೆ ನೀರ ಕೆರೆ ಕಟ್ಟೆಗಳಲ್ಲಿ ಸಂಗ್ರಹಿಸಿ,
ಗಿಡವ ನೆಟ್ಟು ಸಂತಸವ ಸಂಭ್ರಮಿಸುತ್ತಾ
ಮಿತವ್ಯಯದ ಬದುಕು ನಮ್ಮದಾಗಲಿ.



ಜಗವೆಲ್ಲ ಹಸಿರು ತುಂಬಿ ಸಾರ್ಥಕತೆಯ
ಬದುಕಿನೊಂದಿಗೆ ಮುಂದಿನ ಪೀಳಿಗೆಗೆ
ದಾರಿ ದೀಪವಾಗೋಣ. ಸಕಲ ಜೀವ ಜಂತುಗಳ
ಉಳಿಸಿಕೊಳ್ಳಲು ಪರಿಸರ ಸಂರಕ್ಷಣೆಗೆ ಎಲ್ಲೆಡೆ,
ಸಾಕ್ಷರತೆಯ ಜ್ಞಾನದ ಬೆಳಕ ಪಸರಿಸೋಣ.

# ಕರ್ನಾಟಕ ಸರ್ಕಾರ

**ಸಂಖ್ಯೆ: ಗ್ರಾಅಪ 107 ಜಿಪಸ 2019 (3)** **ದಿನಾಂಕ: 26–07–2019**

**ಸುತ್ತೋಲೆ**

**ವಿಷಯ:** ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಕಾರ್ಯವಿಧಾನಗಳ ಬಗ್ಗೆ ಮಾರ್ಗಸೂಚಿಗಳು.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 194 ಜಿಪಸ 2016, ಬೆಂಗಳೂರು, ದಿನಾಂಕ 03–06–2016.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 309(ಡಿ) ರನ್ವಯ ಸರ್ಕಾರವು, ಗ್ರಾಮ ಪಂಚಾಯತಿಗಳು ಮತ್ತು ತಾಲ್ಲೂಕು ಪಂಚಾಯತಿ ಆಯಾ ತಾಲ್ಲೂಕಿನಲ್ಲಿರುವ ಪುರಸಭಾ ಮತ್ತು ಪಟ್ಟಣ ಪಂಚಾಯಿತಿಗಳ ಯೋಜನೆಗಳನ್ನು ಕ್ರೋಢೀಕರಿಸಲು ಮತ್ತು ಒಟ್ಟಾರೆ ತಾಲ್ಲೂಕಿನ ಅಭಿವೃದ್ಧಿಗಾಗಿ ಯೋಜನೆಯ ಕರಡು ಪ್ರಸ್ತಾವನೆಗಳನ್ನು ಸಿದ್ಧಪಡಿಸಲು ಪ್ರತಿಯೊಂದು ತಾಲ್ಲೂಕಿಗೂ ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯನ್ನು ರಚಿಸಲು ಉಪಬಂಧ ಕಲ್ಪಿಸಲಾಗಿದೆ.

ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯು ಕ್ರಿಯಾತ್ಮಕವಾಗಿ ಕಾರ್ಯನಿರ್ವಹಿಸಲು ಹಾಗೂ ತಾಲ್ಲೂಕಿನ ಸಮಗ್ರ ಅಭಿವೃದ್ಧಿಗೆ ಪೂರಕವಾಗಿರುವ ಯೋಜನೆಯ ಕರಡನ್ನು ಸಿದ್ಧಪಡಿಸಲು ಈ ಕೆಳಕಂಡ ಮಾರ್ಗಸೂಚಿಗಳನ್ನು ನೀಡಲಾಗಿದೆ.

1. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 309(ಡಿ) ರನ್ವಯ ಎಲ್ಲಾ ತಾಲ್ಲೂಕುಗಳ ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯನ್ನು ರಚಿಸಬೇಕು.
2. ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಗಳು ನಿರಂತರ ಸಮಿತಿಗಳಾಗಿದ್ದು, ಸದರಿ ಸಮಿತಿಗೆ ಆಯ್ಕೆಯಾಗುವ ಗ್ರಾಮೀಣ / ನಗರ ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರುಗಳ ಕಾಲಾವಧಿಯು ಅವರುಗಳ ಮೂಲ ಸ್ಥಳೀಯ ಸಂಸ್ಥೆಗಳಲ್ಲಿನ ಸದಸ್ಯತ್ವಾವಧಿ ಅಥವಾ ಅವರುಗಳ ಸದಸ್ಯತ್ವ ನಿಂತುಹೋಗುವವರೆಗೆ (co-terminus with the term) ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆವಿಗೆ ಮುಂದುವರೆಯುವುದು. ಹಾಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮೀಣ/ನಗರ ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 309(ಡಿ) ರನ್ವಯ ಆಯ್ಕೆ ಮಾಡಿ ಸಮಿತಿಯನ್ನು ರಚಿಸಿ ಕಾರ್ಯನಿರ್ವಹಿಸುವುದು. ಸಮಿತಿಯಲ್ಲಿ ಆಕಸ್ಮಿಕವಾಗಿ ಖಾಲಿಯಾಗುವ ಸದಸ್ಯತ್ವ ಸ್ಥಾನಕ್ಕೆ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆ ಮಾಡಿಕೊಂಡು ಕಾರ್ಯನಿರ್ವಹಿಸುವುದು.
3. ಆಯಾ ತಾಲ್ಲೂಕಿನ ಸಮಗ್ರ ಅಭಿವೃದ್ಧಿಗೆ ಮೂಲ ಕೇಂದ್ರವಾದ ಪ್ರತಿ ಗ್ರಾಮಗಳ ಅಭಿವೃದ್ಧಿಗಾಗಿ ಪ್ರತಿ ವಾರ್ಡ್‌ನಲ್ಲಿ ಸ್ಥಳೀಯ ಅವಶ್ಯಕತೆಗಳು ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಗುರುತಿಸಲು, ಜನ ಸಂಪರ್ಕ ಸಭೆಯ ಮುಖಾಂತರ ಆದ್ಯತಾ ಪಟ್ಟಿಗಳನ್ನು ಸಿದ್ಧಪಡಿಸಬೇಕು. ಇವುಗಳನ್ನು ವಾರ್ಡ್ ಸಭೆ / ಗ್ರಾಮ ಸಭೆಗಳಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಬೇಕು. ಈ ಪ್ರಕ್ರಿಯೆಯನ್ನು ಅನುಸರಿಸುವ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಈಗಾಗಲೇ ಅನುಮೋದಿಸಿರುವ "ನಮ್ಮ ಗ್ರಾಮ ನಮ್ಮ ಯೋಜನೆ" ಪ್ರಕ್ರಿಯೆಯನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ಯೋಜನಾ ತಯಾರಿಕಾ ಪ್ರಕ್ರಿಯೆಯನ್ನು ಅನುಬಂಧ–1 ರಲ್ಲಿ ನೀಡಿದೆ.
4. ಪ್ರತಿಯೊಂದು ಗ್ರಾಮ ಪಂಚಾಯಿತಿಯು ನಿಗದಿತ ಪ್ರಕ್ರಿಯೆಯ ಮೂಲಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮತ್ತು ಸ್ಥಳೀಯ ಸಂಪನ್ಮೂಲವನ್ನು ಗಮನದಲ್ಲಿಟ್ಟುಕೊಂಡು ಪ್ರತಿ ವರ್ಷವೂ ಅಭಿವೃದ್ಧಿ ಯೋಜನೆಯೊಂದನ್ನು ಸಿದ್ಧಪಡಿಸತಕ್ಕದ್ದು ಹಾಗೂ ಗೊತ್ತುಪಡಿಸಿದ ದಿನಾಂಕದೊಳಗೆ ತಾಲ್ಲೂಕು ಪಂಚಾಯಿತಿಗಳಿಗೆ ಕಳುಹಿಸತಕ್ಕದ್ದು.

5. ಪ್ರತಿಯೊಂದು ತಾಲ್ಲೂಕು ಪಂಚಾಯತಿಯು ಪ್ರತಿ ವರ್ಷವೂ ಗ್ರಾಮ ಪಂಚಾಯತಿಗಳ ಅಭಿವೃದ್ಧಿ ಯೋಜನೆಗಳನ್ನು ಸ್ವೀಕರಿಸಿದ ನಂತರ ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತಿಗಳ ಯೋಜನೆಗಳನ್ನು ಮತ್ತು ತಾಲ್ಲೂಕಿನ ವ್ಯಾಪ್ತಿಯ ಇತರೆ ಇಲಾಖೆಗಳ ಜಿಲ್ಲಾ ವಲಯದ ಅನುದಾನವನ್ನು ಸೇರಿದಂತೆ ಯೋಜನೆಗಳನ್ನು ಸಿದ್ಧಪಡಿಸಿ ಕ್ರೋಡೀಕರಿಸುವುದು. ಸದರಿ ಯೋಜನೆಯನ್ನು ತಾಲ್ಲೂಕು ಪಂಚಾಯತಿಯ ಸಭೆಯಲ್ಲಿ ಮಂಡಿಸಿ, ತಾಲ್ಲೂಕು ಪಂಚಾಯತಿ ಯೋಜನೆಯನ್ನು ಅಂತಿಮಗೊಳಿಸುವುದು ಮತ್ತು ಗೊತ್ತುಪಡಿಸಬಹುದಾದಂತಹ ದಿನಾಂಕದೊಳಗೆ ಜಿಲ್ಲಾ ಪಂಚಾಯತಿಗೆ ಕಳುಹಿಸತಕ್ಕದ್ದು. ಕಾಲಾನುಕ್ರಮವನ್ನು ಅನುಬಂಧ–2ರಲ್ಲಿ ನೀಡಲಾಗಿದೆ. ಸದರಿ ಯೋಜನೆಯ ವಿವರಗಳನ್ನು ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಮುಂದೆ ಮಂಡಿಸುವುದಕ್ಕಾಗಿ ಸಿದ್ಧಪಡಿಸತಕ್ಕದ್ದು.
6. ತಾಲ್ಲೂಕು ಪಂಚಾಯತಿ ಯೋಜನೆಯೊಂದಿಗೆ ಇತರೆ ಇಲಾಖೆಗಳ (ಪ್ರಮುಖ ಇಲಾಖೆಗಳ ಚಟುವಟಿಕೆಗಳ ಉದಾಹರಣೆಗಳನ್ನು ಸೂಚ್ಯವಾಗಿ ಅನುಬಂಧ–3ರಲ್ಲಿ ನೀಡಿದೆ) ರಾಜ್ಯ ವಲಯದ ಅನುದಾನಕ್ಕೆ ಸಂಬಂಧಿಸಿದ ಯೋಜನೆಗಳನ್ನು ಇಲಾಖಾವಾರು ಸಿದ್ಧಪಡಿಸಿ, ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಅನುಮೋದನೆಗೆ ಸಲ್ಲಿಸತಕ್ಕದ್ದು.
7. ತಾಲ್ಲೂಕು ವ್ಯಾಪ್ತಿಯಲ್ಲಿರುವ ಪಟ್ಟಣ ಪಂಚಾಯತಿ ಹಾಗೂ ಪುರಸಭೆಗಳು ಆಯಾ ಸಂಸ್ಥೆಗಳಿಗೆ ಲಭ್ಯವಿರುವ ಅನುದಾನದ ಸಂಪನ್ಮೂಲ ಗುಚ್ಛವನ್ನು ನಿಗದಿಪಡಿಸುವುದು. ನಂತರ ಸಂಬಂಧಿಸಿದ ನಗರ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳನ್ನೊಳಗೊಂಡ ಸಾಮಾನ್ಯ ಸಭೆಯಲ್ಲಿ ಕ್ರಿಯಾ ಯೋಜನೆಗೆ ಅನುಮೋದನೆಯನ್ನು ಪಡೆದು ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಗೆ ತನ್ನ ಸಂಸ್ಥೆಯ ಅಭಿವೃದ್ಧಿ ಯೋಜನೆಯನ್ನು ಅನುಮೋದನೆಗೆ ಸಲ್ಲಿಸತಕ್ಕದ್ದು.
8. ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಸಮಿತಿಯು ಇಡೀ ತಾಲ್ಲೂಕಿನ ಸಮಗ್ರ ಅಭಿವೃದ್ಧಿ ಯೋಜನೆಯ ಕರಡನ್ನು ಸಿದ್ಧಪಡಿಸಬೇಕು.

## ಆಡಳಿತಾತ್ಮಕ ವ್ಯವಸ್ಥೆ

i. ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಅಧ್ಯಕ್ಷರನ್ನಾಗಿ ಸಂಬಂಧಿಸಿದ ತಾಲ್ಲೂಕಿನ ಹೆಚ್ಚು ಭಾಗವನ್ನು ಪ್ರತಿನಿಧಿಸುವ ವಿಧಾನಸಭೆಯ ಸದಸ್ಯರು ಅಧ್ಯಕ್ಷರಾಗಿರುತ್ತಾರೆ.
ii. ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯು ಕನಿಷ್ಠ ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ಸೇರಬೇಕು.
iii. ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಸಭೆಯನ್ನು ಆಯೋಜಿಸುವ ಸಂದರ್ಭದಲ್ಲಿ ತಾಲ್ಲೂಕು ಪಂಚಾಯತ್ ಸಭೆ ಆಯೋಜಿಸಲು ಸರ್ಕಾರವು ಈಗಾಗಲೇ ನಿಗದಿಪಡಿಸಿರುವ ನಿಯಮಗಳನ್ನು ಪಾಲಿಸತಕ್ಕದ್ದು.
iv. ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿ ಸಂಬಂಧಿಸಿದ ತಾಲ್ಲೂಕಿನ ಹೆಚ್ಚು ಭಾಗವನ್ನು ಪ್ರತಿನಿಧಿಸುವ ವಿಧಾನಸಭೆಯ ಸದಸ್ಯರಿರುವುದರಿಂದ, ಯಾವುದೇ ಕಾರಣಕ್ಕಾಗಿ ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಸಭೆಯನ್ನು ನಿಗದಿಪಡಿಸಿದ ಕಾಲಮಿತಿಯೊಳಗೆ ಆಯೋಜಿಸಲು ಸಾಧ್ಯವಾಗದ ಸಂದರ್ಭಗಳಲ್ಲಿ ಸಂಬಂಧಪಟ್ಟ ತಾಲ್ಲೂಕು ಪಂಚಾಯತಿಯ ಅಧ್ಯಕ್ಷರು ಸಂಬಂಧಿಸಿದ ವಿಧಾನಸಭೆ ಸದಸ್ಯರೊಂದಿಗೆ ಸಮಾಲೋಚಿಸಿ, ಸಭೆಯನ್ನು ಕರೆಯತಕ್ಕದ್ದು.
v. ತಾಲ್ಲೂಕು ಪಂಚಾಯತಿಯ ಸಹಾಯಕ ಯೋಜನಾಧಿಕಾರಿ ಅಥವಾ ಸಹಾಯಕ ನಿರ್ದೇಶಕರು ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕಾಧಿಕಾರಿಗಳಿಗೆ ನೆರವು ನೀಡಬೇಕು.
vi. ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳು ತಾಲ್ಲೂಕು ಪಂಚಾಯತಿಯೊಂದಿಗೆ ಪರಸ್ಪರ ಮಾಹಿತಿ ವಿನಿಮಯ ಮಾಡಿಕೊಳ್ಳಬಹುದಾಗಿದೆ.
vii. ವಿಷಯ ತಜ್ಞರ, ಸಂಶೋಧನಾ ಸಂಸ್ಥೆಗಳ ಹಾಗೂ ಶೈಕ್ಷಣಿಕ ಸಂಸ್ಥೆಗಳ ಪರಿಣಿತರ ಸೇವೆಯನ್ನು ಪಡೆದುಕೊಳ್ಳಬಹುದು.

## ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿ ನಿಧಿ

1. ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿ ನಿಧಿಗೆ ಸ್ಥಳೀಯ ಸಂಸ್ಥೆಗಳು ಆಯಾ ಸಂಸ್ಥೆಗೆ ನಿಗದಿಪಡಿಸಿದ ವಂತಿಕೆಯನ್ನು ನೀಡುವುದು ಮತ್ತು ಸರ್ಕಾರವು ಕೂಡ ಅನುದಾನ ಒದಗಿಸುವುದು. ಈ ನಿಧಿಯಿಂದ ಸದಸ್ಯರುಗಳಿಗೆ ಆಸನ ಭತ್ಯೆ, ಅಧ್ಯಯನ ಕೈಗೊಳ್ಳಲು ಮತ್ತು ಇದಕ್ಕೆ ಸಂಬಂಧಿಸಿದ ಇತರೆ ಕಾರ್ಯಕ್ರಮಗಳ ಖರ್ಚು ವೆಚ್ಚಗಳಿಗಾಗಿ ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯಿಂದ ಅನುಮೋದನೆ ಪಡೆದು ಖರ್ಚು ಭರಿಸಬಹುದಾಗಿರುತ್ತದೆ.
2. ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಗೆ ಈ ಕೆಳಕಂಡ ಸಂಸ್ಥೆಗಳು ವಾರ್ಷಿಕವಾಗಿ ವಂತಿಕೆಯನ್ನು ಭರಿಸತಕ್ಕದ್ದು.

| | **ವಾರ್ಷಿಕ ವಂತಿಗೆ** | **(ರೂ.ಗಳಲ್ಲಿ)** |
|---|---|---|
| **1** | **ಗ್ರಾಮ ಪಂಚಾಯಿತಿಗಳು** | **5000** |
| **2** | **ತಾಲ್ಲೂಕು ಪಂಚಾಯಿತಿಗಳು** | **25000** |
| **3** | **ಪಟ್ಟಣ ಪಂಚಾಯಿತಿಗಳು** | **10000** |
| **4** | **ಪುರಸಭೆಗಳು** | **25000** |

ಜೊತೆಗೆ, ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಗೆ ಸಂಗ್ರಹಿಸುವ ವಂತಿಗೆ ಹಣ ಹಾಗೂ ಸರ್ಕಾರದಿಂದ ಪಡೆಯುವ ಅನುದಾನವನ್ನು ಸಮರ್ಪಕವಾಗಿ ನಿರ್ವಹಿಸಲು ಅನುವಾಗಲು ಈಗಾಗಲೇ ಬ್ಯಾಂಕ್ ಖಾತೆಯಿದ್ದಲ್ಲಿ ಅದರಲ್ಲಿ ನಿರ್ವಹಿಸಲು ಹಾಗೂ ಬ್ಯಾಂಕ್ ಖಾತೆ ಇಲ್ಲದಿದ್ದಲ್ಲಿ ಹೊಸದಾಗಿ ಬ್ಯಾಂಕ್ ಖಾತೆ ತೆರೆದು ನಿಧಿಯ ಚಾಲನೆ ನಿರ್ವಹಿಸಲು ಸೂಚಿಸಿದರು.

ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ತಾಲ್ಲೂಕು ಪಂಚಾಯತಿ ಹಾಗೂ ಸಂಬಂಧಿಸಿದ ನಗರಾಭಿವೃದ್ಧಿ ಸಂಸ್ಥೆಗಳು ಎಲ್ಲಾ ರೀತಿಯ ಆಡಳಿತಾತ್ಮಕ ನೆರವನ್ನು ನೀಡಬೇಕು.

**ಸಹಿ/–**
**(ಪಿ.ದೇವಸಹಾಯಂ)**
ಸರ್ಕಾರದ ಅಧೀನ ಕಾರ್ಯದರ್ಶಿ (ಜಿ.ಪಂ.)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ – ಇತರೆ ಅನುಷ್ಠಾನ ಇಲಾಖೆಗಳ ಕಾರ್ಯಕ್ರಮಗಳೊಂದಿಗೆ ಒಗ್ಗೂಡಿಸುವಿಕೆಯ ಮೂಲಕ ಅನುಷ್ಠಾನ

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 186 ಉಖಾಯೋ 2012 ಬೆಂಗಳೂರು ದಿನಾಂಕ: 23.10.2013
2. ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಅಧಿಸೂಚನೆ ಪತ್ರ ಸಂಖ್ಯೆ: F.No:J-11011/1/2009-MGNREGA-RE-III, ದಿನಾಂಕ:28.03.2019 (ಕೂಲಿ ದರ ಪರಿಷ್ಕರಣೆ)
3. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಒಗ್ಗೂಡಿಸುವಿಕೆ ಸಂಬಂಧ ದಿನಾಂಕ:26.02.2019 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು ನಡೆಸಿದ ಸಭೆಯ ನಡವಳಿಯಂತೆ.
4. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕೂಲಿ ದರ ಪಟ್ಟಿಯನ್ನು ಈ ಕಛೇರಿಯ ಪತ್ರ ಸಂಖ್ಯೆ: ಗ್ರಾಅಪ:193: ಉಖಾಯೋ:2017, ದಿನಾಂಕ:02.04.2019ರಲ್ಲಿ ಹೊರಡಿಸಿರುವ ರೀತ್ಯ.

## ಪ್ರಸ್ತಾವನೆ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಅನುಸೂಚಿ – I ರ ಕಂಡಿಕೆ (6) ರನ್ವಯ ಗುಣಮಟ್ಟದ, ದೀರ್ಘಕಾಲ ಬಾಳಿಕೆ ಬರುವ ಆಸ್ತಿಗಳ ನಿರ್ಮಾಣ ಮಾಡಲು ಹಾಗೂ ಬಡತನದ ನಿರ್ಮೂಲನೆಗೆ ಆಧಾರವಾಗಬಲ್ಲ ರೀತಿಯಲ್ಲಿ, ಪರಿಣಾಮಕಾರಿಯಾಗಿ ಇತರೆ ಇಲಾಖೆಗಳ ಯೋಜನೆಗಳನ್ನು ಈ ಯೋಜನೆಯಡಿ ಒಗ್ಗೂಡಿಸುವಿಕೆಯ ಮೂಲಕ ಕಾಮಗಾರಿಗಳ ಅನುಷ್ಠಾನದ ಹಂತದ ಅಂತ್ಯದವರೆಗೆ ಅಂತರ್ ಇಲಾಖೆಗಳೊಂದಿಗೆ ಒಗ್ಗೂಡಿಸುವಿಕೆಯನ್ನು ಸಾಧಿಸಲು, ರಾಜ್ಯ ಸರ್ಕಾರವು ಅವಶ್ಯಕವಾದ ಹೆಜ್ಜೆಗಳನ್ನು ತೆಗೆದುಕೊಳ್ಳಬೇಕಾಗಿರುತ್ತದೆ.

1. ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ, ಮಾರ್ಗಸೂಚಿಗಳಲ್ಲಿ ಇರುವಂತೆ, ಈಗಾಗಲೇ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುತ್ತಿವೆ. ಅನುಷ್ಠಾನ ಇಲಾಖೆಗಳು ಕೂಡ ಸಮಾನಾಂತರವಾಗಿ ಪಂಚಾಯತ್ ರಾಜ್ ಸಂಸ್ಥೆಗಳೊಂದಿಗೆ ಕಾರ್ಯನಿರ್ವಹಿಸಲು ಮಾರ್ಗಸೂಚಿಗಳಲ್ಲಿ ಅವಕಾಶ ಕಲ್ಪಿಸಿದೆ. ಸಕ್ರಿಯವಾಗಿ ನರೇಗಾ ಯೋಜನೆಯಡಿ ಭಾಗವಹಿಸುವ ಬಹುತೇಕ ಎಲ್ಲಾ ಅನುಷ್ಠಾನ ಇಲಾಖೆಗಳನ್ನು ಅನುಷ್ಠಾನ ಸಂಸ್ಥೆಗಳನ್ನಾಗಿ ಗುರುತಿಸಿ ಘೋಷಿಸಲಾಗಿರುತ್ತದೆ.
2. ಇತರೆ ಇಲಾಖೆಗಳ ಕಾರ್ಯಕ್ರಮ ಯೋಜನೆಗಳನ್ನು ಮಹಾತ್ಮ ಗಾಂಧಿ ನರೇಗಾ ಯೋಜನೆಯೊಂದಿಗೆ ಒಗ್ಗೂಡಿಸುವಿಕೆಯ ಮೂಲಕ ಅನುಷ್ಠಾನಗೊಳಿಸಲು ಕಾರ್ಯಾಚರಣೆ ಮಾರ್ಗಸೂಚಿಗಳ ಅಧ್ಯಾಯ–15 ರಲ್ಲಿ ಯೋಜನೆಯ ಉದ್ದೇಶಗಳನ್ನು ತಲುಪಲು ವಿವಿಧ ವಿದಾನಗಳ ಮೂಲಕ ಕೈಗೊಳ್ಳಲು ಸೂಚಿಸಿರುತ್ತದೆ. ಒಗ್ಗೂಡಿಸುವಿಕೆಯ ಮೂಲಕ, ಬಹು ಬಾಳಿಕೆ ಬರುವ ಸುಸ್ಥಿರ ಆಸ್ತಿಗಳನ್ನು ಸೃಷ್ಠಿಸ ಬಹುದು ಮತ್ತು ಇಲಾಖೆಗಳು ತಮ್ಮ ಚಟುವಟಿಕೆಗಳನ್ನು ವಿಕಸನಗೊಳಿಸಿ, ಸರ್ವಾಂಗೀಣ ಅಭಿವೃದ್ಧಿಯಿಂದ ಗುಣಮಟ್ಟದ ಆಸ್ತಿಗಳನ್ನು ಸೃಜಿಸ ಬಹುದಾಗಿರುತ್ತದೆ.
3. 2019–20 ನೇ ಸಾಲಿಗೆ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ಕೇಂದ್ರ ಸರ್ಕಾರ, ಹೊರಡಿಸಿರುವ ಪ್ರಧಾನ ವಾರ್ಷಿಕ ಸುತ್ತೋಲೆಯ ಕಂಡಿಕೆ 6.7 ರಲ್ಲಿ ಒಗ್ಗೂಡಿಸುವಿಕೆ ಬಗ್ಗೆ ವಿವರಿಸಲಾಗಿದ್ದು, ಕಂಡಿಕೆ 6.8 ರಲ್ಲಿ ವೇಳಾ ಪಟ್ಟಿ ಬಗ್ಗೆ ವಿವರಿಸಲಾಗಿದೆ. ಕಂಡಿಕೆ 6.7.2 ರಲ್ಲಿ ಅಧಿಕ ಸಂಖ್ಯೆಯಲ್ಲಿ ಕೃಷಿ ಹೊಂಡ, ಕೊಳವೆ ಭಾವಿ ಹಾಗೂ ಇತರೆ ನೀರು ಸಂರಕ್ಷಣಾ ಕಾಮಗಾರಿಗಳು, ಎರೆಹುಳು ಗೊಬ್ಬರ ತೊಟ್ಟಿಗಳನ್ನು/ಗುಂಡಿಗಳನ್ನು ನಿರ್ಮಿಸುವುದು, ಕುರಿ/ದನದ ಕೊಟ್ಟಿಗೆಗಳು, ಕೋಳಿ/ಹಂದಿ ಶೆಡ್

ಕಾಮಗಾರಿಗಳನ್ನು ತೆಗೆದುಕೊಳ್ಳಲು ತಿಳಿಸಲಾಗಿದೆ. ಕಂಡಿಕೆ 7.4.1, 7.4.6 ಮತ್ತು 7.4.7ರಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (PMKSY), ಜಲಾನಯನ ಅಭಿವೃದ್ಧಿ ಯೋಜನೆ ಕಾಮಗಾರಿಗಳನ್ನು ತೆಗೆದುಕೊಳ್ಳುವ ಬಗ್ಗೆ ವಿವರಣೆ ನೀಡಲಾಗಿದೆ. ಅಂಗನವಾಡಿ ಕೇಂದ್ರಗಳ ನಿರ್ಮಾಣ (ಕಂಡಿಕೆ 6.7.3 ಮತ್ತು 7.5.2), ನೈರ್ಮಲ್ಯೀಕರಣಕ್ಕಾಗಿ ಒಗ್ಗೂಡಿಸುವಿಕೆ (ಸ್ವಚ್ ಭಾರತ್ ಅಭಿಯಾನದಡಿ ವೈಯಕ್ತಿಕ ಶೌಚಾಲಯಗಳ ನಿರ್ಮಾಣ (ಕಂಡಿಕೆ 7.5.3) ಹಾಗೂ ಘನ/ದ್ರವ ತ್ಯಾಜ್ಯ ನಿರ್ವಹಣೆ (ಕಂಡಿಕೆ 7.9 ರಲ್ಲಿ), ಶಾಲಾ ಶೌಚಾಲಯಗಳ ನಿರ್ಮಾಣ (ಕಂಡಿಕೆ 7.5.4) ಬಗ್ಗೆ ತಿಳಿಸಲಾಗಿದೆ. ಪ್ರಧಾನ ಮಂತ್ರಿ ಆವಾಸ್ ಯೋಜನೆ ಅಥವಾ ಇತರೆ ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಸತಿ ಯೋಜನೆಗಳಡಿ ಮಂಜೂರಾದ ಗ್ರಾಮೀಣ ಮನೆಗಳಿಗೆ ಶೌಚಾಲಯಗಳ ನಿರ್ಮಾಣ (ಕಂಡಿಕೆ 7.5.5), ಅರಣ್ಯೀಕರಣ, ಗಿಡ ನೆಡುವುದು ತೋಟಗಾರಿಕೆ ಮತ್ತು ರೇಷ್ಮೆ ಚಟುವಟಿಕೆಗಳ ಜೊತೆಗೆ ಒಗ್ಗೂಡಿಸುವಿಕೆ (ಕಂಡಿಕೆ 6.7.3 ಮತ್ತು 7.6.1), ಗ್ರಾಮೀಣ ಸಂತೆ (ಕಂಡಿಕೆ 7.7 b), ಗ್ರಾಮೀಣ ಆಹಾರ ಗೋದಾಮುಗಳು (ಕಂಡಿಕೆ 7.7 d) , ಆಟದ ಮೈದಾನ (ಕಂಡಿಕೆ 7.7 g) , ಗ್ರಾಮೀಣ ಸಂಪರ್ಕ ರಸ್ತೆಗಳ ನಿರ್ಮಾಣ (ಕಂಡಿಕೆ 7.7 i) ದಂತಹ ಗ್ರಾಮೀಣ ಮೂಲ ಸೌಕರ್ಯಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ತೆಗೆದುಕೊಳ್ಳಲು ವಿಶೇಷ ಆದ್ಯತೆ ನೀಡಲು ಸೂಚಿಸಲಾಗಿರುತ್ತದೆ. ಸಣ್ಣ ನೀರಾವರಿ ಇಲಾಖೆಯು ಮಹಾತ್ಮ ಗಾಂಧಿ ನರೇಗಾ ಒಗ್ಗೂಡಿಸುವಿಕೆ ಯೋಜನೆಯಡಿ ಕಂಡಿಕೆ 7.4.10 ರಲ್ಲಿ ತಿಳಿಸಿರುವ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶವಿರುತ್ತದೆ. ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಈಗಾಗಲೇ ನಿರ್ಮಿಸಲಾದ ವೈಯಕ್ತಿಕ ಕೃಷಿಹೊಂಡಗಳಲ್ಲಿ ಹಾಗೂ 2018–19 ನೇ ಸಾಲಿನಲ್ಲಿ ನರೇಗಾ ಯೋಜನೆಯಡಿ ಹೊಸದಾಗಿ ನಿರ್ಮಿಸುವ ಮೀನುಕೃಷಿ ಹೊಂಡಗಳಲ್ಲಿ (ನೀಲಿ ಕ್ರಾಂತಿ) ಮೀನುಕೃಷಿಯನ್ನು ಅಭಿವೃದ್ಧಿ ಪಡಿಸಲು (ಕಂಡಿಕೆ 7.8ರಲ್ಲಿ ವಿವರಿಸಲಾಗಿದೆ) ಅವಕಾಶ ಕಲ್ಪಿಸಲಾಗಿದೆ. ಕಂಡಿಕೆ 7.4.1 ರಲ್ಲಿ ನೈಸರ್ಗಿಕ ಸಂಪನ್ಮೂಲ ನಿರ್ವಹಣೆಗಾಗಿ MISSION WATER CONSERVATION (MWC) ಕೇಂದ್ರ ಅಂತರ್ಜಲ ನಿಗಮ ಗುರುತಿಸಿರುವ 2129 Blocks, Critical Blocks, Irrigation deprived Districts, ಗಳಲ್ಲಿ ನೀರು ನಿರ್ವಹಣಾ ಕಾಮಗಾರಿಗಳನ್ನು ಒಗ್ಗೂಡಿಸುವಿಕೆಯಡಿ ಅನುಷ್ಠಾನಿಸಲು ಹೆಚ್ಚಿನ ಆದ್ಯತೆ ನೀಡಲಾಗಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಅಧಿನಿಯಮದ–1 ರಲ್ಲಿ ಅವಕಾಶ ಮಾಡಲಾಗಿರುವ 260 ಕಾಮಗಾರಿಗಳಲ್ಲಿ (Permissible work) 181 ಕಾಮಗಾರಿಗಳು ನೈಸರ್ಗಿಕ ಸಂಪನ್ಮೂಲ ನಿರ್ವಹಣಾ ಕಾಮಗಾರಿಗಳಾಗಿದ್ದು, ಇದರಲ್ಲಿ 84 ಕಾಮಗಾರಿಗಳು ನೀರು ನಿರ್ವಹಣಾ ಕಾಮಗಾರಿಗಳಾಗಿರುತ್ತದೆ. ಬಡತನ ರೇಖೆಯ ಕುಟುಂಬಗಳು, ಸುಸ್ಥಿರ ಕೃಷಿ ಜೀವನಾಧಾರ ನಡೆಸಲು ಅನುಕೂಲವಾಗುವಂತೆ (ಕಂಡಿಕೆ–7.3ರಲ್ಲಿ ವಿವರಿಸಲಾಗಿದೆ) 164 ಕೃಷಿ ಹಾಗೂ ಕೃಷಿ ಸಂಬಂಧಿತ ಚಟುವಟಿಕೆಗಳನ್ನು ಅನುಷ್ಠಾನಿಸಲು ಅವಕಾಶ ಮಾಡಲಾಗಿದೆ.

4. 2018–19 ನೇ ಸಾಲಿನ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಒಗ್ಗೂಡಿಸುವಿಕೆ ಯೋಜನೆಯನ್ನು ಇತರೆ ಇಲಾಖೆಯ ಕಾರ್ಯಕ್ರಮಗಳೊಂದಿಗೆ ಪರಿಶೀಲಿಸಲಾಗಿರುತ್ತದೆ ಹಾಗೂ ಪ್ರತಿಯೊಂದು ಇಲಾಖೆಗೂ ತಾಂತ್ರಿಕ ಒಗ್ಗೂಡಿಸುವಿಕೆ (ಇತರೆ ಅನುಷ್ಠಾನ ಇಲಾಖೆಗಳು ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ತೆಗೆದುಕೊಂಡ ಕಾಮಗಾರಿಗಳು) ಮತ್ತು ಆರ್ಥಿಕ ಒಗ್ಗೂಡಿಸುವಿಕೆಯ (ಉದ್ಯೋಗ ಖಾತರಿ ಯೋಜನೆ ಹಾಗೂ ಇಲಾಖಾ ಕಾರ್ಯಕ್ರಮಗಳ ಅನುದಾನ ಜೊತೆಗೂಡಿ) ಪ್ರಗತಿಯನ್ನಾಧರಿಸಿ 2019–20ನೇ ಸಾಲಿಗೆ ಅನುದಾನ ಹಂಚಿಕೆ ಮಾಡಲಾಗಿರುತ್ತದೆ.

**ಮೇಲಿನ ಅಂಶಗಳನ್ನು ಪರಿಗಣಿಸಿ, ಒಗ್ಗೂಡಿಸುವಿಕೆಯ ಅನುಷ್ಠಾನಕ್ಕೆ ಆದೇಶ ಹೊರಡಿಸಲು ಸರ್ಕಾರವು ನಿರ್ಧರಿಸಿದೆ. ಅಂತೆಯೇ ಈ ಕೆಳಕಂಡ ಆದೇಶ**

**ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 229 ಉಖಾಯೋ 2018, ಬೆಂಗಳೂರು ದಿನಾಂಕ: 12.07.2019**

## 2019–20ನೇ ಸಾಲಿನ ಮಹಾತ್ಮ ಗಾಂಧಿ ನರೇಗಾ ಯೋಜನೆ ಇಲಾಖಾವಾರು ಒಗ್ಗೂಡಿಸುವಿಕೆ ಕ್ರಿಯಾ ಯೋಜನೆ

(ಮೊತ್ತ ರೂ.ಕೋಟಿಗಳಲ್ಲಿ)

| ಕ್ರ ಸಂ | ಇಲಾಖೆ | ಮಹಾತ್ಮ ಗಾಂಧಿ ನರೇಗಾ ಅನುದಾನ | ಇಲಾಖಾ ಅನುದಾನ | ಒಟ್ಟು ಮೊತ್ತ | ಸೃಜಿಸ ಬಹುದಾದ ಮಾನವ ದಿನಗಳು (ಸಂಖ್ಯೆಗಳಲ್ಲಿ) |
|---|---|---|---|---|---|
| 1 | ಅರಣ – ಸಾಮಾಜಿಕ | 200.00 | 20.00 | | 220.00 |
| 2 | ಕೃಷಿ ಇಲಾಖೆ | 7.25 | 0.55 | 7.80 | 45,000 |
| 3 | ಕೃಷಿ ಜಲಾನಯನ ಇಲಾಖೆ | 151.00 | 100.00 | 251.00 | 30,20,000 |
| 4 | ತೋಟಗಾರಿಕೆ | 118.34 | 32.30 | 150.64 | 30,08,506 |
| 5 | ರೇಷ್ಮೆ | 93.15 | 8.78 | 101.93 | 24,11,500 |
| 6 | ಪಂಚಾಯತ್ ರಾಜ್ ಇಂಜಿನೀಯರಿಂಗ್ | 150.00 | 25.00 | 175.00 | 36,14,458 |
| 7 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 32.10 | 32.10 | 64.20 | 6,00,000 |
| 8 | ಪಶು ಸಂಗೋಪನೆ | 182.14 | 0.00 | 182.14 | 25,35,932 |
| 9 | ಎನ್.ಆರ್.ಎಲ್.ಎಂ | 48.19 | 0.00 | 48.19 | 3,69,870 |
| 10 | ವಸತಿ | 498.00 | 2276.95 | 2774.95 | 2,00,00,000 |
| 11 | ಶಿಕ್ಷಣ | 3.80 | 5.42 | 9.22 | 1,80,000 |
| **ಒಟ್ಟು** | | **3 1483.97** | **4 2501.10** | **3985.07** | **6 40835443** |

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, 2019-20ನೇ ಸಾಲಿಗೆ ಇಲಾಖಾವಾರು ಮಹಾತ್ಮ ಗಾಂಧಿ ನರೇಗಾ ಯೋಜನೆಯೊಂದಿಗೆ ಇಲಾಖೆಗಳ ಯೋಜನೆಗಳಿಗೆ ಮೀಸಲಿರಿಸಿದ ಅನುದಾನದೊಂದಿಗೆ ಒಗ್ಗೂಡಿಸುವಿಕೆ ಮೂಲಕ ಯೋಜನೆಯನ್ನು ಕೆಳಗಿನ ಕೋಷ್ಟಕದಲ್ಲಿ ಇಲಾಖಾವಾರು ನೀಡಲಾಗಿರುವ ಆರ್ಥಿಕ, ಭೌತಿಕ ವಿವರಗಳು ಮತ್ತು ಚಟುವಟಿಕೆಗಳಂತೆ ಹಾಗೂ ನಂತರ ನಮೂದಿಸಲಾದ ನಿಭಂದನೆಗಳು ಮತ್ತು ಷರತ್ತುಗಳ ಅನುಪಾಲನೆಗೆ ಒಳಪಟ್ಟು ಅನುಷ್ಠಾನಿಸಲು ಆದೇಶಿಸಿದೆ.

**ನಿಬಂಧನೆಗಳು ಮತ್ತು ಷರತ್ತುಗಳು:**

i) ಗ್ರಾಮೀಣಾಭಿವೃದ್ಧಿ ಆಯುಕ್ತಾಲಯವು ಮಹಾತ್ಮ ಗಾಂಧಿ ನರೇಗಾ ಯೋಜನೆಯನ್ನು ಅನುಷ್ಠನಾಗೊಳಿಸುವ ಅನುಷ್ಠಾನ ಇಲಾಖೆಗಳ ಅಥವಾ ಯಾವ ಇಲಾಖೆಯು ಕಾಮಗಾರಿಗಳನ್ನು (ಅನುಷ್ಠಾನ ಇಲಾಖೆ / ಗ್ರಾಮ ಪಂಚಾಯಿತಿಗಳು) ಅನುಷ್ಠಾನ ಮಾಡಬೇಕು, ಆ ಇಲಾಖೆಗಳ ಸಮಾಲೋಚನೆಯೊಂದಿಗೆ ಈ ಕೆಳಕಂಡಂತೆ ಕ್ರಮ ವಹಿಸುವುದು:

1. ಪ್ರತಿ ಕಾರ್ಯಕ್ರಮಕ್ಕೂ ಸ್ಪಷ್ಟವಾದ ಒಗ್ಗೂಡಿಸುವಿಕೆ ಮಾರ್ಗಸೂಚಿಗಳನ್ನು ಹೊರಡಿಸುವುದು.
2. ಪ್ರತಿ ಒಗ್ಗೂಡಿಸುವಿಕೆ ಕಾಮಗಾರಿಗಳಿಗೆ ಮಾದರಿ ಖರ್ಚು ವೆಚ್ಚದ ಅಂದಾಜುಗಳನ್ನು ತಯಾರಿಸುವುದು.
3. ಅನುಷ್ಠಾನಾಧಿಕಾರಿಗಳಿಗೆ Digital Signature Certificate (DSCs) ನೀಡುವುದು.4. ಕಾರ್ಯಕ್ರಮ ಅನುಷ್ಠಾನ ಸಂಸ್ಥೆಗಳಿಗೆ (PIAs), NREGASoft and end2end ರವರು ಲಾಗಿನ್ ಸೌಲಭ್ಯ ನೀಡುವುದು.
5. ಸಂಬಂಧಪಟ್ಟ ಸಿಬ್ಬಂದಿಗೆ ತರಬೇತಿ ವ್ಯವಸ್ಥೆ ಮಾಡುವುದು.

ii) ಮಹಾತ್ಮ ಗಾಂಧಿ ನರೇಗಾ ಯೋಜನೆಯನ್ನು ಅನುಷ್ಠನಾಗೊಳಿಸುವ ಅಥವಾ ಯಾವ ಇಲಾಖೆಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತದೋ, ಆ ಅನುಷ್ಠಾನ ಇಲಾಖೆಗಳು ಕಾಮಗಾರಿಯ ಸ್ಥಳಗಳನ್ನು ಗುರುತಿಸುವುದು, ಕ್ರಿಯಾ ಯೋಜನೆ ತಯಾರಿಸುವುದು, end2endnrega ನಲ್ಲಿ ದಾಖಲಿಸುವುದು ಮತ್ತು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಸಲ್ಲಿಸುವುದು. ಅವರು ಸದರಿ ಕ್ರಿಯಾ ಯೋಜನೆಗಳನ್ನು ಗ್ರಾಮ ಸಭೆಯ ಮುಂದಿಟ್ಟು ಅನುಮೋದನೆ ಪಡೆದು ಕ್ರಿಯಾ ಯೋಜನೆಯನ್ನು ಸಲ್ಲಿಸಿದ 15 ದಿನಗಳೊಳಗೆ ಅನುಮೋದನೆಯಾದ ಬಗ್ಗೆ ಸಂಬಂಧಪಟ್ಟವರಿಗೆ ತಿಳಿಸುವುದು.

iii) ವೈಯಕ್ತಿಕ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪ್ರಥಮ ಆದ್ಯತೆಯನ್ನು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದವರಿಗೆ ನೀಡಿ ನಂತರ ಉಳಿದ ಅರ್ಹ ಫಲಾನುಭವಿಗಳಿಗೆ ಆದ್ಯತೆ ನೀಡುವುದು ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸ್ಥಾಪಿತವಾಗಿರುವ ತೋಟಕ್ಕೆ ಮಾತ್ರ 2 ಹಾಗೂ 3ನೇ ವರ್ಷ ತೋಟ ನಿರ್ವಹಣೆ ಕೈಗೊಳ್ಳಲಾಗಿದೆಯೇ ಎಂಬುದರ ಬಗ್ಗೆ ಅನುಷ್ಠಾನ ಅಧಿಕಾರಿಗಳು ಖಚಿತಪಡಿಸಿಕೊಳ್ಳುವುದು

ಅನುಷ್ಠಾನ ಅಧಿಕಾರಿಗಳು ಒಬ್ಬ ಫಲಾನುಭವಿಗೆ ಹೆಚ್ಚು ಸಹಾಯಧನ ಸೌಲಭ್ಯಕ್ಕೆ ಅವಕಾಶ ಕೊಡುವ ಮೊದಲು ಬೇರೆ ಯಾವ ಅರ್ಹ ಫಲಾನುಭವಿಯು ಈ ಸೌಲಭ್ಯದಿಂದ ವಂಚಿತರಾಗಿರುವುದಿಲ್ಲವೆಂದು ಖಚಿತಪಡಿಸಿಕೊಳ್ಳುವುದು. ಒಬ್ಬ ಫಲಾನುಭವಿಗೆ ಹೆಚ್ಚ ಸಹಾಯಧನ ಕೊಡುವ ಬದಲಾಗಿ, ಹೆಚ್ಚಿನ ಸಂಖ್ಯೆಯ ಫಲಾನುಭವಿಗಳಿಗೆ ಈ ಸೌಲಭ್ಯ ಕಲ್ಪಿಸಿಕೊಡಲು ಅನುವು ಮಾಡಿಕೊಡುವುದು ಸೂಕ್ತ. ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡಕ್ಕೆ ಆಧ್ಯತೆ ನೀಡುವುದು.

iv) ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪ್ರಧಾನ ಸುತ್ತೋಲೆ 2019-20ರ ಕಂಡಿಕೆ 7.4.12(III) ರ ಪ್ರಕಾರ ಒಬ್ಬ ವಯ್ಯಕ್ತಿಕ ಫಲಾನುಭವಿಗೆ ರೂ 2.00ಲಕ್ಷ ಮೀರದಂತೆ ವೆಚ್ಚ ಭರಿಸಬಹುದಾಗಿದೆ.

v) ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದಿಂದ ಹೊರಡಿಸಿರುವ ಸುತ್ತೋಲೆಯನುಸಾರ ಕಾಮಗಾರಿವಾರು ಕ್ರಿಯಾ ಯೋಜನೆಯ ಅನುಮೋದನೆ ಪಡೆದ ನಂತರ ಸಂಬಂಧಪಟ್ಟ ಅನುಷ್ಠಾನ ಇಲಾಖೆ / ಗ್ರಾಮ ಪಂಚಾಯಿತಿಯು ಸರ್ಕಾರದ ಆರ್ಥಿಕ ಅಧಿಕಾರ ಪ್ರತ್ಯಾಯೋಜಿತ ಪ್ರದತ್ತ ಅಧಿಕಾರದನ್ವಯ (ಅನುಷ್ಠಾನ ಇಲಾಖೆಗಳ ಪ್ರಕರಣದಲ್ಲಿ) ಕಾಮಗಾರಿಗಳ ಅಂದಾಜು ಪಟ್ಟಿ ತಯಾರಿಸುವುದು ಮತ್ತು ಮಂಜೂರಾತಿ ನೀಡುವುದು.

vi) ಪ್ರತಿಯೊಂದು ಕಾಮಗಾರಿಗಳಿಗೆ ಮಂಜೂರಾತಿ ಆದೇಶ ನೀಡಿದ ನಂತರ, ಅನುಷ್ಠಾನ ಇಲಾಖೆಗಳು /ಗ್ರಾಮ ಪಂಚಾಯಿತಿಗಳು ಋತುಮಾನ ಮತ್ತು ಕೂಲಿಕಾರರ ಲಭ್ಯತೆ ಅನುಸರಿಸಿ ಕಾಮಗಾರಿಗಳನ್ನು ಪ್ರಾರಂಭಿಸುವುದು ಹಾಗೂ ಕಾಮಗಾರಿಗಳ ಪ್ರಗತಿಯನ್ನು NREGA Soft ನಲ್ಲಿ ನಮೂದಿಸುವುದು ಹಾಗೂ ಕೂಲಿಕಾರರಿಗೆ ಕೂಲಿಯನ್ನು ಮತ್ತು ಸರಬರಾಜುದಾರರಿಗೆ ಸಾಮಾಗ್ರಿ ವೆಚ್ಚವನ್ನು MGNREGA Single Ne-FMS / e-FMS System ಮೂಲಕ ಹಣ ಸಂದಾಯ ಮಾಡುವುದು. ಕಾಮಗಾರಿ ಪೂರ್ವದ, ಕಾಮಗಾರಿಗಳು ಚಾಲ್ತಿಯಲ್ಲಿರುವಾಗ ಹಾಗೂ ಕಾಮಗಾರಿ ಪೂರ್ಣಗೊಂಡ ಛಾಯಾ ಚಿತ್ರಗಳನ್ನು ಸಂಬಂಧಪಟ್ಟ ಕಾಮಗಾರಿಯ ಕಡತದಲ್ಲಿರಿಸುವುದು ಮತ್ತು ಪೂರ್ಣಗೊಂಡ ನಂತರ Geo-tagged photo ಗಳನ್ನು ಪಡೆದು ಭುವನ್ ಸಾಫ್ಟ್‌ವೇರ್‌ನಲ್ಲಿ ಇಂಧೀಕರಿಸುವುದು.

vii) ಮಹಾತ್ಮ ಗಾಂಧಿ ನರೇಗಾ ಯೋಜನೆಯ ಉದ್ದೇಶವು ಕೂಲಿ ಬಯಸುವ ಗ್ರಾಮೀಣಾ ಪ್ರದೇಶದ ವಯಸ್ಕರಿಗೆ ಬೇಡಿಕೆ ಮೇರೆಗೆ ಕೂಲಿ ಉದ್ಯೋಗ ಒದಗಿಸುವುದು ಆಗಿರುವುದರಿಂದ ಅವರಿಗೆ ಉದ್ಯೋಗ ಚೀಟಿಯನ್ನು ನೀಡಲು ಮತ್ತು ಕೂಲಿಕಾರರನ್ನು ಸಂಘಟಿಸುವ ಸಲುವಾಗಿ IEC ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು ಮತ್ತು ಸರಿಯಾದ ಸಮಯಕ್ಕೆ ಕೂಲಿ ನೀಡುವುದನ್ನು ಖಾತರಿಪಡಿಸಿಕೊಳ್ಳಬೇಕಾಗಿರುತ್ತದೆ. ಅನುಷ್ಠಾನ ಇಲಾಖೆಗಳ ಪ್ರಕರಣಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಹಾಗೂ ಗ್ರಾಮ ಪಂಚಾಯಿತಿಗಳ ಪ್ರಕರಣಗಳಲ್ಲಿ ಗ್ರಾಮ ಮಟ್ಟದಲ್ಲಿ ಆರ್ಥಿಕ ವರ್ಷದಲ್ಲಿ ಕೂಲಿ ಮತ್ತು ಸಾಮಾಗ್ರಿ ವೆಚ್ಚಗಳು 60:40 ರ ಪ್ರಮಾಣದಲ್ಲಿಯೇ ಇರುವುದನ್ನು ದೃಢಪಡಿಸಿಕೊಳ್ಳತಕ್ಕದ್ದು.

viii) ಪ್ರತಿಯೊಂದು ಕಾಮಗಾರಿಗೂ ಪ್ರತ್ಯೇಕ ಕಡತವನ್ನು ತೆರೆದು, ಅದಕ್ಕೆ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಒಂದು ವಿಶೇಷ ಕಾಮಗಾರಿ ಕೋಡ್ (work code) ನ್ನು ಆಸ್ತಿ ಸೃಜನೆ ವಹಿಯಲ್ಲಿನ ಸೂಚನೆಯಂತೆ ನೀಡುವುದು ಮತ್ತು ಮುಂದಿನ ಆರ್ಥಿಕ ವರ್ಷದ ಮೊದಲನೇ ತ್ರೈಮಾಸಿಕದಲ್ಲಿಯೇ ಲೆಕ್ಕ ಪರಿಶೋಧನೆಗೊಳಪಡಿಸಬೇಕಾದ ಜವಾಬ್ದಾರಿ ಇರುತ್ತದೆ.

ix) ಅರಣ್ಯ, ಕೃಷಿ, ತೋಟಗಾರಿಕೆ, ರೇಷ್ಮೆ ಮತ್ತು ಪಿ.ಆರ್.ಇ.ಡಿ. ಇಲಾಖೆಯ ತಾಲ್ಲೂಕು ಅಧಿಕಾರಿಗಳಿಗೆ ಈ ಯೋಜನೆಯ ಅನುಷ್ಠಾನ ಇಲಾಖೆಯ ಕಾರ್ಯಾಕ್ರಮ ಅಧಿಕಾರಿಗಳನ್ನಾಗಿ ಘೋಷಿಸಲಾಗಿದೆ. ಆದರಿಂದ, ಸದರಿ ತಾಲ್ಲೂಕು ಅಧಿಕಾರಿಗಳ ಲಾಗಿನ್‌ನಿಂದ (ಎ) ಕಾಮಗಾರಿ ಕೋಡ್ ಸೃಜನೆಗಾಗಿ ಅಂದಾಜು ಅಂತಿಮಗೊಳಿಸುವ (ಬಿ) ಕೂಲಿ ಬೇಡಿಕೆ ಪಡೆದ ಮತ್ತು ಕಾಮಗಾರಿ ಹಂಚಿಕೆಯಾದ ನಂತರ ಜಓಂಖ (ಹಾಜರಾತಿ ಪಟ್ಟಿ) ಸೃಜಿಸುವ (ಸಿ) ಸಾಮಾಗ್ರಿ ಬಿಲ್ಲು ಸೃಜಿಸುವಂತಹ ಅವಕಾಶ ಕಲ್ಪಿಸಿಕೊಡಲಾಗಿದೆ. ಈ ಅನುಷ್ಠಾನ ಇಲಾಖೆಗಳು ಈ ಉದ್ದೇಶಗಳಿಗಾಗಿ, ಪಂಚಾಯತ್ ರಾಜ್ ಸಂಸ್ಥೆಗಳು / ಗ್ರಾಮ ಪಂಚಾಯತಿಗಳು / ತಾಲ್ಲೂಕು ಪಂಚಾಯಿತಿಗಳ ಮೇಲೆ ಅವಲಂಬಿಸಬೇಕಾಗಿರುವುದಿಲ್ಲ. ಹಾಗಾಗಿ ಇವರೇ ಸ್ವತಂತ್ರವಾಗಿ ಉದ್ಯೋಗ ಚೀಟಿ ಹೊಂದಿರುವ ಕೂಲಿಕಾರರನ್ನು ಸಂಘಟಿಸಿ, ಅವರ ಬೇಡಿಕೆಯನ್ನು ಪಡೆದು, ಮಹಾತ್ಮ ಗಾಂಧಿ ನರೇಗಾ ಯೋಜನೆಯ ಕಾಮಗಾರಿಗಳನ್ನು ಕಾರ್ಯಗತಗೊಳಿಸುವುದು. ಆದಾಗ್ಯೂ ಕೂಲಿಕಾರರಿಗೆ ಉದ್ಯೋಗ ಚೀಟಿಗಳನ್ನು ವಿತರಿಸುವ ಮತ್ತು ಗ್ರಾಮ ಸಭೆಗಳಿಂದ ಕ್ರಿಯಾ ಯೋಜನೆಗೆ ಅನುಮತಿ ಪಡೆಯುವ ಕ್ರಮಗಳು ಹಾಗೂ ಜಿಲ್ಲಾ ಕಾರ್ಯಾಕ್ರಮ ಸಮನ್ವಯಾಧಿಕಾರಿಯಿಂದ (CEO) ಅನುಮೋದನೆ ಪಡೆಯುವುದು ಕಡ್ಡಾಯ ಕ್ರಮವಾಗಿರುತ್ತದೆ.

ಉಳಿದಂತೆ ಸಣ್ಣ ನೀರಾವರಿ ಇಲಾಖೆ ಮತ್ತು ಮೀನುಗಾರಿಕೆ ಇಲಾಖೆ ಇವುಗಳಿಗೆ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದಕ್ಕೆ ತಾಲ್ಲೂಕು ಪಂಚಾಯಿತಿಯ

ಕಾರ್ಯನಿರ್ವಾಹಕ ಅಧಿಕಾರಿಯು ಕಾರ್ಯಕ್ರಮ ಅಧಿಕಾರಿಯಾಗಿರುವುದರಿಂದ ಅವರಿಂದ ಅಂದಾಜು ಪತ್ರಿಕೆ ಅಂತಿಮಗೊಳಿಸಿಕೊಳ್ಳುವ (estimate freezing), eNMR (ಹಾಜರಾತಿ ಪಟ್ಟಿ) ಸೃಜಿಸುವ ಹಾಗೂ ಸಾಮಾಗ್ರಿ ಬಿಲ್ಲು ಸೃಜಿಸುವ ಕ್ರಮಗಳಿಗೆ ಅನುಮೋದನೆ ಪಡೆಯುತ್ತಿರುವ ವಿಧಾನವನ್ನೇ ಮುಂದುವರಿಸುವುದು. ಈ ಇಲಾಖೆಗಳು ಕಾಮಗಾರಿಗಳ ಪ್ರಗತಿಯನ್ನು NREGASoft ನಲ್ಲಿ ಆರೋಹಿಸುವುದು ಮತ್ತು ಅವರಿಗೆ ನೀಡಿರುವ ಆಖಳ ಬಳಸಿಕೊಂಡು NREGASoft ಮೂಲಕ ಹಣ ಸಂದಾಯ ಮಾಡಲು ಕ್ರಮ ವಹಿಸುವುದು.

x) ಮಹಾತ್ಮ ಗಾಂಧಿ ನರೇಗಾ ಯೋಜನೆ ಮತ್ತು ಇಲಾಖೆಯ ಕಾರ್ಯಕ್ರಮದಡಿ ಆರ್ಥಿಕ ಒಗ್ಗೂಡಿಸುವಿಕೆಯಾಗಿರುವ ಕಾಮಗಾರಿ ಪ್ರಕರಣದಲ್ಲಿ ಎಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆ ಅನುಷ್ಠಾನಗೊಳಿಸುವ ಕಾರ್ಯಕ್ರಮ ಅನುಷ್ಠಾನ ಸಂಸ್ಥೆಯ ಮೂಲಕ ಅನುಷ್ಠಾನ ಮಾಡಲಾಗುತ್ತಿದೆ, ಆ ಸಂದರ್ಭದಲ್ಲಿ ಇಲಾಖೆಯೇ ಒಗ್ಗೂಡಿಸುವಿಕೆಯ ಮೊತ್ತವನ್ನು SEG ಈ ನಿಧಿಗೆ ವರ್ಗಾಯಿಸುವುದು ಅಥವಾ ನರೇಗಾ ಯೋಜನೆಯ ಮೊತ್ತಕ್ಕೆ ಒಂದು ಮತ್ತು ಇಲಾಖೆಯ ಯೋಜನೆಯ ಮೊತ್ತಕ್ಕೆ ಒಂದರಂತೆ ಪ್ರತ್ಯೇಕವಾಗಿ ಎರಡು ಅಂದಾಜುಗಳನ್ನು ತಯಾರಿಸಿ ಸಂಬಂಧಪಟ್ಟ ಕಾರ್ಯಕ್ರಮದ ಮಾರ್ಗಸೂಚಿಗಳನ್ವಯ ಅಂದಾಜಿನಲ್ಲಿರುವಂತೆ ಕಾಮಗಾರಿಯನ್ನು ಕಾರ್ಯಗತಗೊಳಿಸುವುದು.

xi) ಮಹಾತ್ಮ ಗಾಂಧಿ ನರೇಗಾ ಯೋಜನೆಯ ಕಾಮಗಾರಿಗಳನ್ನು ಯಾವ ಇಲಾಖೆಗಳು ಅನುಷ್ಠಾನಗೊಳಿಸುತ್ತವೆಯೋ ಆ ಎಲ್ಲಾ ಅನುಷ್ಠಾನ ಇಲಾಖೆಗಳು ಅಥವಾ ಯಾವ ಇಲಾಖೆಗಳ ಕಾಮಗಾರಿಗಳನ್ನು ಅನುಷ್ಠಾನ ಇಲಾಖೆಗಳು / ಗ್ರಾಮ ಪಂಚಾಯಿತಿಗಳು ಅನುಷ್ಠಾನಗೊಳಿಸುತ್ತದೆಯೋ, ಅವುಗಳು ಮಹಾತ್ಮ ಗಾಂಧಿ ನರೇಗಾ ಯೋಜನೆಯ ಸಂಬಂಧಿಸಿದಂತೆ, ವಾರ್ಷಿಕ ಯೋಜನಾ ತಯಾರಿಕೆಯಲ್ಲಿ ಪಾಲ್ಗೊಳ್ಳುವುದು ಮತ್ತು ಒಗ್ಗೂಡಿಸುವಿಕೆಯ ಸಂಬಂಧದಲ್ಲಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ / ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆಯುವ ಜಿಲ್ಲಾ / ತಾಲ್ಲೂಕು ಮಟ್ಟದ ಒಗ್ಗೂಡಿಸುವಿಕೆ ಸಂಪನ್ಮೂಲ ಸಮೂಹದ ಸಭೆಯಲ್ಲಿ (Convergence Resource Group meetings) ಭಾಗವಹಿಸಿ ಕಾಮಗಾರಿಗಳನ್ನು ಗುರುತಿಸುವ, ಕ್ರಿಯಾ ಯೋಜನೆ ತಯಾರಿಸುವ, ಅವುಗಳಿಗೆ ಅನುಮೋದನೆ ನೀಡುವ, ಕಾರ್ಯಚರಣೆ ಪರಿಶೀಲಿಸುವ ಮತ್ತು ಮೇಲ್ವಿಚಾರಣೆ ನಡೆಸುವ ಪ್ರಕ್ರಿಯೆಗಳಲ್ಲಿ ಪಾಲ್ಗೊಳ್ಳುವುದು.

xii) ಒಗ್ಗೂಡಿಸುವಿಕೆಯ ಪ್ರತಿಯೊಂದು ಕಾಮಗಾರಿಗಳ ಪ್ರಗತಿಯನ್ನು ಸದರಿ ಕಾಮಗಾರಿಯ ಪ್ರಗತಿಯ ಗತಿಯನ್ನಾಧರಿಸಿ NREGASoft ನ MIS ನಲ್ಲಿ ನಮೂದಿಸುವುದು.

xiii) ಈ ಕಾಮಗಾರಿಗಳ ಅನುಷ್ಠಾನದಲ್ಲಿ ಫಲಾನುಭವಿಗಳ ಗುರುತಿಸುವಿಕೆ ಮತ್ತು ಆಯ್ಕೆ ಹಾಗೂ ಕಾಮಗಾರಿಗಳ ಆಯ್ಕೆ ಮತ್ತು ನಿರ್ವಹಣೆ ಸಂಬಂಧ ಸಲ್ಲಿಸುವ ದೂರುಗಳು ಓಂಬುಡ್ಸ್‌ಮನ್‌ಗಳ ವ್ಯಾಪ್ತಿ ಮತ್ತು ಸಾಮಾಜಿಕ ಪರಿಶೋಧನೆಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಮಹಾತ್ಮ ಗಾಂಧಿ ನರೇಗಾ ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸುವಲ್ಲಿ ಕೂಲಿಕಾರರನ್ನು ಸ್ಥಾನಪಲ್ಲಟ ಮಾಡುವ ಯಂತ್ರೋಪಕರಣಗಳ ಬಳಕೆ ಮತ್ತು ಗುತ್ತಿಗೆದಾರರನ್ನು ಬಳಸಿಕೊಳ್ಳುವುದಕ್ಕೆ ನಿಷೇಧಿಸಲಾಗಿದೆ.

xiv) ಪ್ರತಿ ಕಾಮಗಾರಿಗೆ ಪ್ರತ್ಯೇಕವಾದ ಕಡತವನ್ನು ನಿರ್ವಹಿಸುವುದು. ಸದರಿ ಕಡತದಲ್ಲಿ ಆಯುಕ್ತಾಲಯದಿಂದ ತಿಳಿಸಿದ 21 ದಾಖಲೆಗಳನ್ನು ನಿರ್ವಹಿಸುವುದು ಮತ್ತು ಪರಿವೀಕ್ಷಣಾ ಸಮಯದಲ್ಲಿ ಭೇಟಿ ನೀಡುವ ಅಧಿಕಾರಿಗಳಿಗೆ ಲಭ್ಯವಾಗಬೇಕು.

xv) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣಾ ಉದ್ಯೋಗ ಖಾತರಿ ಅಧಿನಿಯಮ, ಅನುಸೂಚಿ, ಕಾರ್ಯಚರಣೆ ಮಾರ್ಗಸೂಚಿಗಳು ಮತ್ತು ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ರಾಜ್ಯ ಸರ್ಕಾರ ಹಾಗೂ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದ ವತಿಯಿಂದ ಹೊರಡಿಸುವ ಸೂಚನೆಗಳನ್ವಯವೇ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಕಾಮಗಾರಿಗಳನ್ನು ಅನುಮೋದಿಸುವುದು ಮತ್ತು ಕಾರ್ಯಗತಗೊಳಿಸತಕ್ಕದ್ದು. ರಾಜ್ಯದಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಕಾರ್ಯಕ್ರಮ

ಅನುಷ್ಠಾನದ ಮೇಲ್ವಿಚಾರಣೆ ಮತ್ತು ಜವಾಬ್ದಾರಿಯು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದ್ದಾಗಿರುತ್ತದೆ.

xvi) ಮೇಲಿನ ಎಲ್ಲಾ ಸಂಬಂಧಪಟ್ಟ ಇಲಾಖೆಗಳು ಅವರವರ ಕ್ಷೇತ್ರಾಧಿಕಾರಿಗಳಿಗೆ ಈ ಸಂಬಂಧದಲ್ಲಿ ಅಗತ್ಯ ಮತ್ತು ಸೂಕ್ತ ಸೂಚನೆಗಳನ್ನು ಹೊರಡಿಸುವುದು. ಕಾಮಗಾರಿಗಳ ಭೌತಿಕ ಪರಿಶೀಲನೆ ಮತ್ತು ಆರ್ಥಿಕ ಪ್ರಗತಿ ಹಾಗೂ ಕಾಮಗಾರಿಗಳ ಗುಣಮಟ್ಟವನ್ನು ಪರಿಶೀಲಿಸಿ, ಈ ಸಂಬಂದಲ್ಲಿ ನಿಗಧಿತ ನಮೂನೆಯಲ್ಲಿ ಪ್ರಗತಿ ಪರಿಶೀಲನಾ ವರದಿಯನ್ನು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯಕ್ಕೆ ಪ್ರತಿ ತಿಂಗಳ 5 ನೇ ತಾರೀಖಿನೊಳಗೆ ಸಲ್ಲಿಸುವುದು.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**
**ಸಹಿ/–**
**(ಎಸ್.ರಂಗನಗೌಡ)**
**ಸರ್ಕಾರದ ಅಧೀನ ಕಾರ್ಯದರ್ಶಿ**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್**
**ಇಲಾಖೆ**



## ಗ್ರಾಮ ಪಂಚಾಯತಿ ಮಟ್ಟದಲ್ಲಿ ಕೆಡಿಪಿ ಸಭೆ



# KARNATAKA VIKAS : AUGUST 2019

A Monthly Magazine for Rural Development and Panchayath Raj Department, Government of Karnataka

Regd. KA / BGGPO / 2531 / 2018-20, License of Post "without Prepayment" WPP - 32

Date of Publication : 8th of Every Month.

RNI No: KAR KAN / 28103 / 1974 Total No. Pages 52, Posted at Bengaluru PSO, Mysore Road, Bengaluru on 11th, 19th, 23rd of every month.






Published & Owned by :
**DIRECTOR**
**(PANCHAYAT RAJ)**
Rural Development and
Panchayath Raj Department

Chief Editor
**Gagan A.S**

Place & Publication
**Karnataka Vikas**
No.309, 3rd Floor, Gate No.1
M.S.Building, Dr. Ambedkar Veedhi,
Bengaluru - 560 001.

Printed by
**LAVANYA MUDRANA**
No.19, 15th Cross, B.S.K. I Stage,
Bengaluru - 560 050
Mobile : 98450 63381

Price : ₹ 10.00
ಬೆಲೆ :